# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 31 ಸೋಮವಾರ 2022

ಸಂಪುಟ: 43 | ಸಂಚಿಕೆ: 194 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





# ಮೈಸೂರಿನ ಡಿ.ಮಾದೇಗೌಡ, ಪ್ರೊ.ಕೃಷ್ಣೇಗೌಡ, ಚಾ.ನಗರದ ಸೋಲಿಗರ ಮಾದಮ್ಮ, ಹಾಸನದ ಅ.ರಾ.ಮಿತ್ರ, ಕೊಡಗಿನ ಗಣೇಶ್ ತಿಮ್ಮಯ್ಯ ಸೇರಿ 67 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

## ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್, ಇಸ್ರೋ ಮಾಜಿ ನಿರ್ದೇಶಕ ಕೆ.ಶಿವನ್, ಚಿತ್ರನಟರಾದ ದತ್ತಣ್ಣ, ಅವಿನಾಶ್, ಸಿಹಿಕಹಿ ಚಂದ್ರು ಸಹ ಪ್ರಶಸ್ತಿಗೆ ಭಾಜನ


ಡಿ.ಮಾದೇಗೌಡ



ಪ್ರೊ.ಕೃಷ್ಣೇಗೌಡ


ಅ.ರಾ.ಮಿತ್ರ


ಮದನ್ ಗೋಪಾಲ್


ಕೆ.ಶಿವನ್


ಗಣೇಶ್ ತಿಮ್ಮಯ್ಯ


ದತ್ತಣ್ಣ


ಸಿಹಿಕಹಿ ಚಂದ್ರು


ಅವಿನಾಶ್

ಬೆಂಗಳೂರು, ಅ.30– 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರಿನವರಾದ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಖ್ಯಾತ ವಾಗ್ಮಿಯೂ ಆದ ಸಾಹಿತಿ ಪ್ರೊ.ಕೃಷ್ಣೇಗೌಡ, ಚಾಮರಾಜನಗರದ ಶ್ರೀಮತಿ ಸೋಲಿಗರ ಮಾದಮ್ಮ, ಕೊಡಗಿನ ಗಣೇಶ್ ತಿಮ್ಮಯ್ಯ, ಹಾಸನದ ಅ.ರಾ.ಮಿತ್ರ, ಇಸ್ರೋ ಮಾಜಿ ನಿರ್ದೇಶಕ ಕೆ.ಶಿವನ್, ನಿವೃತ್ತ ಐಎಎಸ್ ಅಧಿಕಾರಿ ಮದನಗೋಪಾಲ್ ಸೇರಿದಂತೆ 67 ಸಾಧಕರಿಗೆ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದೆ.

ರಾಜ್ಯೋತ್ಸವ ಪ್ರಶಸ್ತಿಗೆ ಸಮಾಜ ಸೇವಾ ಕ್ಷೇತ್ರದಲ್ಲಿ ಮೈಸೂರಿನ ಡಿ.ಮಾದೇಗೌಡ, ಸಾಹಿತ್ಯ ಕ್ಷೇತ್ರದಲ್ಲಿ ಪ್ರೊ.ಕೃಷ್ಣೇಗೌಡ, ಸಂಕೀರ್ಣ ಕ್ಷೇತ್ರದಲ್ಲಿ ಬೆಂಗಳೂರಿನ ಆರ್.ವಿ.ಸಂಸ್ಥೆಗಳ ಸುಬ್ಬರಾಮಶೆಟ್ಟಿ, ವಿದ್ವಾನ್ ಗೋಪಾಲ ಕೃಷ್ಣ ಶರ್ಮ, ಚಾಮರಾಜನಗರದ ಶ್ರೀಮತಿ ಸೋಲಿಗರ ಮಾದಮ್ಮ, ಸೈನಿಕ ಕ್ಷೇತ್ರದಲ್ಲಿ ಬೆಂಗಳೂರಿನ ಸುಬೇದಾರ್ ಬಿ.ಕೆ.ಕುಮಾರಸ್ವಾಮಿ, ಪತ್ರಿಕೋದ್ಯಮದಲ್ಲಿ ಬೆಂಗಳೂರಿನ ಹೆಚ್.ಆರ್.ಶ್ರೀಶಾ, ಗದಗದ ಜಿ.ಎಂ. ಶಿರಹಟ್ಟಿ, ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಇಸ್ರೋ ಮಾಜಿ ನಿರ್ದೇಶಕ ಕೆ.ಶಿವನ್, ರಾಯಚೂರಿನ ಡಾ.ಡಿ.ಆರ್.ಬಳೂರಗಿ, ಕೃಷಿ ಕ್ಷೇತ್ರದಲ್ಲಿ ಕೊಡಗಿನ ಗಣೇಶ್ ತಿಮ್ಮಯ್ಯ, ಚಿಕ್ಕಮಗಳೂರಿನ ಚಂದ್ರಶೇಖರ್ ನಾರಾಯಣಪುರ, ಪರಿಸರ ಕ್ಷೇತ್ರದಲ್ಲಿ ರಾಮನಗರದ ಸಾಲುಮರದ ನಿಂಗಣ್ಣ, ಪೌರಕಾರ್ಮಿಕ ಕ್ಷೇತ್ರದಲ್ಲಿ ವಿಜಯನಗರದ ಶ್ರೀಮತಿ ಮಲ್ಲಮ್ಮ ಹೂವಿನಹಡಗಲಿ, ಆಡಳಿತ ಕ್ಷೇತ್ರದಲ್ಲಿ ▶ 8ನೇ ಪುಟಕ್ಕೆ

### ಸಾಧನೆಯ ಸವಿ ಉಂಡಿದ್ದೇನೆ

“ಸಮಾಜ ಸೇವೆ ಕ್ಷೇತ್ರದಲ್ಲಿ ಪ್ರಶಸ್ತಿ ದೊರಕಿದಾಗ ಸಂತೋಷವಾಗುವುದು ಸಹಜ. ಅದರಂತೆ ನನಗೂ ಸಂತೋಷವಾಗಿದೆ. ಹಿಂದಿನಿಂದಲೂ ನಾನು ಸಾಧನೆಯ ಸವಿ ಉಂಡಿದ್ದೇನೆ. ಸರ್ಕಾರ ಇಂದು ಗುರುತಿಸಿದೆ ಅಷ್ಟೇ. ಮೈಸೂರಿನ ಆಶಾಮಂದಿರ ಯೋಜನೆಯಿಂದ ಇಡೀ ರಾಷ್ಟ್ರವೇ ನನ್ನನ್ನು ಗುರುತಿಸಿದೆ. 1987 ಅಂತರರಾಷ್ಟ್ರೀಯ ವಸತಿ ವರ್ಷ ಆಗ ವಿಶ್ವ ಸಂಸ್ಥೆ ಎಲ್ಲರಿಗೂ ಸೂರು ನೀಡಬೇಕು ಎಂದು ಕರೆನೀಡಿತ್ತು. ಅದನ್ನು ಸಾಧಿಸಿದ್ದು ಮೈಸೂರು ನಗರ ಮಾತ್ರ. ನಾಲ್ವಡಿ ಅವರ ವಿಶ್ವಸ್ಥ ಮಂಡಳಿಯವನಾಗಿ ಆ ಸಾಧನೆ ಮಾಡಿದ್ದೇನೆ. ಬಹುಶಃ ಆಗ ಹೆಚ್ಚು ಅಭಿನಂದನೆ ಬಂದಿತ್ತು. ಈಗ ಪ್ರಶಸ್ತಿ ನೀಡಿರುವುದಕ್ಕೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನಿರ್ಮಲ ಮನೆ ಯೋಜನೆ 2007ರಲ್ಲಿ ಘೋಷಣೆಯಾದ ನಂತರ ಮನೆ ಮನೆಗಳಿಗೆ ಹೋಗಿ ಕಸ ತೆಗೆದಿದ್ದೆ. ಮುಂದೆ ಮಾಡಲು ಇನ್ನೂ ಕೆಲಸಗಳಿವೆ.

–ಡಿ. ಮಾದೇಗೌಡ, ಮಾಜಿ ಎಂಎಲ್‌ಸಿ

### ಧನ್ಯತಾ ಭಾವ ಮೂಡಿಸಿದೆ

ಮೈಸೂರು, ಅ.30(ಜಿಎ)– ಜೀವನದಲ್ಲಿ ಕನ್ನಡವು ಎಲ್ಲವನ್ನು ಕೊಟ್ಟಿದ್ದು, ಅದರಂತೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ನನ್ನಲ್ಲಿ ಧನ್ಯತಾ ಭಾವ ಮೂಡುವುದರೊಂದಿಗೆ ಸಂತಸವಾಗಿದೆ ಎಂದು ರಾಜ್ಯೋತ್ಸವ ಪ್ರಶಸ್ತಿಗೆ ಸಾಹಿತ್ಯ ಕ್ಷೇತ್ರದಿಂದ ಭಾಜನರಾದ ಮೈಸೂರಿನ ಸಾಹಿತಿ, ವಾಗ್ಮಿ ಪ್ರೊ.ಕೃಷ್ಣೇಗೌಡ ಅವರು ‘ಮೈಸೂರು ಮಿತ್ರ’ನೊಂದಿಗೆ ಸಂತಸವನ್ನು ಹಂಚಿಕೊಂಡಿದ್ದಾರೆ.


ಪ್ರಶಸ್ತಿ ಲಭಿಸಿರುವುದರ ಕುರಿತು ಪ್ರತಿಕ್ರಿಯಿಸಿದ ಅವರು, ಇಲ್ಲಿಯವರೆಗೂ ನನ್ನ ಬದುಕನ್ನು ನಡೆಸಕೊಟ್ಟಿದ್ದು ಕನ್ನಡವೇ. ಜೀವನದಲ್ಲಿ ಎಲ್ಲವನ್ನು ಕೊಟ್ಟಿರುವುದು ಕನ್ನಡವೇ. ಮುಂದೆಯು ಕೊಡುತ್ತದೆ. ನಾನು ಒಬ್ಬ ಜವಾಬ್ದಾರಿಯುತ ನಾಗರಿಕನಾಗಿ ಬದುಕು ಸಾಗಿಸುತ್ತಿದ್ದೇನೆ. ಈಗ ಮತ್ತಷ್ಟು ಗೌರವದ ಬದುಕನ್ನು ಬದುಕಬೇಕು ಅಷ್ಟೇ. ಕರ್ನಾಟಕದ ಮತ್ತು ಕನ್ನಡ ಸೊಬಗು, ಸೌಂದರ್ಯ, ಇತಿಹಾಸವನ್ನು ಹೇಳುವ ಕಾರ್ಯವನ್ನು ಮುಂದುವರೆಸುತ್ತೇನೆ. ಮಾತು ಇರುವುದೇ ಹಂಚಿಕೊಳ್ಳಲು. ಸಮಾಜದಲ್ಲಿ ಅತೀ ಹೆಚ್ಚು ಮಾತನಾಡಲು ಅವಕಾಶವಿರುವುದು ಶಿಕ್ಷಕರಿಗೆ ಮಾತ್ರ ಆದ್ದರಿಂದ ಮಾತು ನಿರಂತರವಾಗಿರುತ್ತದೆ ಎಂದರು. ▶ 8ನೇ ಪುಟಕ್ಕೆ

## ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಸೇರಿ 10 ಸಂಸ್ಥೆಗಳಿಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಿನ ರಾಮಕೃಷ್ಣ ಆಶ್ರಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ 10 ಸಂಸ್ಥೆಗಳಿಗೆ ಅಮೃತ ಮಹೋತ್ಸವ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಘೋಷಿಸಿದೆ.

ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿಗೆ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ, ಗದಗದ ಲಿಂಗಾಯತ ಪ್ರಗತಿಶೀಲ ಸಂಸ್ಥೆ, ಹಾವೇರಿಯ ಅಗಡಿ ತೋಟ, ಬಾಗಲಕೋಟೆಯ ತಲಸೇಮಿಯಾ ಮತ್ತು ಹಿಮೋಫೀಲಿಯಾ ಸೊಸೈಟಿ, ಬೆಂಗಳೂರಿನ ಅಮೃತ ಶಿಶುನಿವಾಸ, ಸುಮನಾ ಫೌಂಡೇಷನ್, ಅನಾಥ ಮಕ್ಕಳ ಪುನರ್ವಸತಿ ಕೇಂದ್ರವಾದ ನೆಲೆ ಫೌಂಡೇಷನ್, ಮಂಗಳಮುಖಿ ಸಂಸ್ಥೆಯಾದ ನಮ್ಮನೆ–ಸುಮ್ಮನೆ ನಿರಾಶ್ರಿತರ ಆಶ್ರಮ, ದಕ್ಷಿಣ ಕನ್ನಡದ ಯುವ ವಾಹಿನಿ ಸಂಸ್ಥೆ, ಮಂಡ್ಯದ ಶ್ರೀ ಉಮಾ ಮಹೇಶ್ವರಿ ಹಿಂದುಳಿದ ವರ್ಗ ಅಭಿವೃದ್ಧಿ ಟ್ರಸ್ಟ್ ಅನ್ನು ಆಯ್ಕೆ ಮಾಡಲಾಗಿದೆ.

### ಮಹನೀಯರ ತ್ಯಾಗ, ಸೇವೆಯ ಫಲ


ಶ್ರೀ ಮುಕ್ತಿದಾನಂದಜಿ ಮಹಾರಾಜ್

ಮೈಸೂರು,ಅ.30(ಎಸ್‌ಬಿಡಿ)– ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಅಮೃತಮಹೋತ್ಸವ ರಾಜ್ಯ ಪ್ರಶಸ್ತಿಗೆ ಭಾಜನವಾಗಿರುವ ಹಿನ್ನೆಲೆಯಲ್ಲಿ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜಿ ಮಹಾರಾಜ್ ಸರ್ಕಾರಕ್ಕೆ ಧನ್ಯವಾದ ತಿಳಿಸಿದ್ದಾರೆ. ▶ 8ನೇ ಪುಟಕ್ಕೆ

## ಕನ್ನಡಿಗನ ಪರಿಸರ ಕಾಳಜಿ ಪ್ರಶಂಸಿಸಿದ ಪ್ರಧಾನಿ ಮೋದಿ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮನ್ ಕಿ ಬಾತ್‌ನಲ್ಲಿ ಕನ್ನಡಿಗ ಸುರೇಶ್‌ಕುಮಾರ್ ಅವರ ನಿಸ್ವಾರ್ಥ ಸೇವೆ ಮತ್ತು ಸಾಮಾಜಿಕ ಹಾಗೂ ಪರಿಸರ ಕಾಳಜಿಯನ್ನು ಮುಕ್ತಕಂಠದಿಂದ ಕೊಂಡಾಡಿದರು.

ಬೆಂಗಳೂರಿನ ಸಹಕಾರನಗರದ ನಿವಾಸಿಯಾಗಿರುವ ಸುರೇಶ್‌ಕುಮಾರ್ ಅವರು, ಪರಿಸರ ಕುರಿತು ಅತೀವ ಕಾಳಜಿ ತೋರಿಸಿದ್ದಾರೆ ಮತ್ತು ಅವರು ಕರ್ನಾಟಕದ ವೈಭವೋಪೇತ ಸಂಸ್ಕೃತಿಯ ಬಗ್ಗೆ ಹೆಮ್ಮೆ ಹೊಂದಿದ್ದಾರೆ ಎಂದು ಸುರೇಶ್ ಕುಮಾರ್ ಅವರ ಪರಿಶ್ರಮ ವನ್ನು ಶ್ಲಾಘಿಸಿದರು. 20 ವರ್ಷಗಳ ಹಿಂದೆ, ಸುರೇಶ್ ಅವರು ಕರ್ನಾಟಕದ ಬೆಂಗಳೂರಿನ ತಮ್ಮ ನಿವಾಸದ ಸುತ್ತಲಿನ ಕಾಡಿಗೆ ಜೀವ ತುಂಬಲು ನಿರ್ಧರಿಸಿದರು. ಅವರ ನಿರ್ಧಾರವು ಸವಾಲುಗಳಿಂದ ತುಂಬಿತ್ತು. ಆದರೆ, ಸುಮಾರು 20 ವರ್ಷಗಳ ಹಿಂದೆ ನೆಟ್ಟ ಸಸಿಗಳು ಈಗ 40 ಅಡಿ ಮರಗಳಾಗಿ ಮಾರ್ಪಟ್ಟಿವೆ. ▶ 6ನೇ ಪುಟಕ್ಕೆ

## ಪುಣ್ಯಸ್ಮರಣೆ ಬಳಿಕ ಅಪ್ಪು ಅಭಿಮಾನಿ ಆತ್ಮಹತ್ಯೆ


ಪುನೀತ್‌ರೊಂದಿಗೆ ಕಿರಣ್

ಮಂಡ್ಯ,ಅ.30–ನಟ ಪುನೀತ್ ರಾಜ್‌ಕುಮಾರ್ ಮೃತಪಟ್ಟು ಒಂದು ವರ್ಷ ಕಳೆದಿದ್ದರೂ ಅಭಿಮಾನಿಗಳ ನೋವು ಮಾತ್ರ ಕಡಿಮೆಯಾಗಿಲ್ಲ. ಶನಿವಾರವಷ್ಟೇ ಅಪ್ಪು ಪುಣ್ಯಸ್ಮರಣೆಯಲ್ಲಿ ಪಾಲ್ಗೊಂಡಿದ್ದ ಅಭಿಮಾನಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸ ಆನಂದೂರು ಗ್ರಾಮದಲ್ಲಿ ಶನಿವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗ್ರಾಮದ ಹರೀಶ್ ಎಂಬುವವರ ಪುತ್ರ 22 ವರ್ಷದ ಕಿರಣ್ ಶನಿವಾರ ರಾತ್ರಿ ತಮ್ಮ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಕಿರಣ್ ಅಪ್ಪು ಅವರ ಅಪ್ಪಟ ಅಭಿಮಾನಿಯಾಗಿದ್ದು, ತಮ್ಮ ನೆಚ್ಚಿನ ನಟನ ಪ್ರಥಮ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ತಾವೇ ಮುಂದೆ ನಿಂತು ಆಯೋಜಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಬಿಡುಗಡೆಯಾದ ಅಪ್ಪು ಅಭಿನಯದ ಕೊನೆಯ ಚಿತ್ರ ಗಂಧದ ಗುಡಿ ಸಿನಿಮಾದ 25 ಟಿಕೆಟ್‌ಗಳನ್ನು ತಂದು ಸ್ನೇಹಿತರಿಗೆ ನೀಡಿದ್ದರು. ಪುಣ್ಯ ಸ್ಮರಣೆ ಕಾರ್ಯಕ್ರಮ ಮುಗಿದ ಬಳಿಕ ಮನೆಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಕೆ.ಆರ್.ಎಸ್. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸೊಮಾಲಿಯಾದಲ್ಲಿ ಭೀಕರ ಕಾರು ಬಾಂಬ್ ಸ್ಫೋಟ

### ಕನಿಷ್ಠ 100 ಸಾವು, 300 ಜನರಿಗೆ ಗಾಯ



ಮೊಗದಿಶು, ಅ.30– ಸೊಮಾಲಿಯಾದ ರಾಜಧಾನಿಯ ಜನನಿಬಿಡ ಜಂಕ್ಷನ್‌ನಲ್ಲಿ ಶನಿವಾರ ನಡೆದ ಎರಡು ಕಾರು ಬಾಂಬ್ ಸ್ಫೋಟಗಳಲ್ಲಿ ಕನಿಷ್ಠ 100 ಜನರು ಮೃತಪಟ್ಟಿದ್ದಾರೆ. ಭೀಕರ ದಾಳಿಯಿಂದಾಗಿ ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಸೊಮಾಲಿಯಾದ ಅಧ್ಯಕ್ಷ ಹಸನ್ ಶೇಖ್ ಮೊಹಮ್ಮದ್ ತಿಳಿಸಿದ್ದಾರೆ.

ಐದು ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ ಟ್ರಕ್ ಬಾಂಬ್ ಸ್ಫೋಟದಲ್ಲಿ 500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಅದಾದ ಬಳಿಕ ನಡೆದ ಭೀಕರ ದಾಳಿ ಇದಾಗಿದೆ. ಸ್ಫೋಟಗಳಿಂದಾಗಿ ಸ್ಥಳದಲ್ಲಿ ಸುಮಾರು 300 ಜನರು ಗಾಯಗೊಂಡಿದ್ದಾರೆ. ಎಲ್ಲಾ ಗಾಯಾಳುಗಳನ್ನು ಚಿಕಿತ್ಸೆಗಾಗಿ ದೇಶದ ಹೊರಗೆ ಕಳುಹಿಸಲು ▶ 8ನೇ ಪುಟಕ್ಕೆ

### ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿಗಾಗಿ ಮೈಸೂರಲ್ಲಿ

## ಮಹಿಳೆಯರ ವರ್ಣರಂಜಿತ ಸ್ಯಾರಿ ವಾಕಥಾನ್

ಮೈಸೂರು,ಅ.30(ಎಂಟಿವೈ)– ಮಹಿಳೆಯರನ್ನು ಕಾಡುತ್ತಿರುವ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ವಿ–ಸಖಿ ಸಂಸ್ಥೆ ಭಾನುವಾರ ಆಯೋಜಿಸಿದ್ದ ಸ್ಯಾರಿ ವಾಕಥಾನ್‌ನಲ್ಲಿ ನೂರಾರು ಮಹಿಳೆಯರು ಸೀರೆಯುಟ್ಟು ವಾಕಥಾನ್‌ನಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ವಿ–ಸಖಿ, ಶಕ್ತಿ, ರೋಟರಿ ಮೈಸೂರು ಈಸ್ಟ್ ಹಾಗೂ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ಆಯೋಜಿಸಿದ್ದ ಸ್ಯಾರಿ ವಾಕಥಾನ್‌ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ನಿಶಾನೆ ಪ್ರದರ್ಶಿಸಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲು ಮುಂದಾಗಿರುವುದು ಶ್ಲಾಘನೀಯ. ಎಲ್ಲಾ ವರ್ಗದ ಮಹಿಳೆಯರಿಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಶಕ್ತಿ ಸಂಸ್ಥೆಯ ಸಂಸ್ಥಾಪಕಿ ಡಾ.ರಮ್ಯಾ ಮಾತನಾಡಿ, ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಕಂಡು ಬರುತ್ತಿದೆ. ಇದರಿಂದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್‌ಗೆ ಮಾಹಿತಿ ನೀಡುವ ಮೂಲಕ ಅವರಿಗೆ ಆರೋಗ್ಯ ಕಾಪಾಡಿಕೊಳ್ಳುವ ಅರಿವು ಮೂಡಿಸಬೇಕು. 40 ವರ್ಷ ಮೇಲ್ಪಟ್ಟ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಕಾಡುತ್ತಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ 40 ವರ್ಷ ಮೇಲ್ಪಟ್ಟ ಮಹಿಳೆಯರು ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಅಲ್ಲದೇ, ತಿಂಗಳಿಗೊಮ್ಮೆ ಸ್ತನ ಪರೀಕ್ಷೆ ಮಾಡಿಸಿಕೊಳ್ಳುವುದು ಸೂಕ್ತ ಎಂದರು.


ಸ್ಯಾರಿ ವಾಕಥಾನ್‌ಗೆ ಚಾಲನೆ ನೀಡುವ ಮುನ್ನ ಸಂಗೀತಕ್ಕೆ ಹೆಜ್ಜೆ ಹಾಕುತ್ತಿರುವ ಮಹಿಳೆಯರು.

**ಸ್ಯಾರಿ ವಾಕಥಾನ್:** ವೇದಿಕೆ ಕಾರ್ಯಕ್ರಮದ ಬಳಿಕ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಸ್ಯಾರಿ ವಾಕಥಾನ್ ಕೆ.ಆರ್.ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ಗನ್‌ಹೌಸ್, ಬಿ.ಎನ್ ರಸ್ತೆ, ಹಾರ್ಡಿಂಜ್ ವೃತ್ತದ ಮೂಲಕ ▶ 6ನೇ ಪುಟಕ್ಕೆ



## ಗುಜರಾತ್‌ನಲ್ಲಿ ತೂಗು ಸೇತುವೆ ಕುಸಿದು 90 ಮಂದಿ ಸಾವು



**ಗಾಂಧೀನಗರ:** ಈಚೆಗಷ್ಟೇ ನವೀಕರಣಗೊಂಡು ಉದ್ಘಾಟನೆಯಾಗಿದ್ದ ಗುಜರಾತ್‌ನ ತೂಗು ಸೇತುವೆ ಕುಸಿತದಿಂದಾಗಿ ಈವರೆಗೆ 90 ಮಂದಿ ಸಾವನ್ನಪ್ಪಿದ್ದು, ನೂರಾರು ಮಂದಿ ಅಪಾಯದಲ್ಲಿ ಸಿಲುಕಿದ್ದಾರೆ. ಕ್ಷಣ ಕ್ಷಣಕ್ಕೂ ಸಾವಿನ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ.

ಕುಸಿತದ ವೇಳೆ ಸೇತುವೆ ಮೇಲೆ 500ಕ್ಕೂ ಹೆಚ್ಚು ಮಂದಿ ಇದ್ದರು. ಕುಸಿತದಿಂದಾಗಿ 100ಕ್ಕೂ ಹೆಚ್ಚು ಮಂದಿ ನೀರು ಪಾಲಾಗಿದ್ದಾರೆ. ಅಪಾಯದಲ್ಲಿದ್ದವರ ರಕ್ಷಣೆ ಕಾರ್ಯಾಚರಣೆ ಭರದಿಂದ ಸಾಗಿದೆ. ಇಂದು ಗುಜರಾತ್‌ನಲ್ಲಿದ್ದ ಪ್ರಧಾನಿ ಮೋದಿ ತುರ್ತು ರಕ್ಷಣಾ ಕಾರ್ಯಾಚರಣೆಗೆ ಆದೇಶ ನೀಡಿದ್ದಾರೆ. ಗಾಯಾಳುಗಳನ್ನು ರಕ್ಷಿಸುವ ಪ್ರಯತ್ನದಲ್ಲಿ ಹಲವು ಸ್ಥಳೀಯರು ಸಹ ಕೈಜೋಡಿಸಿದ್ದಾರೆ. ▶ 6ನೇ ಪುಟಕ್ಕೆ

### ಬಂಡೆ ಮಠದ ಬಸವಲಿಂಗ ಶ್ರೀಗಳ ಆತ್ಮಹತ್ಯೆ ಪ್ರಕರಣ

## ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿ, ವಕೀಲ, ಇಂಜಿನಿಯರಿಂಗ್ ವಿದ್ಯಾರ್ಥಿನಿ ಬಂಧನ

### ಹನಿಟ್ರ್ಯಾಪ್ ಮೂಲಕ ಬಸವಲಿಂಗ ಶ್ರೀಗಳನ್ನು ಬ್ಲಾಕ್‌ಮೇಲ್ ಮಾಡಿರುವುದು ಬೆಳಕಿಗೆ


ಶ್ರೀ ಮೃತ್ಯುಂಜಯ ಸ್ವಾಮೀಜಿ


ಮಹದೇವಯ್ಯ


ನೀಲಾಂಬಿಕೆ


ರಾಮನಗರ, ಅ.30–ಮಾಗಡಿ ತಾಲೂಕು ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಪ್ರಕರಣಕ್ಕೆ ಹೊಸ ತಿರುವು ದೊರೆತಿದ್ದು, ರಾಮನಗರ ಪೊಲೀಸರು ಮಾಗಡಿ ತಾಲೂಕು ಕಣ್ಣೂರು ಮಠದ ಶ್ರೀ ಮೃತ್ಯುಂಜಯ ಸ್ವಾಮೀಜಿ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ.

ಬಂಡೆ ಮಠದ ಶ್ರೀಗಳ ಆತ್ಮಹತ್ಯೆಗೆ ಹನಿಟ್ರ್ಯಾಪ್ ಕಾರಣ ಎಂಬುದು ಪೊಲೀಸರ ತನಿಖೆಯಿಂದ ಬಯಲಾಗಿದ್ದು, ಕಣ್ಣೂರು ಮಠದ ಶ್ರೀಗಳು ಮಾತ್ರವಲ್ಲದೆ, ಬಂಡೆ ಮಠದ ಶ್ರೀಗಳನ್ನು ಹನಿಟ್ರ್ಯಾಪ್‌ಗೆ ಒಳಪಡಿಸಿದ ಮೂಲತಃ ದೊಡ್ಡಬಳ್ಳಾಪುರದ ಇಂಜಿನಿಯರಿಂಗ್ ವಿದ್ಯಾರ್ಥಿನಿ ನೀಲಾಂಬಿಕಾ ಅಲಿಯಾಸ್ ಚಂದು ಮತ್ತು ಕಣ್ಣೂರು ಮಠದ ಶ್ರೀಗಳ ಆಪ್ತನಾಗಿರುವ ವಕೀಲ ಮಹದೇವಯ್ಯ ಎಂಬುವರನ್ನು ಪೊಲೀಸರು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿ ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಮೃತ್ಯುಂಜಯ ಸ್ವಾಮೀಜಿ ಮತ್ತು ಮಹದೇವಯ್ಯನನ್ನು ರಾಮನಗರ ಕಾರಾಗೃಹದಲ್ಲಿ ಇರಿಸಿದ್ದರೆ, ವಿದ್ಯಾರ್ಥಿನಿ ನೀಲಾಂಬಿಕೆಯನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ರವಾನಿಸಲಾಗಿದೆ.

ಆತ್ಮಹತ್ಯೆಗೆ ಶರಣಾದ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಮತ್ತು ಅವರನ್ನು ಬ್ಲಾಕ್‌ಮೇಲ್ ಮಾಡಿದ ಆರೋಪ ಎದುರಿಸುತ್ತಿರುವ ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿ ಪೂರ್ವಾಶ್ರಮದಲ್ಲಿ ಸೋದರ ಸಂಬಂಧಿಗಳು ಎಂದು ಹೇಳಲಾಗಿದ್ದು, ಎರಡೂ ಮಠಗಳ ನಡುವೆ ಆಸ್ತಿ ವಿವಾದ ಹಿನ್ನೆಲೆಯಲ್ಲಿ ಹನಿಟ್ರ್ಯಾಪ್ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಡೆ ಮಠದ ಬಸವಲಿಂಗ ಸ್ವಾಮೀಜಿಗಳು ಬರೆದಿದ್ದ ಡೆತ್‌ನೋಟ್‌ನಲ್ಲಿ ಕಣ್ಣೂರು ಶ್ರೀಗಳ ಷಡ್ಯಂತ್ರದ ಬಗ್ಗೆ ಉಲ್ಲೇಖಿಸಿದ್ದರು. ಹಾಗೂ ಇತರ ಏಳೆಂಟು ಮಂದಿಯಿಂದ ಕಿರುಕುಳವಾಗುತ್ತಿದೆ. ಅವರು ಮಠದ ವಿಚಾರದಲ್ಲಿ ಆಗಾಗ ತೊಂದರೆ ನೀಡುತ್ತಿದ್ದಾರೆ. ನನ್ನ ಸಾವಿಗೆ ಗೊತ್ತಿಲ್ಲದ ಯುವತಿಯೇ ಕಾರಣ ಎಂದು ಬರೆದಿದ್ದರು ಎನ್ನಲಾಗಿದೆ. ಈ ಪ್ರಕರಣ ಭೇದಿಸಲು ಡಿವೈಎಸ್‌ಪಿ, ನಾಲ್ವರು ಸರ್ಕಲ್ ಇನ್ಸ್‌ಪೆಕ್ಟರ್, ಐವರು ಸಬ್ ಇನ್ಸ್‌ಪೆಕ್ಟರ್‌ಗಳನ್ನೊಳಗೊಂಡ ವಿಶೇಷ ತಂಡ ರಚಿಸಲಾಗಿತ್ತು. ಪೊಲೀಸರಿಗೆ ಬಂಡೆ ಮಠದ ▶ 8ನೇ ಪುಟಕ್ಕೆ

## ಆರ್‌ಎಸ್‌ಎಸ್‌ನ ಜ್ಯೇಷ್ಠ ಪ್ರಚಾರಕ ಚಂದ್ರಶೇಖರ ಭಂಡಾರಿ ನಿಧನ



ಬೆಂಗಳೂರು, ಅ.30– ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ, ಲೇಖಕ ಚಂದ್ರಶೇಖರ ಭಂಡಾರಿ (87) ಭಾನುವಾರ ನಿಧನರಾದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಚಂದ್ರಶೇಖರ ಭಂಡಾರಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದೆ. ಅಗಲಿದ ಗಣ್ಯರು ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ಮಾಜಿ ರಾಜ್ಯ ಸಂಘಟನಾ ಕಾರ್ಯದರ್ಶಿ ಮತ್ತು ವಿಶ್ವಸಂವಾದ ಕೇಂದ್ರ ಕರ್ನಾಟಕದ ಸಂಸ್ಥಾಪಕ ಟ್ರಸ್ಟಿ ಆಗಿದ್ದರು. ಆರ್‌ಎಸ್‌ಎಸ್‌ನ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಹಲವು ಹೊಣೆಗಾರಿಕೆಯನ್ನು ನಿಭಾಯಿಸಿದ್ದ ಭಂಡಾರಿಯವರು ಅನೇಕ ಪುಸ್ತಕಗಳ ಲೇಖಕರಷ್ಟೇ ಅಲ್ಲದೇ ಕನ್ನಡ ಭಾಷೆಗೆ ಅನೇಕ ಕೃತಿಗಳನ್ನು ಅನುವಾದ ಮಾಡಿದ್ದರು. ಆರು ದಶಕಗಳ ಕಾಲ ಆರ್‌ಎಸ್‌ಎಸ್‌ನ ಪ್ರಚಾರಕರಾಗಿ ಕಾರ್ಯನಿರ್ವಹಿಸಿದ್ದ ಚಂದ್ರಶೇಖರ ಭಂಡಾರಿ ‘ಧರೆಗೆ ವತರಿಸಿದೆ ಸ್ವರ್ಗದ ಸ್ಪರ್ಧಿಯು ಸುಂದರ ತಾಯ್ನೆಲವು’ ಸೇರಿದಂತೆ ಅನೇಕ ದೇಶಭಕ್ತಿಗೀತೆಗಳನ್ನು ರಚಿಸಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಚಂದ್ರಶೇಖರ್ ಭಂಡಾರಿ ಅವರು ಅನುವಾದಿಸಿದ್ದ ಕೃತಿ 2011ರಲ್ಲಿ ಪ್ರಕಟವಾಗಿತ್ತು. ಕುವೆಂಪು ಭಾಷಾ ಭಾರತಿ, ಚಂದ್ರಶೇಖರ ಭಂಡಾರಿ ಅವರಿಗೆ ಉತ್ತಮ ಅನುವಾದಕ ಪ್ರಶಸ್ತಿ ನೀಡಿ ಗೌರವಿಸಿತ್ತು.



ದೀಪಾವಳಿ ಹಬ್ಬದ ಜಾತ್ರಾ ಮಹೋತ್ಸವ ಪ್ರಯುಕ್ತ ಮೈಸೂರಿನ ಕುಂಬಾರಕೊಪ್ಪಲಲ್ಲಿ ನಡೆದ ಹೊನಲು ಬೆಳಕಿನ ಲೀಗ್ ಕಬಡ್ಡಿ ಪಂದ್ಯಾವಳಿಯಲ್ಲಿ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್‌ಕುಮಾರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಶಾಸಕ ಎಲ್.ನಾಗೇಂದ್ರ, ಅಭ್ಯುದಯ ಸಂಘದ ಉಪಾಧ್ಯಕ್ಷ ವೈ.ಭೈರಪ್ಪ, ಮುಖಂಡರಾದ ಜವರೇಗೌಡ, ರವಿ, ಸಂಜೀವಿನಿಕುಮಾರ್ ಇನ್ನಿತರರಿದ್ದರು.




ಮೈಸೂರಿನ ಕುರುಬಗೇರಿಯ ಪುಟಾಣಿ ಮಕ್ಕಳಿಂದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಪುಷ್ಪ ನಮನ ಸಲ್ಲಿಸಲಾಯಿತು.

## ಮುಖ್ಯಮಂತ್ರಿ ಕಚೇರಿಯಿಂದ ಪತ್ರಕರ್ತರಿಗೆ ಉಡುಗೊರೆ

# ತನಿಖೆಗೆ ಆದೇಶಿಸುವಂತೆ ಎಂಎಲ್‌ಸಿ ವಿಶ್ವನಾಥ್ ಒತ್ತಾಯ

ಮೈಸೂರು,ಅ.30(ಪಿಎಂ)–ದೀಪಾವಳಿ ಉಡುಗೊರೆ ನೆಪದಲ್ಲಿ ಮುಖ್ಯಮಂತ್ರಿ ಕಚೇರಿಯಿಂದ ಆಯ್ದ ಪತ್ರಕರ್ತರಿಗೆ ಸ್ವೀಟ್ ಬಾಕ್ಸ್‌ನೊಂದಿಗೆ 2.5 ಲಕ್ಷದಿಂದ ಐದು ಲಕ್ಷದವರೆಗೆ ಹಣ ನೀಡಿರುವ ಬಗ್ಗೆ ಹಾಗೂ ಇದೇ ರೀತಿಯಲ್ಲಿ ಸಚಿವರೊಬ್ಬರು ಪತ್ರಕರ್ತರಿಗೆ ಗಿಫ್ಟ್ ಬಾಕ್ಸ್ ನೀಡಿರುವ ಆರೋಪಗಳ ಸಂಬಂಧ ತನಿಖೆಗೆ ಆದೇಶಿಸುವಂತೆ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಸರ್ಕಾರವನ್ನು ಒತ್ತಾಯಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು 40 ವರ್ಷಗಳಿಂದ ಮಾಧ್ಯಮದವರೊಂದಿಗೆ ಸ್ನೇಹ, ಸಂಪರ್ಕ ಹೊಂದಿದ್ದು, ಅವರಿಗೆ ಸ್ವೀಟ್ ಮತ್ತು ಹೂ ನೀಡಿ ಶುಭ ಕೋರುವುದನ್ನು ನೋಡಿದ್ದೇನೆ. ಆದರೆ ಈಗ ಅದು, ಬೇರೆ ರೀತಿ ಆಗಿರುವುದು ದುರಂತ. ಸ್ವೀಟ್ ಬಾಕ್ಸ್ ಒಳಗೆ ವಾಚು, ಕ್ಯಾಶು, ಸ್ಕ್ಯಾಚು, ಗೋಲ್ಡ್ ಸೇರ್ಪಡೆಯಾಗಿದೆ ಎಂದು ಹೇಳಲಾಗುತ್ತಿದೆ. ಅದೂ ಸಿಎಂ ಕಚೇರಿ ಮತ್ತು ಮಂತ್ರಿಯೊಬ್ಬರ ಕಚೇರಿಯಿಂದ ಹೋಗಿದೆ ಎಂಬುದು ದೊಡ್ಡ ದುರಂತ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳು ಹೇಳುವ ಸುದ್ದಿಗಳನ್ನು ಜನತೆಗೆ ತಲುಪಿಸುವವರು ಮಾಧ್ಯಮದವರು. ಹಾಗಾಗಿ ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮ ಪ್ರಮುಖ ಅಂಗ. ಸರ್ಕಾರ, ಜನಪ್ರತಿನಿಧಿಗಳು, ಆಡಳಿತ, ಅಭಿವೃದ್ಧಿ ಬಗ್ಗೆ ಜನತೆಗೆ ತಿಳಿಸುವ ಅಂಗ ಮಾಧ್ಯಮ. ಈ ಅಂಗವನ್ನೇ ನಾವು ವಾಚು, ಕ್ಯಾಶು, ಗೋಲ್ಡು, ಸ್ಕ್ಯಾಚು ಕೊಟ್ಟು ಹಾಳು ಮಾಡುವುದು ಎಷ್ಟರ ಮಟ್ಟಿಗೆ ಸರಿ? ಎಂದು ವಿಶ್ವನಾಥ್ ಪ್ರಶ್ನಿಸಿದರು.

ನಾನು ಕೆ.ಆರ್.ನಗರ, ಹುಣಸೂರು, ಮೈಸೂರು, ಬೆಂಗಳೂರು, ದೆಹಲಿ ವರೆಗೂ ಮಾಧ್ಯಮದವರೊಂದಿಗೆ ಸ್ನೇಹ ಹೊಂದಿದ್ದೇನೆ. ಹಲವು ವಿಚಾರಗಳಲ್ಲಿ ತಪ್ಪಾದಾಗ ಮಾಧ್ಯಮದವರು ನನ್ನನ್ನು ತಿದ್ದಿದ್ದಾರೆ. ಇಂತಹ ಸಂಪರ್ಕವು ಜನಪ್ರತಿನಿಧಿಗಳು ಮತ್ತು ಮಾಧ್ಯಮದವರ ನಡುವೆ ಅಗತ್ಯ. ಅದೊಂದು ಸಂಸ್ಕೃತಿ. ಆದರೆ ಇಂದು ಇಂತಹ ಸಂಸ್ಕೃತಿಯನ್ನೇ ಹಾಳು ಮಾಡಲಾಗುತ್ತಿದೆಯೇ? ಎಂದು ಆತಂಕ ವ್ಯಕ್ತಪಡಿಸಿದರು.

**ಚುನಾವಣೆಗೆ ಮೊದಲ ಕಂತು ಶುರುನಾ?:** ಈಗಾಗಲೇ ಕೆಲವು ಮಾಧ್ಯಮದವರು ಸಿಎಂ ಕಚೇರಿ ಗಿಫ್ಟ್ ಅನ್ನು ವಾಪಸ್ಸು ಕಳಿಸಿದ್ದರೆ, ಕೆಲವರು ಏನೂ ಹೇಳದೇ ಇಟ್ಟುಕೊಂಡಿದ್ದಾರೆ ಎನ್ನಲಾಗುತ್ತಿದೆ. ಚುನಾವಣೆ ಸಮೀಪದಲ್ಲಿದ್ದು, ಹಾಗಾಗಿ ಮೊದಲನೇ ಕಂತು ಆಗಲೇ ಶುರುವಾಗಿ ಹೋಯಿತೇ? ಎಲ್ಲೋ ಒಂದು ಕಡೆ ಮಾಧ್ಯಮದ ಗೌರವ ಮತ್ತು ಶಕ್ತಿಯನ್ನು ನಾವೇ ಹಾಳು ಮಾಡುತ್ತಿದ್ದೇವೇನೋ? ಎಂದು ಬೇಸರ ವ್ಯಕ್ತಪಡಿಸಿದರು.

**ಕರ್ನಾಟಕ ಮಾರೋಣವೇ?:** 'ಕರ್ನಾಟಕ ಮಾಧ್ಯಮ' ಕ್ಷೇತ್ರ ಭಾರತದಲ್ಲಿ ತನ್ನದೇ ಆದ ವಿಶಿಷ್ಟತೆ–ಪ್ರತಿಷ್ಠತೆ ಹೊಂದಿದೆ. ಅಂತಹ ಮಾಧ್ಯಮ ಕ್ಷೇತ್ರವನ್ನು ಏನು ಮಾಡಲು ಹೊರಟ್ಟಿದ್ದೇವೆ? ಮುಖ್ಯಮಂತ್ರಿಗಳ ಕಚೇರಿಯಿಂದ ಅವರ ಕಾರ್ಯದರ್ಶಿಯಿಂದಲೇ ಇದೆಲ್ಲಾ ನಡೆದಿದೆ ಎಂದರೆ ಇದು ಎಷ್ಟರಮಟ್ಟಿಗೆ ಸರಿ? ಗಿಫ್ಟ್, ಕಮಿಷನ್ ಸೇರಿದಂತೆ ಇದಕ್ಕೆ ಏನು ಹೆಸರಿಡುವುದು. ಹಾಗಾದರೆ ಎಲ್ಲರೂ ಸೇರಿ ಕರ್ನಾಟಕವನ್ನು ಮಾರಿಬಿಡೋಣವೇ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

**ಸಿಎಂ ಮಾತನಾಡಬೇಕು, ಸಚಿವರನ್ನು ಕೈಬಿಡಬೇಕು:** ಕೆಲವರು ಮಾತ್ರ ನಗದು ಒಳಗೊಂಡ ಗಿಫ್ಟ್ ಬಾಕ್ಸ್ ಅನ್ನು ವಾಪಸ್ಸು ಕಳುಹಿಸಿದ್ದಾರೆ ಎಂದರೆ, ಉಳಿದವರು ಏಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಿದ ಅವರು, ಮುಖ್ಯಮಂತ್ರಿಗಳೂ ಈ ಆರೋಪದ ಸಂಬಂಧ ಏನೂ ಮಾತನಾಡುತ್ತಿಲ್ಲ. ಅವರು ಮಾತನಾಡಲೇಬೇಕು. ಅವರ ಮಾಧ್ಯಮ ಕಾರ್ಯದರ್ಶಿ ಈ ಕೆಲಸ ಮಾಡಿದ್ದರೆ ಮೊದಲು ಅವರನ್ನು ಹೊರ ಹಾಕಬೇಕು. ಜೊತೆಗೆ ಇದೇ ರೀತಿ ಗಿಫ್ಟ್ ಬಾಕ್ಸ್ ನೀಡಿರುವ ಸಚಿವರನ್ನೂ ಮಂತ್ರಿ ಮಂಡಲದಿಂದ ತೆಗೆದು ಹಾಕಬೇಕು ಎಂದು ವಿಶ್ವನಾಥ್ ಒತ್ತಾಯಿಸಿದರು.

**ಇದು ಉದ್ದೇಶಪೂರ್ವಕ ಲಂಚ:** ಇದು ಉದ್ದೇಶಪೂರ್ವಕ ಲಂಚ. ಇಂತಹದ್ದನ್ನು ಸ್ವೀಕಾರ ಮಾಡಬಹುದೇ? ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲವನ್ನೂ ಭ್ರಷ್ಟಗೊಳಿಸಲು ಹೊರಟಿದ್ದೇವೆಯೇ? ಮುಖ್ಯಮಂತ್ರಿ ಕಚೇರಿಯಿಂದಲೇ ಇದೆಲ್ಲಾ ಆಗಿದೆಯೆಂದರೆ ಹೇಗೆ? ನಾನು ಆಡಳಿತ ಪಕ್ಷದವನೇ. ಯಾವ ಪಕ್ಷದಲ್ಲಿದ್ದರೂ ತಪ್ಪಾದರೆ ನಾನು ಹೇಳುವವನೇ. ಅದನ್ನೇ ಇಷ್ಟು ದಿನ ಪಾಲನೆ ಮಾಡಿದ್ದೇನೆ. ಜಿಂದಾಲ್ ಪ್ರಕರಣದಲ್ಲಿ ಬಿ.ಎಸ್.ಯಡಿಯೂರಪ್ಪರನ್ನೇ ಪ್ರಶ್ನೆ ಮಾಡಿದ್ದೆ. ನನ್ನ ರಾಜಕಾರಣದ ಭವಿಷ್ಯವನ್ನು ಜನ ತೀರ್ಮಾನ ಮಾಡುತ್ತಾರೆ. ಆದರೆ ನನಗೆ ಗೊತ್ತಿರುವುದನ್ನು ಮುಚ್ಚಿಡುವುದಿಲ್ಲ ಎಂದು ತಿಳಿಸಿದರು.

ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಅವರ ಕಚೇರಿಯಲ್ಲಿ ಇಂತಹ ಕೆಲಸ ಮಾಡಿದವರನ್ನು ಮೊದಲು ಹೊರ ಹಾಕಬೇಕು ಎಂದರಲ್ಲದೆ, ಏಕೆ ನೀವೇ ಅನುಮತಿ ಕೊಟ್ಟಿದ್ರಾ ಅಥವಾ ಆತನೇ ಮಾಡಿರುವುದಾ? ಎಂದು ಪ್ರಶ್ನಿಸಿದ ಅವರು, ಯಾರೋ ಸಚಿವರು ಇದೇ ರೀತಿ ಮಾಡಿದ್ದಾರಂತೆ. ಅವರಿಗೆ ದುಡ್ಡು ಹೆಚ್ಚಾಗಿದೆಯೇ? ಜನಪ್ರತಿನಿಧಿಗಳು, ಸರ್ಕಾರದ ಬಗ್ಗೆ ಜನತೆ ವಿಶ್ವಾಸ ಕಳೆದುಕೊಳ್ಳುವ ಹಂತದಲ್ಲಿದ್ದೇವೆ. ಈಗ ಅದೂ ಸಾಲದೆಂದು ಮಾಧ್ಯಮದ ಮೇಲೆ ಜನತೆ ಇಟ್ಟಿರುವ ವಿಶ್ವಾಸವನ್ನು ಕಳೆದುಬಿಡುವುದೇ? ಮಾಧ್ಯಮ ಮತ್ತು ಜನಪ್ರತಿನಿಧಿಗಳು ಗೌರವ ಕಳೆದುಕೊಂಡರೆ ಸಮಾಜದಲ್ಲಿ ಏನು ತಾನೆ ಉಳಿದಿತು ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ವಿಷಾದಿಸಿದರು.

### ಸರ್ಕಾರ, ಜನತೆ ವಿಶ್ವಾಸ ಕಳೆದುಕೊಳ್ಳಬೇಕಾಗುತ್ತೆ

ಈ ಪ್ರಕರಣ ಸಂಬಂಧ ಇಷ್ಟೊತ್ತಿಗೆ ಮಾಧ್ಯಮ ಕ್ಷೇತ್ರ ಚಾಟಿ ಬೀಸಲು ಶುರು ಮಾಡಬೇಕಿತ್ತು. ಕೆಲವರು ಮಾತ್ರ ಗಿಫ್ಟ್ ಬಾಕ್ಸ್ ಹಿಂತಿರುಗಿಸಿದ್ದು, ಉಳಿದವರು ವಾಪಸ್ಸು ಮಾಡಿಲ್ಲವೆಂದರೆ, ಅವರಿಗೆ ಇದು ಸ್ವೀಕಾರರ್ಹವೇ? ಜೀವನ ಉದ್ದಕ್ಕೂ ಅನ್ಯಾಯದ ವಿರುದ್ಧ ಮಾತನಾಡಿಕೊಂಡೇ ಬಂದಿದ್ದೇನೆ. ಇದರಿಂದ ಎಷ್ಟೋ ಚುನಾವಣೆಯಲ್ಲಿ ಸೋಲು ಕಂಡಿದ್ದೇನೆ. ಅದಕ್ಕೇನೂ ನನಗೆ ಬೇಸರವಿಲ್ಲ. ನಾನು ಪ್ರಸ್ತಾಪಿಸಿದ್ದು ಚರ್ಚೆಯಾಗಿದ್ದು, ಅದೇ ಮುಖ್ಯ ಎಂದು ವಿಶ್ವನಾಥ್ ಹೇಳಿದರು.

ಸರ್ಕಾರ ಈ ಪ್ರಕರಣ ಸಂಬಂಧ ವಿಚಾರಣೆಗೆ ಆದೇಶ ಮಾಡಬೇಕು. ಇಲ್ಲವಾದರೆ ಸರ್ಕಾರದ ಮೇಲೆ ಜನತೆ ವಿಶ್ವಾಸ ಕಳೆದುಕೊಳ್ಳಲಿದ್ದಾರೆ ಎಂದರು. ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆಯೇ? ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸರ್ಕಾರವಲ್ಲ ಇಡೀ ವ್ಯವಸ್ಥೆಯೇ ಹಾಳಾಗುತ್ತಿದೆ. ನೀವು, ನಾವು ಎಲ್ಲರೂ ಈ ವ್ಯವಸ್ಥೆಯೊಳಗೆ ಇದ್ದೇವೆ ಎಂದು ತಿಳಿಸಿದರು.

## ಸುಯೋಗ್ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರಿಗೆ ರಿಯಾಯಿತಿ ಚಿಕಿತ್ಸೆ ಪ್ರಶಂಸನೀಯ: ಶಾಸಕ ನಾಗೇಂದ್ರ



ಮೈಸೂರು,ಅ.30–ಸುಯೋಗ್ ಆಸ್ಪತ್ರೆಯಲ್ಲಿ ಇಂದಿನಿಂದ ಹಿರಿಯ ನಾಗರಿಕರಿಗೆ ಪ್ರಥಮ ಆದ್ಯತೆ ಮೇರೆಗೆ ವಿಶೇಷ ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸುವುದಾಗಿ ಡಾ.ಎಸ್.ಪಿ.ಯೋಗಣ್ಣ ಘೋಷಿಸಿದರು. ಜಯಲಕ್ಷ್ಮಿಪುರಂನ ಹಿರಿಯ ನಾಗರಿಕರ ಮಂಡಳಿ ಮತ್ತು ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಸಹಯೋಗದಲ್ಲಿ ಸಂಸ್ಥೆಯ ಸರಸ್ವತಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಮಾತನಾಡಿದರು.

ತಮ್ಮ ಆಸ್ಪತ್ರೆಯಲ್ಲಿ ಎಲ್ಲಾ ಚಿಕಿತ್ಸಾ ಸೌಲಭ್ಯಗಳು ಲಭ್ಯವಿದ್ದು, ಹಿರಿಯ ನಾಗರಿಕರಿಗೆ ಚಿಕಿತ್ಸಾ ವೆಚ್ಚದಲ್ಲಿ ಶೇ.10ರಷ್ಟು ರಿಯಾಯಿತಿ ನೀಡಲಾಗುವುದು. ಇದನ್ನು ಹಿರಿಯ ನಾಗರಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ಹಿರಿಯ ನಾಗರಿಕರ ಮಂಡಳಿಯು ಒಳ್ಳೆಯ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಸುಯೋಗ್ ಆಸ್ಪತ್ರೆಯು ಹಿರಿಯ ನಾಗರಿಕರಿಗೆ ರಿಯಾಯಿತಿ ಚಿಕಿತ್ಸೆ ನೀಡಲು ಮುಂದಾಗಿರುವುದು ಪ್ರಶಂಸನೀಯ ಎಂದರು. ಕಾರ್ಯಕ್ರಮವನ್ನು ವಿಶ್ರಾಂತ ಕುಲಪತಿ ರಾಮೇಗೌಡ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಛೇರ್ಮನ್ ಎಸ್.ವಿ.ಗೌಡಪ್ಪ, ಸಂಸ್ಥೆಯ ಅಧ್ಯಕ್ಷ ಕೃಷ್ಣಪ್ಪಗೌಡ, ಹಿರಿಯ ಯೋಗಾಚಾರ್ಯ ಎಸ್.ವಿ.ವೆಂಕಟೇಶಯ್ಯ, ಕಾರ್ಯದರ್ಶಿ ಕೆ.ವಿ.ರಾಮನಾಥ್ ಇತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಹಾಗೂ ನಿವೃತ್ತ ಶಿಕ್ಷಕಿ ಶ್ರೀಮತಿ ರಮಾ ನಾಗೇಂದ್ರ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

## ಮ್ಯಾಟ್ರಿಮೋನಿ ಆ್ಯಪ್‌ನಲ್ಲಿ ಮಹಿಳೆಗೆ ಉಡುಗೊರೆ ಹೆಸರಲ್ಲಿ 5.86 ಲಕ್ಷ ವಂಚನೆ

### ಮತ್ತೊಂದು ಪ್ರಕರಣದಲ್ಲೂ ಕೊಡಗಿನ ಗೃಹಿಣಿಗೆ 6.83 ಲಕ್ಷ ಆನ್‌ಲೈನ್ ದೋಖಾ

ಮೈಸೂರು, ಅ.30–ಮದುವೆಯಾಗಲು ಮ್ಯಾಟ್ರಿಮೋನಿ ಆ್ಯಪ್‌ನಲ್ಲಿ ವರನನ್ನು ಹುಡುಕುತ್ತಿದ್ದ ಮಹಿಳೆಯನ್ನು ಪರಿಚಯ ಮಾಡಿಕೊಂಡು ವಿದೇಶದಿಂದ ಉಡುಗೊರೆ ಕಳುಹಿಸುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 5.86 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಹುಣಸೂರು ತಾಲೂಕು ಅಂಗತಹಳ್ಳಿಯಲ್ಲಿ ವಾಸವಿರುವ ಎ.ಎಂ.ಪ್ರತಿಭಾ (32) ವಂಚನೆಗೊಳಗಾದವರಾಗಿದ್ದು, ಬಿ.ಕಾಂ. ಪದವೀಧರೆಯಾಗಿರುವ ಇವರು, 2017ರಲ್ಲಿ ಬೆಂಗಳೂರಿನ ಸೂರಜ್‌ಶಾಯಿ ಎಂಬುವವರನ್ನು ಮದುವೆಯಾಗಿದ್ದರು. ಇವರಿಗೆ ಮೂರೂವರೆ ವರ್ಷದ ಹೆಣ್ಣು ಮಗುವಿದೆ. ಆದರೆ ದುಬೈನಲ್ಲಿ ಕೆಲಸ ಮಾಡುತ್ತಿದ್ದ ಇವರ ಪತಿ ಬೇರೆ ಮದುವೆಯಾಗಿ ಇವರ ಸಂಪರ್ಕ ಕಳೆದುಕೊಂಡಿದ್ದಾರೆ.

ಹೀಗಾಗಿ ಬೇರೊಂದು ಮದುವೆಯಾಗಬೇಕೆಂದು ತೀರ್ಮಾನಿಸಿದ್ದ ಪ್ರತಿಭಾ, ಭಾರತ್ ಮ್ಯಾಟ್ರಿಮೋನಿ ಆ್ಯಪ್‌ನಲ್ಲಿ ವರನನ್ನು ಹುಡುಕುತ್ತಿದ್ದಾಗ ಅಜಿತ್ ಕುಮಾರ್ ಎಂಬಾತ ಇವರಿಗೆ ರಿಕ್ವೆಸ್ಟ್ ಕಳುಹಿಸಿ, ವಾಟ್ಸಾಪ್ ನಂಬರ್ ಪಡೆದು ಚಾಟ್ ಮಾಡಿದ್ದಾನೆ. ತನಗೆ ಕೆಲ್ವಿನ್ ಮ್ಯಾಕ್ಸ್‌ವೆಲ್ ಎಂಬ ಮತ್ತೊಂದು ಹೆಸರೂ ಇದೆ ಎಂದು ತಿಳಿಸಿದ್ದ ಈತ, ತಮ್ಮ ಪೂರ್ವಜರು ಭಾರತೀಯರಾಗಿದ್ದು, ತಾನು ಯುಕೆನಲ್ಲಿ ವಾಸವಿರುವುದಾಗಿ ಹೇಳಿದ್ದಾನೆ. ನಂತರ ಪ್ರತಿಭಾ ಅವರಿಗೆ ಆಭರಣಗಳನ್ನು ಕೊರಿಯರ್ ಮಾಡುವುದಾಗಿ ತಿಳಿಸಿ, ಆಭರಣದ ಬಾಕ್ಸ್ ಮತ್ತು ಅದನ್ನು ಖರೀದಿಸಿದ ರಶೀದಿಯನ್ನು ವಾಟ್ಸಾಪ್ ಮೂಲಕ ರವಾನಿಸಿ ದೆಹಲಿ ಏರ್‌ಪೋರ್ಟ್‌ನಿಂದ ಕರೆ ಮಾಡುತ್ತಾರೆ ಎಂದು ತಿಳಿಸಿದ್ದಾನೆ. ಮರುದಿನವೇ ಕೊರಿಯರ್ ಆಫೀಸ್‌ನಿಂದ ಮಾತನಾಡುತ್ತಿರುವುದಾಗಿ ಹೇಳಿ ಕರೆ ಮಾಡಿದ ವಂಚಕ ಅಜಿತ್ ಕುಮಾರ್ ಅಲಿಯಾಸ್ ಕೆಲ್ವಿನ್ ಮ್ಯಾಕ್ಸ್‌ವೆಲ್ ಎಂಬುವರಿಂದ ಕೊರಿಯರ್ ಬಂದಿದೆ. ಅದನ್ನು ಪಡೆಯಲು ಕ್ಲಿಯರೆನ್ಸ್ ಚಾರ್ಜ್ 38 ಸಾವಿರ ರೂ.ಗಳನ್ನು ರಾಜ್‌ಕುಮಾರ್ ಎಂಬುವರ ಖಾತೆಗೆ ವರ್ಗಾವಣೆ ಮಾಡುವಂತೆ ತಿಳಿಸಿದ್ದಾನೆ. ಅದಾದ ನಂತರ ವಿವಿಧ ಚಾರ್ಜ್‌ಗಳೆಂದು ಆ.31ರಿಂದ ಸೆ.8ರವರೆಗೆ ಹಂತಹಂತವಾಗಿ ಒಟ್ಟು 5,86,780 ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡಿದ್ದಲ್ಲದೇ ಮತ್ತೆ ಹಣ ವರ್ಗಾಯಿಸುವಂತೆ ಹೇಳಿದಾಗ ಸಂಶಯಗೊಂಡ ಪ್ರತಿಭಾ ಅವರು, ಮೈಸೂರು ಜಿಲ್ಲಾ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

**ಮತ್ತೊಂದು ಪ್ರಕರಣ:** ವಾಟ್ಸಾಪ್ ಮೂಲಕ ಪರಿಚಯವಾದ ವಂಚಕನೋರ್ವ ಗೆಳೆತನ ಬೆಳೆಸಿ ವಿದೇಶದಿಂದ ಉಡುಗೊರೆ ಕಳುಹಿಸುವುದಾಗಿ ನಂಬಿಸಿ ಗೃಹಿಣಿಯಿಂದ 6.83 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ.

ಗೋಣಿಕೊಪ್ಪ ಪಟ್ಟಣದ ವೆಂಕಟಪ್ಪ ಲೇಔಟ್ ನಿವಾಸಿ ಸಿ.ಹೆಚ್.ಸುಶೀಲ(54) ವಂಚನೆಗೊಳಗಾದ ಗೃಹಿಣಿಯಾಗಿದ್ದು, ಇವರಿಗೆ ವಾಟ್ಸಾಪ್ ಮೂಲಕ ಪರಿಚಯವಾದ ಜಾನ್ ವಿಲಯಮ್ಸ್ ಎಂಬ ವ್ಯಕ್ತಿ ನಿರಂತರವಾಗಿ ಚಾಟ್ ಮಾಡಿ ಗೆಳೆತನ ಬೆಳೆಸಿದ್ದಾನೆ. ನಂತರ ಸುಶೀಲ ಅವರ ಮನೆ ವಿಳಾಸ ಪಡೆದ ಆತ ಅ.9ರಂದು ಉಡುಗೊರೆ ಕಳುಹಿಸುವುದಾಗಿ ಕೆಲವು ಫೋಟೋಗಳನ್ನು ರವಾನಿಸಿದ್ದಾನೆ. ಮರುದಿನವೇ ಕಸ್ಟಮ್ಸ್‌ನಿಂದ ಮಾತನಾಡುತ್ತಿರುವುದಾಗಿ ಕರೆ ಮಾಡಿದ ವ್ಯಕ್ತಿ ವಿದೇಶದಿಂದ ಪಾರ್ಸಲ್ ಬಂದಿದ್ದು, ಅದನ್ನು ಬಿಡಿಸಿಕೊಳ್ಳಲು ಶುಲ್ಕ ಕಟ್ಟಬೇಕು ಎಂದು ಹೇಳಿದ್ದಾನೆ. ಅವರು ಆನ್‌ಲೈನ್ ಮೂಲಕ ಆತ ಹೇಳಿದ ಖಾತೆಗೆ ಹಣ ವರ್ಗಾವಣೆ ಮಾಡಿದ ನಂತರ ನಿರಂತರವಾಗಿ ಅ.15ರವರೆಗೆ ವಿವಿಧ ಶುಲ್ಕಗಳು ಎಂದು ಒಟ್ಟು 6.83 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಹಾರಾಣಿ ವಿಜ್ಞಾನ ಕಾಲೇಜಿನ ಕುಸಿದಿರುವ ಕಟ್ಟಡದ ಪೀಠೋಪಕರಣ ಹೊಸ ಕಟ್ಟಡಕ್ಕೆ ಸ್ಥಳಾಂತರ



ಮೈಸೂರು,ಅ.30(ಎಂಟಿವೈ)–ಮಳೆಯಿಂದಾಗಿ ಶಿಥಿಲಗೊಂಡು ಕುಸಿದಿದ್ದ ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡದಿಂದ ಭಾನುವಾರ ಪೀಠೋಪಕರಣಗಳನ್ನು ತೆರವುಗೊಳಿಸುವ ಕಾರ್ಯ ಆರಂಭಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜಿನ ಕಟ್ಟಡ ಶತಮಾನದ ಇತಿಹಾಸ ಹೊಂದಿದ್ದು, ಸತತ ಮಳೆಯಿಂದಾಗಿ ಶಿಥಿಲಾವಸ್ಥೆ ತಲುಪಿದೆ. ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯವಿದ್ದ ಕಟ್ಟಡವು ಅ.21ರಂದು ಕುಸಿದಿತ್ತು. ಈ ಹಿನ್ನೆಲೆಯಲ್ಲಿ ಹಳೇ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ದುರಸ್ತಿ ಮಾಡಬೇಕಾದ ಅನಿವಾರ್ಯತೆ ಎದುರಾಗಿತ್ತು. ಕಟ್ಟಡದ ದುರಸ್ತಿಗಾಗಿ 2 ಕೋಟಿ ರೂ. ಮಂಜೂರಾಗಿದ್ದು, ನಾಲ್ಕು ದಿನಗಳ ಹಿಂದಷ್ಟೇ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು.

ಹಳೆಯ ಕಟ್ಟಡದ ದುರಸ್ತಿ ಕಾರ್ಯ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ವಿದ್ಯಾರ್ಥಿಗಳಿಗೆ ಪರ್ಯಾಯ ಕಟ್ಟಡದಲ್ಲಿ ತರಗತಿ ಮುಂದುವರೆಸಬೇಕಾಗಿರುವುದರಿಂದ ಇಂದು ಕಾಲೇಜಿನ ಪ್ರಾಂಶುಪಾಲ ಡಿ.ರವಿ ನೇತೃತ್ವದಲ್ಲಿ ಹಳೆಯ ಕಟ್ಟಡದಲ್ಲಿರುವ ಪ್ರಯೋಗಾಲಯ ಮತ್ತು ತರಗತಿ ಕೊಠಡಿಗಳಲ್ಲಿರುವ ಪೀಠೋಪಕರಣಗಳನ್ನು ಸಮೀಪದಲ್ಲೇ ಇರುವ ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ಕಾರ್ಯ ಆರಂಭಿಸಲಾಯಿತು. ಪೀಠೋಪಕರಣ ಮತ್ತು ಉಪಕರಣಗಳನ್ನು ಸ್ಥಳಾಂತರಿಸಲು ರಮೇಶ್ ಎಂಬುವರಿಗೆ ಗುತ್ತಿಗೆ ನೀಡಲಾಗಿದ್ದು, ಸುಮಾರು 20 ಮಂದಿ ಕೂಲಿ ಕಾರ್ಮಿಕರಿಂದ ಪೀಠೋಪಕರಣ ಸ್ಥಳಾಂತರ ಆರಂಭಿಸಲಾಯಿತು. ಸೋಮವಾರದಿಂದ (ಅ.31) ಆಯಾ ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳ ಸಮ್ಮುಖದಲ್ಲಿ ಪೀಠೋಪಕರಣದೊಂದಿಗೆ ಪ್ರಯೋಗಾಲಯದಲ್ಲಿರುವ ಉಪಕರಣಗಳನ್ನು ಸ್ಥಳಾಂತರ ಮಾಡುವ ಕಾರ್ಯವನ್ನು ಮುಂದುವರೆಸಲಾಗುತ್ತದೆ. ಈ ಸಂಬಂಧ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಹಳೆಯ ಕಟ್ಟಡದ ದುರಸ್ತಿ ಕಾಮಗಾರಿ ಆರಂಭವಾಗಲಿದೆ. ಅಲ್ಲದೇ ಕುಸಿದಿರುವ ಕಟ್ಟಡದ ಬ್ಲಾಕ್‌ನಲ್ಲಿರುವ ವಿವಿಧ ತರಗತಿ ಕೊಠಡಿಗಳು ಹಾಗೂ ಪ್ರಯೋಗಾಲಯವನ್ನು ಸ್ಥಳಾಂತರಗೊಳಿಸುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಭಾನುವಾರವಾದರೂ ಕೊಠಡಿಗಳಲ್ಲಿರುವ ಪೀಠೋಪಕರಣಗಳನ್ನು ಮೊದಲ ಹಂತದಲ್ಲಿ ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಪ್ರಯೋಗಾಲಯದ ಉಪಕರಣಗಳನ್ನು ನಾಳೆಯಿಂದ ಸ್ಥಳಾಂತರಿಸುತ್ತೇವೆ ಎಂದು ತಿಳಿಸಿದರು.

## ನ.18ರಂದು ಮಹಿಳಾ ಉದ್ಯೋಗ ಮೇಳ

ಮೈಸೂರು,ಅ.30(ಪಿಎಂ)–ಎಜ್ಯುಕೇರ್ ಐಟಿಇಎಸ್ ಕೌಶಲ್ಯ ತರಬೇತಿ ಕೇಂದ್ರ, ವುಮೆನ್ ಕ್ಯಾನ್ ಫೌಂಡೇಷನ್, ಮಹಾರಾಣಿ ವುಮೆನ್ಸ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಸಹಯೋಗದೊಂದಿಗೆ ನ.18ರಂದು ಮಹಿಳಾ ಉದ್ಯೋಗ ಮೇಳ ಮತ್ತು ಮಹಿಳೆಯರು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಮಹರ್ಷಿ ವಾಲ್ಮೀಕಿ ರಸ್ತೆಯ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು ಆವರಣದಲ್ಲಿ ಅಂದು ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ಈ ಕಾರ್ಯಕ್ರಮ ನಡೆಯಲಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಬಿಇ ಮತ್ತು ಯಾವುದೇ ಪದವಿ ಪಡೆದವರು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. 80ಕ್ಕೂ ಹೆಚ್ಚು ಕಂಪನಿಗಳು ಮಹಿಳಾ ಉದ್ಯೋಗಿಗಳಿಗಾಗಿ ಸಂದರ್ಶನ ನಡೆಸಲಿವೆ. ವಿವರಗಳಿಗೆ ಮೊ.ಸಂ. 63643 40027 ಮತ್ತು 7204809085 ಮೂಲಕ ಸಂಪರ್ಕಿಸಬಹುದು.

## ನ.3ರಿಂದ ಕೃಷಿ ಮೇಳ

ಮೈಸೂರು,ಅ.30–ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕೃಷಿ ಮೇಳ–2022 ಅನ್ನು ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಬೆಂಗಳೂರಲ್ಲಿ ನ.3ರಿಂದ 6ರವರೆಗೆ 4 ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ. ಈ ಕೃಷಿ ಮೇಳದಲ್ಲಿ ರೈತರ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ ಹಾಗೂ ರೈತರಿಂದ ರೈತರಿಗಾಗಿ ಚರ್ಚಾಗೋಷ್ಠಿ, ಕೃಷಿ ಪರಿಕರಗಳ ಹಾಗೂ ಪ್ರಕಟಣೆಗಳ ಮಾರಾಟ ವ್ಯವಸ್ಥೆ ಮಾಡಲಾಗಿದ್ದು, ಇದರ ಸದುಪಯೋಗಪಡೆದುಕೊಳ್ಳಲು ಮೈಸೂರು ಜಿಲ್ಲೆಯ ರೈತರಿಗೆ ನ.4ರಂದು ನಿಗದಿಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಪಿಎಚ್.ಡಿ ಪದವಿ



ಮೈಸೂರು, ಅ.30– ಡಾ.ವಿಜಯಲಕ್ಷ್ಮಿ ಮಾರ್ಗದರ್ಶನದಲ್ಲಿ ಕೆ.ಬಿ. ಮಣಿಕಂಠ ಸಂಶೋಧಿಸಿ ಸಾದರಪಡಿಸಿದ 'ನಂಜನಗೂಡು ತಾಲೂಕಿನ ಜನಪದ ರಂಗಭೂಮಿ' ಎಂಬ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ಶುಲ್ಕ ಮರುಪಾವತಿ, ವಿದ್ಯಾಸಿರಿ ಯೋಜನೆ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಅ.30–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1, ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2022–23ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಡಿ.31 ಕೊನೇ ದಿನ. ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ https://ssp.postmatric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಸಹಾಯವಾಣಿ ಸಂಖ್ಯೆ: 8050770005, bcwd helpline@gmail.com ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.inಗೆ ಭೇಟಿ ನೀಡಬಹುದು. ಮಾಹಿತಿಗೆ ದೂಸಂ.: 080–35254757 ಸಂಪರ್ಕಿಸಿ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

31.10.2022 ಸೋಮವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ : ಮೂಲ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಧನ್ಯ ಸ್ಕೂಲ್ ಆಫ್ ಯೋಗ, ಮುದ್ರಾಪ್ರಾಣಾಯಾಮ ರಿಸರ್ಚ್ ಸೆಂಟರ್ :** ಮುದ್ರಾಪ್ರಾಣಾಯಾಮ ಶಿಬಿರ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಬೆಳಗ್ಗೆ 6.30ರಿಂದ 7.30, ಸಂಜೆ 6.30ರಿಂದ 7.30 ರವರೆಗೆ.


■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಶ್ರೀ ವೀರಭದ್ರೇಶ್ವರ ಸ್ವಾಮಿ ಮತ್ತು ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ, ಬೆಳಗ್ಗೆ 7 ಗಂಟೆಗೆ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 24ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 8ನೇ ವರ್ಷದ ಹಾಲರವಿ ಸೇವೆ, ಶ್ರೀ ಸ್ವಾಮಿಗೆ ವಿಶೇಷ ಪೂಜೆ, ಮಹಾ ಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ, ಬೆಳಗ್ಗೆ 7 ಗಂಟೆಗೆ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ :** ಸ್ವಾತಂತ್ರ್ಯ ಅಮೃತ ಮಹೋತ್ಸವ–75ರ ಅಂಗವಾಗಿ ಕ್ಲೀನ್ ಇಂಡಿಯಾ 2.0 ಮೆಗಾ ಕಾರ್ಯಕ್ರಮ, ಉದ್ಘಾಟನೆ: ಅಪರ ಜಿಲ್ಲಾಧಿಕಾರಿ ಡಾ. ಬಿ.ಎಸ್. ಮಂಜುನಾಥಸ್ವಾಮಿ, ಸ್ಥಳ: ಚಾಮುಂಡಿಬೆಟ್ಟದ ಪಾದ, ಬೆಳಗ್ಗೆ 8 ಗಂಟೆಗೆ.

■ **ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ಕನಕಶಕ್ತಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಪಬ್ಲಿಕ್ ಶಾಲೆ :** ಸರ್ದಾರ್ ವಲ್ಲಭಭಾಯಿ ಪಟೇಲ್‌ರವರ ಜನ್ಮ ದಿನಾಚರಣೆ, ರಾಷ್ಟ್ರೀಯ ಏಕತಾ ದಿವಸ್ ಅಂಗವಾಗಿ ಕ್ಲೀನ್ ಇಂಡಿಯಾ ಕಾರ್ಯಕ್ರಮದ ಮುಕ್ತಾಯ ಸಮಾರಂಭ, ಉದ್ಘಾಟನೆ: ಶಾಸಕ ತನ್ವೀರ್ ಸೇಟ್, ಸ್ಥಳ: ಕರ್ನಾಟಕ ಪಬ್ಲಿಕ್ ಶಾಲೆ, ರಾಜೇಂದ್ರನಗರ, ಬೆಳಗ್ಗೆ 8 ಗಂಟೆಗೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ–ಪ್ರೊ. ರವೀಂದ್ರ ಕರ್ಜಗಿ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ– ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ, ಬಿ. ಶ್ರೀರಾಂ ಭಟ್, ಕೆ.ಟಿ.ಉದಯಕಿರಣ್, ವ್ಯಾಖ್ಯಾನ– ಡಾ.ಜಿ.ಆರ್. ತಿಪ್ಪೇಸ್ವಾಮಿ, 10.00 ಲಯ ಸಂಭ್ರಮ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ವಿಶೇಷ ಸಂಗಿಕೆ, ಸಿರಿಕನ್ನಡ ಲಯ ಸಂಭ್ರಮ: ರಚನೆ ಹಾಗೂ ನಿರೂಪಣೆ–ಡಾ.ಜ್ಯೋತಿ ಶಂಕರ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ, 10.30 ನಮ್ಮ ಆರೋಗ್ಯ: ಅಯೋಡಿನ್ ಕೊರತೆಯಿಂದ ಉಂಟಾಗುವ ತೊಂದರೆಗಳು ಮತ್ತು ಪರಿಹಾರ ಕುರಿತು ಕೇಳುಗರ ಪ್ರಶ್ನೆಗಳಿಗೆ ಉತ್ತರಿಸುವವರು ಡಾ.ಹೆಚ್.ಎನ್.ಮಹದೇವಪ್ರಸಾದ್.

**ಮಧ್ಯಾಹ್ನ:** 12.30 ದೇವರನಾಮ: ಶ್ಯಾಮಲಾ ಜಿ. ಭಾವೆ ಮತ್ತು ವೃಂದ, ರಾಜು ಅನಂತಸ್ವಾಮಿ, 12.45 ನಮ್ಮ ಆರೋಗ್ಯ ಕಾರ್ಯಕ್ರಮ: ಅಪಸ್ಮಾರ ಕುರಿತು ಮೈಸೂರಿನ ಹಿರಿಯ ನರರೋಗ ಶಸ್ತ್ರ ತಜ್ಞರಾದ ಡಾ.ಎಂ.ಎಸ್. ಭಾಸ್ಕರ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ಅನೂರಾಧಾ ಕಟ್ಟಿ, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್.

**ಸಂಜೆ:** 4.00 ಮಹಿಳಾರಂಗ: ಆಕಾಶವಾಣಿ ಅಡುಗೆ ಮನೆ, ಪ್ರಸ್ತುತಿ– ಕೆ.ಬಿ. ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ತರಕಾರಿಗಳ ಕೃಷಿ ಹಾಗೂ ಹೈನುಗಾರಿಕೆಯಲ್ಲಿನ ಅನುಭವ ಕುರಿತು ರಾಮೇಗೌಡ ಅವರೊಡನೆ ಸಂದರ್ಶನ.

**ರಾತ್ರಿ:** 9.30 'ನೆಲ ಮೂಲ': ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಕಾರ್ಯಕ್ರಮ, ರಚನೆ– ಡಾ. ಪಿ.ಕೆ. ರಾಜಶೇಖರ್ ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ:** 14ನೇ ಶಾಸ್ತ್ರೀಯ ಕನ್ನಡ ಮಾನ್ಯತಾ ದಿನಾಚರಣೆ ಹಾಗೂ 67ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ, ಸ್ಥಳ: ಭಾರತೀಯ ಭಾಷಾ ಸಂಸ್ಥಾನದ ಆವರಣ, ಮಾನಸಗಂಗೋತ್ರಿ, ಬೆಳಗ್ಗೆ 10 ಗಂಟೆಯಿಂದ.

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ಶ್ರೀ ಸಂಗಮೇಶ್ವರ ದೇವಸ್ಥಾನ :** ಕಾರ್ತಿಕ ಮಾಸ–ಸೋಮವಾರಗಳಂದು ವಿಶೇಷ ಪೂಜಾ ಮಹೋತ್ಸವಗಳು ಹಾಗೂ ಧಾರ್ಮಿಕ ಉಪನ್ಯಾಸಗಳು, ದಿವ್ಯ ಸಾನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಉದ್ಘಾಟನೆ: ದೇವನೂರು ಶ್ರೀ ಗುರುಮಲ್ಲೇಶ್ವರ ಮಹಾ ಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮಿಗಳು, ಮೆರವಣಿಗೆ ಉದ್ಘಾಟನೆ: ಶಾಸಕ ಎಸ್.ಎ. ರಾಮದಾಸ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಸಂಜೆ 6.30ರಿಂದ.

**ಶ್ರೀ ಸುತ್ತೂರು ಕ್ಷೇತ್ರ**

**ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

### ವರುಣಾ ವಿಧಾನಸಭಾ ಕ್ಷೇತ್ರದ ರಾಜೀವ್‌ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಪದಾಧಿಕಾರಿಗಳ ಪದಗ್ರಹಣ

# ಬಿಜೆಪಿ ಆಡಳಿತ ವೈಫಲ್ಯ ಜನತೆಗೆ ತಿಳಿಸಿ: ಡಾ.ಯತೀಂದ್ರ ಸಿದ್ದರಾಮಯ್ಯ

ಮೈಸೂರು, ಅ.30(ಪಿಎಂ)– ಜನತೆಗೆ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯಗಳನ್ನು ತಿಳಿಸಬೇಕೆಂದು ವರುಣಾ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ಕಾರ್ಯಕರ್ತರಿಗೆ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ವರುಣಾ ವಿಧಾನಸಭಾ ಕ್ಷೇತ್ರದ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಅಧ್ಯಕ್ಷರು, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ಬಿಜೆಪಿ ಹಾಗೂ ಅದರ ಇತರೆ ಸಂಘಟನೆಗಳು ಧರ್ಮದ ಹೆಸರಿನಲ್ಲಿ ಜನರನ್ನು ಒಡೆದು ಆಳುವ ನೀತಿಯ ಮೂಲಕ ಅಶಾಂತಿ ಮೂಡಿಸುತ್ತಿವೆ. ಇದು ಹೆಚ್ಚು ದಿನ ನಡೆಯುವುದಿಲ್ಲ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜನರೇ ಬಿಜೆಪಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರ ದೇಶದ ಅಭಿವೃದ್ಧಿಗಿಂತ ಬೇರೆ ವಿಚಾರಗಳಿಗೆ ಆದ್ಯತೆ ನೀಡುತ್ತಿದೆ. ಇದರ ಪರಿಣಾಮ ದೇಶದ ಆರ್ಥಿಕತೆ ಕುಸಿದಿದೆ. ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುತ್ತೇವೆಂದು ದೇಶದ ಜನರಿಗೆ ಭರವಸೆ ನೀಡಿ, ಅಧಿಕಾರಕ್ಕೆ ಬಂದ ಬಿಜೆಪಿ, ವರ್ಷಕ್ಕೆ ಕೇವಲ 2 ಲಕ್ಷ ಉದ್ಯೋಗವನ್ನೂ ನೀಡಲಿಲ್ಲ. ಅಲ್ಲದೆ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗೀಕರಣಗೊಳಿಸುತ್ತಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ 3 ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ, ಜನಪರ ಯೋಜನೆಗಳನ್ನು ಸ್ಥಗಿತಗೊಳಿಸಿ, ಎಸ್‌ಸಿ–ಎಸ್‌ಟಿ, ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಮೀಸಲಿಟ್ಟಿದ್ದ ಅನುದಾನ ಕಡಿತಗೊಳಿಸಿದೆ. ಇವರು ಶ್ರೀಮಂತರು, ಮೇಲ್ವರ್ಗದವರ ಪರವಾಗಿ ಇದ್ದಾರೆಯೇ ಹೊರತು ಬಡವರ ಪರ ಇಲ್ಲ. ವಿಧಾನಸಭಾ ಚುನಾವಣೆಗೆ ಕೇವಲ 5 ತಿಂಗಳು ಇರುವ ಕಾರಣ ಪಕ್ಷ ಸಂಘಟನೆ ಜೊತೆಗೆ ಬೆಲೆ ಏರಿಕೆ, ಕಮಿಷನ್ ದಂಧೆ, ನಿರುದ್ಯೋಗ ಸೇರಿದಂತೆ ಬಿಜೆಪಿ ಆಡಳಿತದ ವೈಫಲ್ಯಗಳನ್ನು ಪ್ರತಿ ಮನೆಗೂ ತಲುಪಿಸಬೇಕು ಎಂದರು.

ದೇಶ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಅವಧಿಯಲ್ಲಿ ಜಾರಿಗೊಳಿಸಿದ ಜನಪರ ಯೋಜನೆಗಳನ್ನು ಜನತೆಗೆ ತಿಳಿಸಬೇಕು. ಪಕ್ಷದಲ್ಲಿ 17 ರೀತಿಯ ಸಂಘಟನೆಗಳು ಇದ್ದು, ಜವಾಬ್ದಾರಿ ಹೊತ್ತಿರುವ ಈ ಸಂಘಟನೆಗಳ ಪದಾಧಿಕಾರಿಗಳು ಊರೂರಲ್ಲಿ ಪಕ್ಷಸಂಘಟನೆಗೆ ಕೆಲಸ ಮಾಡಬೇಕು. ಕಾರ್ಯಕರ್ತರನ್ನು ಕಡೆಗಣಿಸದೆ ಎಲ್ಲರೊಂದಿಗೆ ಬೆರೆತು ವಿವಿಧ ಘಟಕಗಳ ಪದಾಧಿಕಾರಿಗಳು ಕೆಲಸ ಮಾಡಬೇಕು ಕಿವಿಮಾತು ಹೇಳಿದರು.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಪಕ್ಷ ಸಂಘಟನೆಗೆ ದೊಡ್ಡ ಸವಾಲಿದ್ದು, ಬಿಜೆಪಿ ಸವಾಲುಗಳನ್ನು ಎದುರಿಸುವ ಜೊತೆಗೆ ಬೇರೆ ಪಕ್ಷಗಳ ನಾಯಕರು ಮಾಡುವ ಅಪಪ್ರಚಾರಕ್ಕೆ ಪ್ರತ್ಯುತ್ತರ ಕೊಡಬೇಕು. ಸಿದ್ದರಾಮಯ್ಯ ಸರ್ಕಾರದ 5 ವರ್ಷಗಳ ಆಡಳಿತದಲ್ಲಿ ಜಾರಿಗೆ ತಂದ ಜನಪರ ಯೋಜನೆಗಳೂ ಜನತೆಗೆ ತಿಳಿಸಬೇಕು ಎಂದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ವರುಣಾ ವಿಧಾನಸಭಾ ಕ್ಷೇತ್ರದ ರಾಜೀವ್‌ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಅಧಿಕಾರ ವಿಕೇಂದ್ರೀಕರಣದ ಉದ್ದೇಶ ಹೊಂದಿರುವ ಪಂಚಾಯತ್ ರಾಜ್ ವ್ಯವಸ್ಥೆಯು ಕಾಂಗ್ರೆಸ್ ಕನಸು. ಸ್ಥಳೀಯ ಜನತೆಗೆ ಅಧಿಕಾರ ನೀಡಬೇಕೆಂಬ ಕಾರಣಕ್ಕೆ ರಾಜೀವ್ ಗಾಂಧಿಯವರು 3 ಹಂತದ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ತಂದರು. ಇದು ಅಧಿಕಾರ ವಿಕೇಂದ್ರೀಕರಣ ಮೂಲಕ ದೇಶದಲ್ಲಿ ಲಕ್ಷಾಂತರ ನಾಯಕರು ರಾಜಕೀಯವಾಗಿ ಬೆಳೆಯಲು ಕಾರಣವಾಯಿತು. ಆದರೆ ಇಂದಿನ ರಾಜ್ಯ ಬಿಜೆಪಿ ಸರ್ಕಾರ, ಜಿಪಂ, ತಾಪಂ ಅಧಿಕಾರಾವಧಿ ಪೂರ್ಣಗೊಂಡು ವರ್ಷಗಳೇ ಕಳೆದರೂ ಚುನಾವಣೆ ನಡೆಸಿಲ್ಲ. ಅಧಿಕಾರ ವಿಕೇಂದ್ರೀಕರಣದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಿಜೆಪಿ ಕೇಂದ್ರೀಕೃತಗೊಳಿಸಲು ಹೊರಟಿದೆ ಎಂದು ಆರೋಪಿಸಿದರು.

ಇದೇ ಸಂದರ್ಭದಲ್ಲಿ ರಾಜೀವ್‌ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ವರುಣ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ತೇಜು ಸೇರಿದಂತೆ ಪದಾಧಿಕಾರಿಗಳು ಪದಗ್ರಹಣ ಮಾಡುವ ಜೊತೆಗೆ ನೇಮಕಾತಿ ಪತ್ರಗಳನ್ನು ಸ್ವೀಕರಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ರಾಜೀವ್‌ಗಾಂಧಿ ಪಂಚಾಯತ್ ರಾಜ್ ಸಂಘಟನೆ ಜಿಲ್ಲಾಧ್ಯಕ್ಷ ಬಿ.ಮಲ್ಲೇಶ್ ಕೋಟೆ, ವರುಣ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಮೇಶ್ ಮುದ್ದೇಗೌಡ, ತಗಡೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಂಗಸ್ವಾಮಿ ಮತ್ತಿತರರು ಹಾಜರಿದ್ದರು.

# ಕಲ್ಲು–ಮುಳ್ಳು ದಾಟಿ ಕಠಿಣ ಸಾಧನೆಯ ಶಿಖರವನ್ನೇರಬೇಕು

### ಡಾ.ಲತಾ ರಾಜಶೇಖರ್ ಅಭಿಪ್ರಾಯ



ಮೈಸೂರು, ಅ.30(ಎಸ್‌ಪಿಎನ್)–ಸಾಧನೆಯ ಹಾದಿ ಬಲು ಕಠಿಣ. ಆ ಮಾರ್ಗದಲ್ಲಿ ಸಾಗಬೇಕಾದರೆ, ಅನೇಕ ಕಲ್ಲು–ಮುಳ್ಳು ದಾಟಿ ಸಾಧನೆಯ ಶಿಖರವನ್ನೇರಬೇಕು ಎಂದು ಹಿರಿಯ ಕವಿಯತ್ರಿ ಡಾ.ಲತಾ ರಾಜಶೇಖರ್ ಅಭಿಪ್ರಾಯಪಟ್ಟರು. ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಐಡಿಯಲ್ ಜಾವಾ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮೈಸೂರು ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದೊಂದಿಗೆ ನಾಡಹಬ್ಬ ದಸರಾ ಮಹೋತ್ಸವದ ಸವಿನೆನಪಿನ ಅಂಗವಾಗಿ ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಎನ್.ವಿ.ರಮೇಶ್ ಅವರಿಗೆ 'ಜೀವಮಾನ ಸಾಧಕ ರಾಜ್ಯ ಪ್ರಶಸ್ತಿ–2022' ಮತ್ತು ನವರಾತ್ರಿ ಗೊಂಬೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ ಅವರು, ಮಾತನಾಡಿದರು.

ಈ ವೇದಿಕೆಯಲ್ಲಿ ಸನ್ಮಾನಿತರಾಗಿರುವ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಎನ್.ವಿ.ರಮೇಶ್ ಅವರು ಆಕಾಶವಾಣಿಯಲ್ಲಿ ಸಾಕಷ್ಟು ಜನಪರ ಕೆಲಸ ಮಾಡಿ, ಜನಾನುರಾಗಿಯಾಗಿದ್ದರು. ಅಂತಹವರನ್ನು ಹುಡುಕಿ ಕಸಾಪ ಹಾಗೂ ಸ್ನೇಹ ಸಿಂಚನ ಟ್ರಸ್ಟ್‌ನ ಪದಾಧಿಕಾರಿಗಳು 'ಜೀವಮಾನ ಸಾಧಕ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಿರುವುದು ಉತ್ತಮ ಬೆಳವಣಿಗೆ ಎಂದರು.

**ಬಹುಮಾನ ವಿತರಣೆ:** ನವರಾತ್ರಿ ಗೊಂಬೆ ಪ್ರದರ್ಶನ ವಿಜೇತರಾದ ಕೌಶಲ್ಯ, ರಾಜೇಶ್ವರಿ, ಲಲಿತಾ, ರತ್ನ, ಇಂದ್ರಾಣಿ, ಶ್ಯಾಮಲಾ ನಾಗರಾಜ್, ಸ್ವರೂಪಿಣಿ, ಸವಿತಾ ದಿನೇಶ್, ಇಂದಿರಾ ನಾಯ್ಡು, ಪದ್ಮಜಾ, ಶಾಂತಿ ಧರ್ಮರಾಜು, ಜಯಶ್ರೀ, ಆಯುಷ್, ಅಕ್ಷಯ್, ಅನ್ನಪೂರ್ಣ, ಅರ್ಪಿತ, ಶ್ಯಾಮಲಾ ಪ್ರಸನ್ನ, ತನುಜಾ ಅರವಿಂದ್, ಅನುಸೂಯದೇವಿ, ಭಾನುಮತಿ, ಭಾರತೀ ಶಂಕರ್, ಬಿಂದು ಬಾಲಾಜಿ, ಡಾ.ರಾಜಗೋಪಾಲ್, ಚೂಡಾಮಣಿ, ದೀಪಾಕಿರಣ್, ಗೀತಾ ಶ್ರೀಹರಿ, ಹೇಮಲತಾ, ಕಲ್ಪನಾ ಅರಸ್, ಕಲ್ಯಾಣ್, ಲತಾ, ನಾಗಪ್ರಸಾದ್, ರಂಗನಾಥ್, ರೇವತಿ, ಶ್ರೀದೇವಿ, ವನಿತ, ವೆಂಕಟೇಶ್ ಅವರಿಗೆ ಬಹುಮಾನ ವಿತರಿಸಲಾಯಿತು.

ಈ ವೇಳೆ ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಮೈಸೂರು ಕುಟುಂಬ ಸಲಹಾ ಕೇಂದ್ರದ ಡಾ.ಮಂಜುಳಾ ಉಮೇಶ್, ಅಮೀನಾ, ಹೇಮಲತಾ ಕುಮಾರಸ್ವಾಮಿ, ಪದ್ಮಾ ಪಾಂಡುರಂಗ, ವಿಜಯಲಕ್ಷ್ಮಿ ಉಪಸ್ಥಿತರಿದ್ದರು.



ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಗಾಯಿತ್ರಿಪುರಂ ವೃತ್ತದಲ್ಲಿ ಮಾಜಿ ಕಾರ್ಪೋರೇಟರ್ ಹಾಗೂ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎನ್.ಧ್ರುವರಾಜ್ ನೇತೃತ್ವದಲ್ಲಿ ಅಪ್ಪು ಅಭಿಮಾನಿಗಳು ಭಾನುವಾರ ಅನ್ನಸಂತರ್ಪಣೆ ನಡೆಸಿದರು.

# ಮೈಸೂರಲ್ಲಿ ಮೋಟೋ ವಾಲ್ಟ್ ಶೋರೂಂ ಉದ್ಘಾಟನೆ

ಮೈಸೂರು, ಅ.30(ಜಿಎ)– ಮೈಸೂರಿನ ಮೋಟರ್ ಬೈಕ್ ಪ್ರೇಮಿಗಳಿಗಾಗಿ ಮೋಟೋ ವಾಲ್ಟ್ ಎಕ್ಸ್‌ಕ್ಲೂಸಿವ್ ಶೋರೂಂ ಅನ್ನು ಪ್ರಾರಂಭಿಸಿದೆ. ನಗರದ ಹುಣಸೂರು ರಸ್ತೆಯಲ್ಲಿರುವ ಹಿನಕಲ್ ಬಳಿ ಇತ್ತೀಚೆಗೆ ಮೋಟೋ ವಾಲ್ಟ್‌ನ ದೇಶದ ಐದನೇ ಶಾಖೆಯನ್ನು, ಮಹಾವೀರ್ ಗ್ರೂಪ್ ಕಂಪನಿಯ ಆದೀಶ್ವರ್ ಆಟೋ ರೈಡ್ ಇಂಡಿಯಾ ಮೈಸೂರಿಗರಿಗೆ ಪರಿಚಯಿಸಿದೆ.

ನಿತಿನ್ ಪುರುಷೋತ್ತಮ್ ಅವರ ನೇತೃತ್ವದಲ್ಲಿ ಆರಂಭವಾಗಿರುವ ಶೋರೂಂ ಹೊಸ ಅತ್ಯಾಧುನಿಕ ಸೌಲಭ್ಯ ಒಳಗೊಂಡಿದ್ದು, ಇಲ್ಲಿ ವಿವಿಧ ಬ್ರಾಂಡ್‌ಗಳ ಸೂಪರ್ ಬೈಕ್‌ಗಳನ್ನು ವಿನ್ಯಾಸ ಮಾಡಲಾಗುತ್ತದೆ. ಒಂದೇ ಸೂರಿನಡಿ ಸರಕು ಮತ್ತು ಬೈಕ್‌ಗಳ ಆಕ್ಸಸರಿಸ್ ಮತ್ತು ಬಿಡಿಭಾಗಗಳು ಹಾಗೂ ಸೇವೆ ಒದಗಿಸಲಿದೆ.

ಈ ಕುರಿತು ಆದೀಶ್ವರ್ ಆಟೋ ರೈಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಝಾಬಾಖ್ ಮಾತನಾಡಿ, ಶುಭಾ ಮೋಟಾರ್ಸ್‌ನ ಸಹಯೋಗದೊಂದಿಗೆ ಮೈಸೂರಿನಲ್ಲಿ ಮೋಟೋ ವಾಲ್ಟ್‌ನ ಶಾಖೆಯನ್ನು ಪರಿಚಯಿಸುತ್ತಿರುವುದಕ್ಕೆ ನಮಗೆ ಸಂತೋಷವಾಗಿದೆ ಎಂದರು.

ಭಾರತೀಯ ಮೋಟರ್ ಬೈಕ್ ಉತ್ಸಾಹಿಗಳಿಗೆ ಜಾಗತಿಕವಾಗಿ ಸ್ವೀಕರಿಸಲಾದ ಬಹು ಬ್ರಾಂಡ್‌ನ ಬೈಕ್‌ಗಳನ್ನು ಒದಗಿಸಲು ನಾವು ಎದುರು ನೋಡುತ್ತಿದ್ದೇವೆ. ಮೋಟರ್ ಬೈಕ್‌ಗೆ ಜಾಗತಿಕವಾಗಿ ಸೆಳೆತವಿದೆ. ಭಾರತದ ಮತ್ತಷ್ಟು ಸ್ಥಳಗಳಲ್ಲಿ ಸಂಸ್ಥೆ ಪ್ರವೇಶಿಸುವ ಉದ್ದೇಶವನ್ನು ಹೊಂದಿದ್ದು, ಭಾರತದಲ್ಲಿನ ನಮ್ಮ ಪಾಲುದಾರರೊಂದಿಗೆ ಗ್ರಾಹಕ ಸೇವೆ, ನಮ್ಮ ಪೋಷಕರಿಗೆ ಪ್ರೀಮಿಯಂ ಖರೀದಿ ಮತ್ತು ಮಾಲೀಕತ್ವದ ಅನುಭವವನ್ನು ನಾವು ಖಂಡಿತವಾಗಿ ಒದಗಿಸುತ್ತೇವೆ ಎಂದರು.

ಈ ವೇಳೆ ನಗರದ ಮೋಟೋ ವಾಲ್ಟ್ ಡೀಲರ್ ಪ್ರಿನ್ಸಿಪಾಲ್ ನಿತಿನ್ ಪುರುಷೋತ್ತಮ್ ಮಾತನಾಡಿ, ಈ ಹೊಸ ಸೌಲಭ್ಯದ ಉದ್ಘಾಟನೆಯೊಂದಿಗೆ, ಸ್ಥಳೀಯ ಮೋಟೋ ಉತ್ಸಾಹಿಗಳ ಕನಸುಗಳನ್ನು ನನಸು ಮಾಡಲು ಮತ್ತು ಅವರಿಗೆ ಜಾಗತಿಕ ಬ್ರಾಂಡ್‌ಗಳನ್ನು ಪರಿಚಯಿಸಲು ನಾವು ಎದುರು ನೋಡುತ್ತಿದ್ದೇವೆ ಎಂದರು.

ನಮ್ಮ ಸಂಸ್ಥೆ ಮೂಲಕ ಗ್ರಾಹಕರಿಗೆ ಯಾವುದೇ ತೊಂದರೆ ಇಲ್ಲದೆ ಮಾರಾಟ ಮತ್ತು ಸೇವೆ ನೀಡುವ ಮೂಲಕ ನಮ್ಮ ಗ್ರಾಹಕರಿಗೆ ಪ್ರೀಮಿಯಂ ಅನುಭವವನ್ನು ಒದಗಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದರು.

ಮೋಟೊ ವಾಲ್ಟ್ ಹಂತ ಹಂತವಾಗಿ ಮೈಸೂರು ಸೇರಿದಂತೆ ದೇಶಾದ್ಯಂತ 23 ಟಚ್ ಪಾಯಿಂಟ್‌ಗಳನ್ನು ಸ್ಥಾಪಿಸಲಿದೆ ಮತ್ತು ಈ ಸೌಲಭ್ಯಗಳು ಮೋಟೋ ಮೊರಿನಿ ಮತ್ತು ಜೊಂಟೆಸ್ ಶ್ರೇಣಿಯ ಸೂಪರ್ ಬೈಕ್‌ಗಳನ್ನು ಪ್ರದರ್ಶಿಸುತ್ತವೆ. ಮುಂಬರುವ ತಿಂಗಳುಗಳಲ್ಲಿ ಇನ್ನೂ ಅನೇಕ ವಿಶ್ವದರ್ಜೆಯ ಬ್ರಾಂಡ್‌ಗಳನ್ನು ಪರಿಚಯಿಸಲಾಗುವುದು.

ಮೋಟೋ ವಾಲ್ಟ್ ವೃತ್ತಿಪರರಿಗೆ ಜಾಗತಿಕ ಮಾನದಂಡಗಳು ಮತ್ತು ಮಾರ್ಗಸೂಚಿಗಳ ಪ್ರಕಾರವೇ ಮಾರಾಟ, ಸೇವೆ ಮತ್ತು ಗ್ರಾಹಕ ಅನುಭವದ ದೃಷ್ಟಿಯಿಂದ ಅತ್ಯುತ್ತಮವಾದದ್ದನ್ನು ನೀಡಲು ತರಬೇತಿ ನೀಡಲಿದ್ದು, ಗ್ರಾಹಕರಿಗೆ ಅತ್ಯುತ್ತಮ ದರ್ಜೆಯೊಂದಿಗೆ ಒತ್ತಡ–ಮುಕ್ತ ಮಾಲೀಕತ್ವವನ್ನು ಆನಂದಿಸಲು ಅನುವು ಮಾಡಿಕೊಡುತ್ತದೆ ಎಂದು ತಿಳಿಸಿದರು.




**ಉತ್ಪನ್ನದ ಕೊಡುಗೆಗಳು**

**ಮೋಟೋ ಮೊರಿನಿ:** ಎಕ್ಸ್–ಕೇಪ್ 650; ಎಕ್ಸ್–ಕೇಪ್ 650 ಎಕ್ಸ್; ಸೀಮೆರ್ಜೋ ರೆಟ್ರೋ ಸ್ಟ್ರೀಟ್ ಮತ್ತು ಸೀಯೆಮೆರ್ಜೋ – ಸ್ಕ್ರಾಂಬ್ಲರ್.

**ಜೊಂಟೆಸ್:** 350ಆರ್; 350ಎಕ್ಸ್; ಜಿಕೆ350; 350 ಟಿ ಮತ್ತು 350 ಟಿ ಎಡಿವಿ.

# ಮಿನಿವಿಧಾನಸೌಧದ ಲಿಫ್ಟ್ ರಿಪೇರಿಗೆ ಎಂಎಲ್‌ಸಿ ಮಂಜೇಗೌಡ 2.50 ಲಕ್ಷ ರೂ. ವೈಯಕ್ತಿಕ ನೆರವು

ಮೈಸೂರು, ಅ.30– ಎರಡು ವರ್ಷದಿಂದ ಕೆಟ್ಟು ನಿಂತಿದ್ದ ಮೈಸೂರು ಮಿನಿವಿಧಾನಸೌಧದ ಲಿಫ್ಟ್ ರಿಪೇರಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ 2.50 ಲಕ್ಷ ರೂ. ವೈಯಕ್ತಿಕ ನೆರವು ನೀಡಿದ್ದಾರೆ.



ತಹಶೀಲ್ದಾರ್ ಕಚೇರಿ ಸೇರಿದಂತೆ ವಿವಿಧ ಇಲಾಖೆ ಕಚೇರಿಗಳು ಮೇಲಂತಸ್ತಿನಲ್ಲಿವೆ. ವಿಶೇಷಚೇತನರು, ವೃದ್ಧರು, ಅನಾರೋಗ್ಯವಿದ್ದವರಿಗೆ ಅನುಕೂಲವಾಗಲೆಂದು ಇಲ್ಲಿ ಲಿಫ್ಟ್ ಅಳವಡಿಸಲಾಗಿದೆ. ಆದರೆ ಅದು ಕೆಟ್ಟು ನಿಂತು ವರ್ಷಗಳೇ ಕಳೆದರೂ ದುರಸ್ತಿ ಭಾಗ್ಯ ಕೂಡಿ ಬಂದಿರಲಿಲ್ಲ. ಇದರಿಂದ ಬಹಳಷ್ಟು ಜನ ತುಂಬಾ ತೊಂದರೆ ಅನುಭವಿಸುತ್ತಿದ್ದರು. ಮೆಟ್ಟಿಲುಗಳನ್ನು ಹತ್ತಲು ಹರಸಾಹಸಪಡುತ್ತಿದ್ದರು. ಈ ಬಗ್ಗೆ ಸಾರ್ವಜನಿಕರು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಗಮನಕ್ಕೆ ತಂದಿದ್ದರು. ಅಲ್ಲದೆ ತಾಲೂಕು ಕಚೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಶಕ್ತರ ಹೆಣಗಾಟವನ್ನು ಸ್ವತಃ ಕಂಡಿದ್ದ ಮಂಜೇಗೌಡರು ಮಾನವೀಯ ನೆಲೆಗಟ್ಟಿನಲ್ಲಿ ಕಷ್ಟಕ್ಕೆ ಸ್ಪಂದಿಸಿದ್ದಾರೆ. ಲಿಫ್ಟ್ ದುರಸ್ತಿಗೆ ಅಗತ್ಯವಾದ 2.50 ಲಕ್ಷ ರೂ. ಮೊತ್ತದ ಚೆಕ್ ಅನ್ನು ತಹಶಿಲ್ದಾರ್ ಬಿ.ಎನ್.ಗಿರೀಶ್ ಅವರಿಗೆ ಹಸ್ತಾಂತರಿಸುವ ಮೂಲಕ ಮಂಜೇಗೌಡರು ಜನಪ್ರತಿನಿಧಿಗಳಿಗೆ ಮಾದರಿಯಾಗಿದ್ದಾರೆ. ಈ ವೇಳೆ ಮಂಜೇಗೌಡರ ಆಪ್ತ ಸಹಾಯಕ ಸುರೇಂದ್ರ ಹಾಗೂ ಕಚೇರಿ ಸಿಬ್ಬಂದಿ ಇದ್ದರು.

ಹಸಿರು ನಮ್ಮ ಉಸಿರು

## ಭಗತ್ ಸಿಂಗ್ ಪಾತ್ರ ಅಭ್ಯಾಸ ವೇಳೆ ಫ್ಯಾನಿಗೆ ಹಗ್ಗ ಬಿಗಿದು ಬಾಲಕ ಸಾವು

ಚಿತ್ರದುರ್ಗ, ಅ.30– ಈಗಿನ ಕಾಲದ ಮಕ್ಕಳು ಬಹಳ ಸೂಕ್ಷ್ಮ, ಒಂಚೂರು ಹೆಚ್ಚು ಕಡಿಮೆ ಆದರೂ ಪ್ರಾಣವನ್ನೇ ಬಿಡುವ ಮನಸ್ಥಿತಿಯನ್ನು ಹೊಂದಿರುತ್ತಾರೆ ಎಂದು ಜನಸಾಮಾನ್ಯರು ಮಾತನಾಡಿಕೊಳ್ಳುವುದನ್ನು ಕೇಳಿದ್ದೇವೆ. ಕೋಟೆನಾಡು ಚಿತ್ರದುರ್ಗದಲ್ಲಿ ಅಂತಹದ್ದೊಂದು ಅಚಾತುರ್ಯ ನಡೆದುಹೋಗಿದೆ. ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆಂದು ಬಾಲಕ ಭಗತ್ ಸಿಂಗ್ ಪಾತ್ರವನ್ನು ಅಭ್ಯಾಸ ಮಾಡುತ್ತಿದ್ದ. ಶಾಲೆಯಿಂದ ಮನೆಗೆ ಬಂದು ಪಾತ್ರವನ್ನು ಅಭ್ಯಾಸ ಮಾಡುತ್ತಿರುವಾಗ ನಿಜಯವಾಗಿಯೂ ಫ್ಯಾನಿಗೆ ಹಗ್ಗ ಬಿಗಿದು ಕೊರಳೊಡ್ಡಿ ಸಾವಿಗೆ ಶರಣಾಗಿದ್ದಾನೆ. ಮೃತ ಬಾಲಕನನ್ನು ಚಿತ್ರದುರ್ಗದ ಕೆಳಗೋಟೆ ಬಡಾವಣೆಯ ಸಂಜಯ್ ಗೌಡ(12) ಎಂದು ಗುರುತಿಸಲಾಗಿದೆ. ಇಲ್ಲಿನ ಎಸ್‌ಎಲ್‌ವಿ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದ ಸಂಜಯ್, ಭಗತ್ ಸಿಂಗ್ ಪಾತ್ರದಲ್ಲಿ ಅಭಿನಯಿಸಲು ಭಾರೀ ಸಿದ್ಧತೆ ನಡೆಸುತ್ತಿದ್ದ, ನಿನ್ನೆ ಮನೆಗೆ ಬಂದ ಬಳಿಕ ರಿಹರ್ಸಲ್‌ಗೆ ಮುಂದಾಗಿದ್ದ ಸಂಜಯ್, ಮನೆಯಲ್ಲಿ ಯಾರೂ ಇಲ್ಲದ ವೇಳೆ ಫ್ಯಾನಿಗೆ ನೂಲಿನ ಹಗ್ಗ ಬಿಗಿದು ಮಂಚದ ಮೇಲೆ ನಿಂತಿದ್ದಾನೆ. ಬಳಿಕ ತನ್ನ ಮುಖಕ್ಕೆ ಉಲ್ಲನ್ ಟೋಪಿ ಹಾಕಿಕೊಂಡು ಮಂಚದಿಂದ ಜಿಗಿದಿದ್ದಾನೆ. ಜಿಗಿದ ರಭಸಕ್ಕೆ ಸ್ಥಳದಲ್ಲಿಯೇ ಸಂಜಯ್ ಪ್ರಾಣಪಕ್ಷಿ ಹಾರಿಹೋಗಿದೆ. ಸಂಜೆ ಮನೆಗೆ ಬಂದ ಪೋಷಕರು ಮಗ ಫ್ಯಾನಿನಲ್ಲಿ ನೇತಾಡುತ್ತಿರುವುದನ್ನು ಕಂಡು ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಅಷ್ಟೊತ್ತಿಗಾಗಲೇ ಬಾಲಕ ಕೊನೆಯುಸಿರೆಳೆದಿದ್ದ. ಚಿತ್ರದುರ್ಗ ಬಡಾವಣೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

# ಹಿಂದೂ ರಾಜರು, ಚಕ್ರವರ್ತಿಗಳ ಬಗ್ಗೆ ಹೆಚ್ಚು ಜನರಿಗೆ ತಿಳಿದಿಲ್ಲ

### ಶಾಸಕ ಮಾಡಾಳು ವಿರೂಪಾಕ್ಷಪ್ಪ ವಿಷಾದ



ಮೈಸೂರಿನ ಮಾಧವಕೃಪಾ ಸಭಾಂಗಣದಲ್ಲಿ ಭಾನುವಾರ 'ಸಾಂಸ್ಕೃತಿಕ ಸೊಬಗಿನ ಮೈಸೂರು' ಕೈಹೊತ್ತಿಗೆಯನ್ನು ಕೆಎಸ್‌ಡಿಎಲ್ ಅಧ್ಯಕ್ಷರೂ ಆದ ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜಿ ಮಹಾರಾಜ್, ಆರ್‌ಎಸ್‌ಎಸ್ ಮುಖಂಡರಾದ ಮ.ವೆಂಕಟರಾಮು, ಡಾ.ವಾಮನರಾವ್ ಬಾಪಟ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು,ಅ.30(ಎಸ್‌ಬಿಡಿ)– ಹಿಂದೂ ರಾಜರು ಹಾಗೂ ಚಕ್ರವರ್ತಿಗಳ ಬಗ್ಗೆ ಹೆಚ್ಚು ಜನರಿಗೆ ತಿಳಿದಿಲ್ಲ ಎಂದು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್(ಕೆಎಸ್‌ಡಿಎಲ್)ನ ಅಧ್ಯಕ್ಷರೂ ಆದ ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ವಿಷಾದಿಸಿದರು.

ಮೈಸೂರಿನ ಮಾಧವಕೃಪಾ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ವಿಕ್ರಮ ಉಜ್ವಲ ರಾಷ್ಟ್ರೀಯ ಕನ್ನಡ ಮಾಸಪತ್ರಿಕೆ ಹೊರತಂದಿರುವ 'ಸಾಂಸ್ಕೃತಿಕ ಸೊಬಗಿನ ಮೈಸೂರು' ಕೈ ಹೊತ್ತಿಗೆ( ಕಾಫಿ ಟೇಬಲ್ ಬುಕ್) ಬಿಡುಗಡೆ ಮಾಡಿ ಮಾತನಾಡಿದ ಅವರು, ಭಾರತದಲ್ಲಿ 750 ವರ್ಷಗಳ ಕಾಲ ಪರಕೀಯರು ಆಡಳಿತ ನಡೆಸಿದರು. ಆ ಸಂದರ್ಭದಲ್ಲಿ ಬೆದರಿಸಿ ಅಥವಾ ಆಮಿಷದಿಂದ ಚರಿತ್ರೆ ಬರೆಸಿದರು. ಪರಿಣಾಮ ಹಿಂದೂ ರಾಜರು ಹಾಗೂ ಚಕ್ರವರ್ತಿಗಳ ಬಗ್ಗೆ ಹೆಚ್ಚು ಜನರಿಗೆ ತಿಳಿಯದಂತಾಯಿತು ಎಂದು ಅಭಿಪ್ರಾಯಿಸಿದರು.

ಕೆಳದಿ ಚೆನ್ನಮ್ಮ ವಿರೋಧದ ನಡುವೆಯೂ ಛತ್ರಪತಿ ಶಿವಾಜಿಯ ಪುತ್ರ ರಾಜರಾಮನಿಗೆ ಆಶ್ರಯ ನೀಡಿದರು. ಅದರಿಂದ ಸಿಟ್ಟಿಗೆದ್ದ ಔರಂಗಜೇಬ ತನ್ನ ದೊಡ್ಡ ಸೈನ್ಯವನ್ನು ಕೆಳದಿ ಚೆನ್ನಮ್ಮನ ವಿರುದ್ಧ ಯುದ್ಧಕ್ಕೆ ಕಳುಹಿಸಿದ. ಆದರೆ ಔರಂಗಜೇಬನ ಸೈನ್ಯ ದಾಳಿ ನಡೆಸುವ ಹೊನ್ನಾಳಿ ಭಾಗದ ಗ್ರಾಮಸ್ಥರನ್ನೆಲ್ಲಾ ದವಸ ಧಾನ್ಯಗಳ ಸಹಿತ ಕಾಡಿಗೆ ಕಳುಹಿಸಿದ್ದರಿಂದ ಔರಂಗಜೇಬನ ಸೈನ್ಯಕ್ಕೆ ಆಹಾರ ಸಿಗಲಿಲ್ಲ. ಅಲ್ಲದೆ ಜೋರು ಮಳೆಯ ನಡುವೆ ಔರಂಗಜೇಬನ ಮಗನನ್ನು ಹತ್ಯೆ ಮಾಡಲಾಯಿತು. ಇದರಿಂದ ಹೆದರಿದ ಆತ, ನಿಮ್ಮ ತಂಟೆಗೆ ಬರುವುದಿಲ್ಲ ಆದರೆ ನಮ್ಮ ಸೈನ್ಯಕ್ಕೆ ಆಹಾರ ಧಾನ್ಯದ ವ್ಯವಸ್ಥೆ ಮಾಡಿ ವಾಪಸ್ಸಾಗಲು ಅವಕಾಶ ನೀಡುವಂತೆ ಪತ್ರ ಬರೆದು ಮನವಿ ಮಾಡಿದ್ದ. ಇಂತಹ ಅದೆಷ್ಟೋ ಐತಿಹಾಸಿಕ ಸಂಗತಿಗಳು ತುಂಬಾ ಜನರಿಗೆ ತಿಳಿದಿಲ್ಲ ಎಂದರು.

**ಮೋದಿ ಗಟ್ಟಿ ನಾಯಕ:** ಭಾರತ ಹಿಂದೂ ರಾಷ್ಟ್ರ. ಆರ್‌ಎಸ್‌ಎಸ್ ನೀಡಿದ ಗಟ್ಟಿ ನಾಯಕ ನರೇಂದ್ರ ಮೋದಿ ಅವರು ಪ್ರಧಾನಿ ಆದ ಪರಿಣಾಮ ವಿಶ್ವದಲ್ಲಿ ಭಾರತ ಎತ್ತರಕ್ಕೆ ಬೆಳೆದಿದೆ. ಹಿಂದೂ ಸಂಘಟನೆ, ರಾಷ್ಟ್ರೀಯತೆ, ವ್ಯಕ್ತಿತ್ವ ನಿರ್ಮಾಣ ಇನ್ನಿತರ ಮೌಲ್ಯಗಳನ್ನು ಆಧರಿಸಿದ ವಿಚಾರಧಾರೆ ಮೂಲಕ ವಿಕ್ರಮ ಪತ್ರಿಕೆ 7 ದಶಕಗಳಿಂದ ಉತ್ತಮ ಸೇವೆ ಸಲ್ಲಿಸುತ್ತಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಜನರಿಗೆ ತಿಳಿಯದಿರುವ ಐತಿಹಾಸಿಕ ಘಟನೆಗಳನ್ನು ತೆರೆದಿಡುವ ಕಾರ್ಯ ಮುಂದುವರೆಸಬೇಕೆಂದು ಆಶಿಸಿದರು.

**ಓದುವ ಹವ್ಯಾಸ ಬೆಳೆಯಬೇಕು:** ಆರ್‌ಎಸ್‌ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ ಮ.ವೆಂಕಟರಾಮು ಮಾತನಾಡಿ, ಮಕ್ಕಳಾದಿಯಾಗಿ ಹಿರಿಯರವರೆಗೂ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಅಶೋಕಪುರಂನ ಮೊದಲ ಸ್ವಯಂ ಸೇವಕ ರಾಮಕೃಷ್ಣ ಅವರು ನನಗೆ ವಿಕ್ರಮ ಪತ್ರಿಕೆ ಓದುವ ಹವ್ಯಾಸ ಬೆಳಸಿದರು. ವಿ.ಶ್ರೀನಿವಾಸ್ ಪ್ರಸಾದ್ ಅವರಂತೂ ಒಂದು ಅಕ್ಷರವನ್ನೂ ಬಿಡದಂತೆ ಓದುತ್ತಿದ್ದರು. ಹಿಂದೆ ರಾಷ್ಟ್ರೀಯ ಸ್ವಯಂ ಸೇವಕರ ಬಳಿ ಇರುತ್ತಿದ್ದ ಈ ಪತ್ರಿಕೆ ಇದೀಗ ಅಂಗಡಿಗಳಲ್ಲೂ ಮಾರಾಟವಾಗುತ್ತಿರುವುದು ಸಂತಸದ ಸಂಗತಿ ಎಂದರು.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜಿ ಮಹಾರಾಜ್ ಅವರು ಆಶೀರ್ವಚನ ನೀಡಿದರು. ಆರ್‌ಎಸ್‌ಎಸ್ ವಿಭಾಗ ಸಂಚಾಲಕ ಡಾ.ವಾಮನರಾವ್ ಬಾಪಟ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ಕೆಎಸ್‌ಡಿಎಲ್ ನಿರ್ದೇಶಕಿ ನಿವೇದಿತಾ ರಾಜು, ಲೇಖಕ ಡಾ.ವಿ.ರಂಗನಾಥ್ ಮತ್ತಿತರರು ಉಪಸ್ಥಿತರಿದ್ದರು.

## ನಕ್ಕರೆ ಅದೇ ಸ್ವರ್ಗ

ಗುಂಡ ಕುಡಿದು ಮನೆಗೆ ಬಂದಿದ್ದ...

ತಂದೆಗೆ ಡೌಟ್ ಬರದೆ ಇರಲಿ ಎಂದು ಲ್ಯಾಪ್‌ಟಾಪ್ ಓಪನ್ ಮಾಡಿಕೊಂಡು ಕುಳಿತ

ತಂದೆ : ಕುಡಿದು ಬಂದಿದ್ದೀಯಾ...?

ಗುಂಡ : ಇಲ್ಲ...

ತಂದೆ : ಮತ್ತೆ ನನ್ನ ಸೂಟ್‌ಕೇಸ್ ಓಪನ್ ಮಾಡಿಕೊಂಡು ಏನ್ ಮಾಡ್ತಾ ಇದ್ದೀಯಾ!

ಮೈಸೂರು ಮಿತ್ರ

ಸೋಮವಾರ, 31 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

**ಅಮೃತವಾಹಿನಿ.........**

'ಆಟದಲ್ಲೇ ಆಗಲಿ, ಜೀವನದಲ್ಲೇ ಆಗಲಿ ಗುರಿ ಇಲ್ಲದೆ ಗೆಲುವು ಅಸಾಧ್ಯ'

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಸಾಣಿಯಂತ ಸ್ನೇಹಿತ್ನಂತ, ಗಂಧದವನ ಜೊತೆ ಗುದ್ದಾಟ ಮೇಲು.

# ವೈವಿಧ್ಯತೆಯ ಏಕತೆ ಸಾರುವ ರಾಷ್ಟ್ರೀಯ ಏಕೀಕರಣ

ರಾಷ್ಟ್ರೀಯ ಏಕೀಕರಣವು ಅವರ ಜಾತಿ, ಮತ, ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ಜನರ ನಡುವಿನ ಬಾಂಧವ್ಯ ಮತ್ತು ಒಗ್ಗಟ್ಟಾಗಿರುತ್ತದೆ. ಇದು ಒಂದು ದೇಶದಲ್ಲಿ ಸಮುದಾಯಗಳು ಮತ್ತು ಸಮಾಜದೊಳಗೆ ಏಕತೆ, ಸಹೋದರತೆ ಮತ್ತು ಸಾಮಾಜಿಕ ಐಕ್ಯತೆಯ ಭಾವನೆಯಾಗಿದೆ. ವೈವಿಧ್ಯತೆಗಳ ಹೊರತಾಗಿಯೂ ದೇಶವನ್ನು ಏಕತೆ ಮತ್ತು ಒಳಗಿನಿಂದ ಬಲವಾಗಿಡಲು ರಾಷ್ಟ್ರೀಯ ಏಕೀಕರಣವು ಸಹಾಯ ಮಾಡುತ್ತದೆ. ಸಮಗ್ರವಾಗಿ ಉಳಿಯುವ ರಾಷ್ಟ್ರವು ಯಾವಾಗಲೂ ಅಭಿವೃದ್ಧಿ ಮತ್ತು ಸಮೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತದೆ ಎಂಬ ಅಂಶದಿಂದ ರಾಷ್ಟ್ರೀಯ ಏಕೀಕರಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬಹುದು.


ರಾಷ್ಟ್ರೀಯ ಏಕೀಕರಣವನ್ನು ಎಲ್ಲಾ ರಾಷ್ಟ್ರಗಳನ್ನು ಒಂದೇ ಸಮಗ್ರವಾಗಿ ಒಂದುಗೂಡಿಸುವ ಬಂಧ ಎಂದು ಉಲ್ಲೇಖಿಸಲಾಗುತ್ತದೆ. ದೇಶದ ಸಮಗ್ರ ಅಭಿವೃದ್ಧಿಗೆ ಇದು ಬಹಳ ಮುಖ್ಯ. ಭಾರತದಂತಹ ದೇಶದಲ್ಲಿ ರಾಷ್ಟ್ರೀಯ ಏಕೀಕರಣದ ಮಹತ್ವವು ವೈವಿಧ್ಯತೆಗಳು ಮತ್ತು ಸಾಂಸ್ಕೃತಿಕ ಭಿನ್ನತೆಗಳನ್ನು ನೋಡಿದಾಗ ಹಲವಾರು ಪಟ್ಟು ಹೆಚ್ಚಾಗುತ್ತದೆ. ಇದು ಆಧುನಿಕ ಕಾಲದಲ್ಲಿ ವಿಶೇಷವಾಗಿ ಭಾರತದಂತಹ ದೇಶದಲ್ಲಿ ಇದು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಅದು ಇನ್ನೂ ಅಭಿವೃದ್ಧಿ ಹೊಂದುತ್ತಿದೆ. ರಾಷ್ಟ್ರೀಯ ಏಕೀಕರಣವು ತನ್ನ ನಾಗರಿಕರಲ್ಲಿ ಸಹೋದರತ್ವ ಮತ್ತು ರಾಷ್ಟ್ರೀಯತೆಯ ಒಂದೇ ಎಳೆಯೊಂದಿಗೆ ಒಂದುಗೂಡಿಸುವ ಮೂಲಕ ದೇಶವನ್ನು ಚೇತರಿಸಿಕೊಳ್ಳುವಂತೆ ಮಾಡುತ್ತದೆ.

ರಾಷ್ಟ್ರೀಯ ಏಕೀಕರಣವು ದೇಶದ ನಾಗರಿಕರ ನಡುವಿನ ಏಕತೆಯ ಬಂಧವಾಗಿದೆ. ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳ ಹೊರತಾಗಿಯೂ ಏಕತೆ ಮತ್ತು ಸಾಮರಸ್ಯದ ಭಾವನೆಯಾಗಿದೆ. ರಾಷ್ಟ್ರೀಯ ಏಕೀಕರಣವು ದೇಶವು ಸಮಗ್ರವಾಗಿ ಮತ್ತು ಒಗ್ಗಟ್ಟಿನಿಂದ ಉಳಿಯಲು ಮತ್ತು ಅಭಿವೃದ್ಧಿಯ ಗುರಿಗಳತ್ತ ಮುನ್ನಡೆಯಲು ಸಹಾಯ ಮಾಡುತ್ತದೆ. ಇದು ದೇಶವನ್ನು ಒಳಗಿನಿಂದ ಬಲಗೊಳಿಸುವುದಲ್ಲದೆ ವಿದೇಶಿ ಶಕ್ತಿಗಳಿಂದ ಹೆಚ್ಚು ಸುರಕ್ಷಿತ ಮತ್ತು ಸುರಕ್ಷಿತವಾಗಿಸುತ್ತದೆ.

**ರಾಷ್ಟ್ರೀಯ ಏಕೀಕರಣದ ಪ್ರಾಮುಖ್ಯತೆ ಏನು?:** ಜಾತಿ, ಧರ್ಮ, ಲಿಂಗ ಅಥವಾ ಭೌಗೋಳಿಕ ಸ್ಥಳವನ್ನು ಲೆಕ್ಕಿಸದೆ ಸಮಾಜದ ಪ್ರತಿಯೊಂದು ವರ್ಗವನ್ನು ಒಂದುಗೂಡಿಸುವ ಮೂಲಕ ದೇಶವನ್ನು ಒಂದಾಗಿ ಮಾಡುವಲ್ಲಿ ರಾಷ್ಟ್ರೀಯ ಏಕೀಕರಣವು ಪ್ರಮುಖ ಪಾತ್ರ ವಹಿಸುತ್ತದೆ. ಇದು ಪ್ರತಿಯೊಬ್ಬ ನಾಗರಿಕರಿಗೆ ಸಮಾನ ಅವಕಾಶವನ್ನು ನೀಡುತ್ತದೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಯ ವಿಷಯದಲ್ಲಿ ಸಮಾನ ವೇದಿಕೆಯನ್ನು ಒದಗಿಸುತ್ತದೆ. ಇದು ಅಲ್ಪಸಂಖ್ಯಾತರನ್ನು ಒಗ್ಗೂಡಿಸಲು ಸಹಾಯ ಮಾಡುತ್ತದೆ ಮತ್ತು ಯಾವುದೇ ಹಸ್ತಕ್ಷೇಪವಿಲ್ಲದೆ ಅವರ ರೀತಿಯಲ್ಲಿ ಅವರ ಜೀವನವನ್ನು ನಡೆಸುವ ಸ್ವಾತಂತ್ರ್ಯವನ್ನು ನೀಡುತ್ತದೆ. ರಾಷ್ಟ್ರೀಯ ಏಕತೆಯೊಂದಿಗೆ ದೇಶವು ಯಾವಾಗಲೂ ಅಭಿವೃದ್ಧಿ ಹೊಂದುತ್ತದೆ ಮತ್ತು ಕಡಿಮೆ ಆಂತರಿಕ ಸಮಸ್ಯೆಗಳನ್ನು ಹೊಂದಿರುವುದರಿಂದ ದೇಶದ ಅಭಿವೃದ್ಧಿಗೆ ರಾಷ್ಟ್ರೀಯ ಏಕೀಕರಣವು ನಿರ್ಣಾಯಕವಾಗಿದೆ.

**ರಾಷ್ಟ್ರೀಯ ಏಕೀಕರಣದ ಪ್ರಯೋಜನಗಳು:** ದೇಶದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳಲ್ಲಿ ರಾಷ್ಟ್ರೀಯ ಏಕೀಕರಣವು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುತ್ತದೆ. ರಾಷ್ಟ್ರೀಯ ಏಕೀಕರಣವು ದೇಶದ ಜನರನ್ನು ಅವರ ನಡುವೆ ಸಾಮಾಜಿಕ ಬಾಂಧವ್ಯವನ್ನು ಬಲಪಡಿಸುವ ಮೂಲಕ ಸಾಮರಸ್ಯದಿಂದ ವಾಸಿಸುವಂತೆ ಮಾಡುತ್ತದೆ. ಇದು ಅವರಲ್ಲಿ ಸಹೋದರತೆ, ಶಾಂತಿ ಮತ್ತು ಸಹನೆಯನ್ನು ಉತ್ತೇಜಿಸುತ್ತದೆ.

ರಾಷ್ಟ್ರವನ್ನು ಒಂದುಗೂಡಿಸುತ್ತದೆ. ರಾಷ್ಟ್ರೀಯ ಏಕೀಕರಣವು ವಿವಿಧ ಜನಾಂಗ, ಜಾತಿ, ಪಂಥ ಅಥವಾ ಆಲೋಚನೆಗಳ ಜನರನ್ನು ಒಗ್ಗೂಡಿಸಲು ಸಹಾಯ ಮಾಡುತ್ತದೆ ಮತ್ತು ದೇಶವನ್ನು ಒಂದೇ ಘಟಕವನ್ನಾಗಿ ಮಾಡುತ್ತದೆ. ಒಂದು ದೇಶದ ಜನರು ಒಗ್ಗಟ್ಟಿನಿಂದ ಇದ್ದರೆ ಅದು ದೇಶವನ್ನು ಬಲಪಡಿಸುತ್ತದೆ ಮತ್ತು ಜಾಗತಿಕ ವೇದಿಕೆಯಲ್ಲಿ ಶಕ್ತಿಯುತವಾಗಿಸುತ್ತದೆ. ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಆಂತರಿಕ ಸಮಸ್ಯೆಗಳು ಮತ್ತು ಸಮಸ್ಯೆಗಳು ಕಡಿಮೆ ಇರುವ ದೇಶವು ಯಾವಾಗಲೂ ಏಳಿಗೆ ಮತ್ತು ಅಭಿವೃದ್ಧಿ ಹೊಂದುತ್ತದೆ ಮತ್ತು ಸಾಮಾಜಿಕವಾಗಿ ಅಸ್ಥಿರವಾಗಿರುವ ದೇಶಕ್ಕೆ ಹೋಲಿಸಿದರೆ ಒಗ್ಗಟ್ಟಾಗಿರುವ ದೇಶವು ಯಾವಾಗಲೂ ಕಡಿಮೆ ಸಮಸ್ಯೆಗಳನ್ನು ಹೊಂದಿರುವುದು ತಿಳಿದಿರುವ ಸತ್ಯ.



ರಾಷ್ಟ್ರೀಯ ಏಕೀಕರಣವು ದೇಶದ ನಾಗರಿಕರ ನಡುವಿನ ಏಕತೆಯ ಬಂಧವಾಗಿದೆ. ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳ ಹೊರತಾಗಿಯೂ ಏಕತೆ ಮತ್ತು ಸಾಮರಸ್ಯದ ಭಾವನೆಯಾಗಿದೆ. ರಾಷ್ಟ್ರೀಯ ಏಕೀಕರಣವು ದೇಶವು ಸಮಗ್ರವಾಗಿ ಮತ್ತು ಒಗ್ಗಟ್ಟಿ ನಿಂದ ಉಳಿಯಲು ಮತ್ತು ಅಭಿವೃದ್ಧಿಯ ಗುರಿಗಳತ್ತ ಮುನ್ನಡೆಯಲು ಸಹಾಯ ಮಾಡುತ್ತದೆ. ಇದು ದೇಶವನ್ನು ಒಳಗಿನಿಂದ ಬಲಗೊಳಿಸುವುದಲ್ಲದೆ ವಿದೇಶಿ ಶಕ್ತಿಗಳಿಂದ ಹೆಚ್ಚು ಸುರಕ್ಷಿತ ಮತ್ತು ಸುರಕ್ಷಿತವಾಗಿಸುತ್ತದೆ.

**ಇಂದು ರಾಷ್ಟ್ರೀಯ ಏಕೀಕರಣ ದಿನ**

ರಾಷ್ಟ್ರೀಯ ಏಕೀಕರಣವು ದೇಶಕ್ಕಾಗಿ ನಾಗರಿಕರ ನಿಷ್ಠೆಯನ್ನು ಉತ್ತೇಜಿಸುತ್ತದೆ. ಜನರು ತಮ್ಮ ಸಣ್ಣಪುಟ್ಟ ಸಮಸ್ಯೆಗಳನ್ನು ಮರೆತು ದೇಶದ ಒಳಿತಿಗಾಗಿ ಕೈ ಜೋಡಿಸಲು ಸಹಾಯ ಮಾಡುತ್ತದೆ. ಇದು ವಿವಿಧ ಜಾತಿ, ಮತ ಅಥವಾ ಭಾಷೆಯ ಜನರನ್ನು ಭಾರತೀಯರಾಗಿ ಒಂದೇ ಘಟಕಕ್ಕೆ ಒಗ್ಗೂಡಿಸಲು ಸಹಾಯ ಮಾಡುತ್ತದೆ. ಆರ್ಥಿಕ ಸಮಾನತೆ ದೇಶದ ಪ್ರತಿಯೊಂದು ವರ್ಗ ಮತ್ತು ಸಮುದಾಯದ ನಡುವೆ ಆದಾಯದ ಸಮಾನ ಹಂಚಿಕೆಯು ಸಮಾಜದ ಕಟ್ಟಕಡೆಯ ವರ್ಗದವರೂ ಸಹ ದೇಶದ ಬಗ್ಗೆ ಅವರ ನಂಬಿಕೆ ಮತ್ತು ನಿಷ್ಠೆಯನ್ನು ಹೆಚ್ಚಿಸುವ ಮೂಲಕ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಶಿಕ್ಷಣ ಶಿಕ್ಷಣವು ಅಜ್ಞಾನ ಮತ್ತು ಅನಕ್ಷರತೆಯ ಎಲ್ಲಾ ಅಂಧಕಾರಗಳನ್ನು ಓಡಿಸುವ ದೀಪವಾಗಿದ್ದು, ಜನರನ್ನು ಮುಖ್ಯವಾಹಿನಿಗೆ ತರುತ್ತದೆ. ಇದು ಬೌದ್ಧಿಕ ಚಿಂತನೆ ಮತ್ತು ಜನರಿಗೆ ಏಕತೆ ಮತ್ತು ಏಕೀಕರಣದ ನಿಜವಾದ ಅರ್ಥವನ್ನು ನೀಡುತ್ತದೆ.

ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯಂತಹ ರಾಷ್ಟ್ರೀಯ ಚಿಹ್ನೆಗಳು ದೇಶ ಭಕ್ತಿಯ ಭಾವನೆಯನ್ನು ಹುಟ್ಟುಹಾಕುತ್ತವೆ ಮತ್ತು ಅವರ ಜಾತಿ, ಪಂಗಡ ಅಥವಾ ಜನಾಂಗವನ್ನು ಲೆಕ್ಕಿಸದೆ ಅವರನ್ನು ಮೊದಲು ಭಾರತೀಯರನ್ನಾಗಿ ಮಾಡುತ್ತವೆ.

**ರಾಷ್ಟ್ರೀಯ ಹಬ್ಬಗಳು:** ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಮತ್ತು ಗಾಂಧಿ ಜಯಂತಿಯಂತಹ ರಾಷ್ಟ್ರೀಯ ಹಬ್ಬಗಳು ಪ್ರತಿಯೊಬ್ಬ ಭಾರತೀಯರು ಯಾವುದೇ ತಾರತಮ್ಯವಿಲ್ಲದೆ ಆಚರಿಸುವ ಹಬ್ಬಗಳಾಗಿವೆ. ಈ ಸಂದರ್ಭದಲ್ಲಿ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ಒಂದಾಗುತ್ತಾರೆ. ಉತ್ತಮ ಆಡಳಿತ ರಾಷ್ಟ್ರೀಯ ಏಕೀಕರಣವನ್ನು ಉತ್ತೇಜಿಸುವಲ್ಲಿ ಉತ್ತಮ ಆಡಳಿತವು ಪ್ರಮುಖ ಅಂಶವಾಗಿದೆ. ಸಾಮೂಹಿಕ ಪ್ರಯತ್ನಗಳು ಮತ್ತು ಅಂತರ್ಗತ ಬೆಳವಣಿಗೆಯ ಮೇಲೆ ಕೇಂದ್ರೀಕರಿಸುವ ಸರ್ಕಾರವು ಯಾವಾಗಲೂ ದೇಶದ ಪ್ರತಿಯೊಂದು ವಿಭಾಗದ ಅಭಿವೃದ್ಧಿಯ ಗುರಿ ಮತ್ತು ಬೆಳವಣಿಗೆಯನ್ನು ಸಾಧಿಸಲು ನಿರ್ವಹಿಸುತ್ತದೆ, ಹೀಗಾಗಿ ರಾಷ್ಟ್ರದ ಕಡೆಗೆ ನಿಷ್ಠೆಯನ್ನು ಹೆಚ್ಚಿಸುತ್ತದೆ.

**ರಾಷ್ಟ್ರೀಯ ಏಕೀಕರಣಕ್ಕೆ ಸವಾಲುಗಳು:** ಈ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ರಾಷ್ಟ್ರೀಯ ಏಕೀಕರಣಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸುವ ಕೆಲವು ಶಕ್ತಿಗಳಿವೆ. ಆರ್ಥಿಕ ಅಸಮಾನತೆಗಳು ಭಾರತವು ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳ ದೊಡ್ಡ ಸಂಖ್ಯೆಯ ನೆಲೆಯಾಗಿದೆ. ಈ ವಿಭಾಗಗಳು ಸಾಮಾನ್ಯವಾಗಿ ಬಿಟ್ಟುಹೋಗಿವೆ ಮತ್ತು ನಿರ್ಲಕ್ಷಿಸಲ್ಪಟ್ಟಿವೆ ಎಂದು ಭಾವಿಸುತ್ತಾರೆ, ಇದು ಅಸಮಾಧಾನ ಮತ್ತು ಹತಾಶೆಯ ಭಾವನೆಗೆ ಕಾರಣವಾಗಬಹುದು. ಇದು ಪ್ರತಿಯಾಗಿ, ಅಸಂಗತತೆ ಮತ್ತು ಸಾಮಾಜಿಕ ಅಶಾಂತಿಗೆ ಕಾರಣವಾಗಬಹುದು.

ಪ್ರಾದೇಶಿಕತೆ ಭಾರತವು ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹೊಂದಿರುವ ಹಲವಾರು ಪ್ರದೇಶಗಳನ್ನು ಹೊಂದಿರುವ ವಿಶಾಲ ದೇಶವಾಗಿದೆ. ಈ ವೈವಿಧ್ಯತೆಯು ಸಾಮಾನ್ಯವಾಗಿ ಶಕ್ತಿಯ ಮೂಲವಾಗಿ ಕಂಡುಬರುತ್ತದೆ. ಆದಾಗ್ಯೂ, ಕೆಲವೊಮ್ಮೆ, ಇದು ಪ್ರಾದೇಶಿಕತೆಗೆ ಕಾರಣವಾಗಬಹುದು, ಇದು ರಾಷ್ಟ್ರದ ಮೇಲೆ ಒಬ್ಬರ ಪ್ರದೇಶದ ಕಡೆಗೆ ನಿಷ್ಠೆಯ ಭಾವನೆಯಾಗಿದೆ. ಇದು ಅಸಂಗತತೆ ಮತ್ತು ಸಂಘರ್ಷಕ್ಕೆ ಕಾರಣವಾಗಬಹುದು.

ಜಾತೀಯತೆ ಭಾರತವು ಹೆಚ್ಚಿನ ಸಂಖ್ಯೆಯ ಜಾತಿಗಳು ಮತ್ತು ಸಮುದಾಯಗಳಿಗೆ ನೆಲೆಯಾಗಿದೆ. ಈ ಜಾತಿ ಆಧಾರಿತ ಸಮುದಾಯಗಳು ಸಾಮಾನ್ಯವಾಗಿ ಸೀಮಿತ ಸಂಪನ್ಮೂಲಗಳಿಗಾಗಿ ಪರಸ್ಪರ ಸ್ಪರ್ಧಿಸುತ್ತವೆ. ಇದು ಪ್ರತಿಯಾಗಿ, ಉದ್ವಿಗ್ನತೆ ಮತ್ತು ಸಂಘರ್ಷಕ್ಕೆ ಕಾರಣವಾಗುತ್ತದೆ. ಭಾರತವು ಹೆಚ್ಚಿನ ಸಂಖ್ಯೆಯ ಭಾಷೆಗಳಿಗೆ ನೆಲೆಯಾಗಿದೆ. ಈ ವೈವಿಧ್ಯತೆಯು ಸಾಮಾನ್ಯವಾಗಿ ಸಂವಹನ ಅಡೆತಡೆಗಳಿಗೆ ಕಾರಣವಾಗಬಹುದು, ಇದು ರಾಷ್ಟ್ರೀಯ ಏಕೀಕರಣದ ಪ್ರಕ್ರಿಯೆಗೆ ಅಡ್ಡಿಯಾಗಬಹುದು.

**ಧಾರ್ಮಿಕ ಅಸಹಿಷ್ಣುತೆ:** ಭಾರತವು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ವೈವಿಧ್ಯಮಯ ದೇಶವಾಗಿದೆ. ಈ ವೈವಿಧ್ಯತೆಯು ಸಾಮಾನ್ಯವಾಗಿ ಧಾರ್ಮಿಕ ಅಸಹಿಷ್ಣುತೆಗೆ ಕಾರಣವಾಗುತ್ತದೆ, ಇದು ಇತರರ ಧರ್ಮದ ಸ್ವೀಕಾರ ಅಥವಾ ಗೌರವದ ಕೊರತೆಯಾಗಿದೆ.

ಒಂದು ದೇಶಕ್ಕೆ ರಾಷ್ಟ್ರೀಯ ಏಕೀಕರಣವು ಬಹಳ ಮಹತ್ವದ್ದಾಗಿದೆ ಏಕೆಂದರೆ ಮನುಕುಲದ ಇತಿಹಾಸದಲ್ಲಿ ರಾಷ್ಟ್ರದ ಸಮಗ್ರತೆಯು ಅಪಾಯಕ್ಕೆ ಸಿಲುಕಿದೆ ಎಂದು ಅನೇಕ ಬಾರಿ ಕಂಡುಬರುತ್ತದೆ. ಇದು ಒಳಗಿನಿಂದ ಪ್ರಮುಖ ಸವಾಲುಗಳನ್ನು ಎದುರಿಸಿತು ಮತ್ತು ವಿದೇಶಿ ಆಕ್ರಮಣಗಳಿಗೆ ಬಲಿಯಾಯಿತು. ಆದ್ದರಿಂದ ರಾಷ್ಟ್ರ ನಿರ್ಮಾಣದಲ್ಲಿ ರಾಷ್ಟ್ರೀಯ ಏಕೀಕರಣವು ಮಹತ್ವದ ಪಾತ್ರ ವಹಿಸುತ್ತದೆ.

ಭಾರತವು ಅನೇಕ ಸಂಸ್ಕೃತಿಗಳು, ಸಂಪ್ರದಾಯಗಳು ಮತ್ತು ಸಿದ್ಧಾಂತಗಳೊಂದಿಗೆ ವೈವಿಧ್ಯತೆಯ ವಿಶಾಲವಾದ ದೇಶವಾಗಿದೆ ಮತ್ತು ಅದನ್ನು ಒಂದೇ ರಾಷ್ಟ್ರವಾಗಿ ಮಾಡುವುದು ಅದರ ನಾಗರಿಕರೊಳಗಿನ ಏಕೀಕರಣ ಮತ್ತು ಸಾಮಾಜಿಕ ಬಂಧವಾಗಿದೆ. ವೈವಿಧ್ಯತೆಯ ಹೊರತಾಗಿಯೂ ಭಾರತದ ರಾಷ್ಟ್ರೀಯ ಏಕತೆ ಪ್ರಪಂಚದಾದ್ಯಂತದ ಜನರಿಗೆ ಆಶ್ಚರ್ಯಕರ ವಿಷಯವಾಗಿದೆ.

● ಮಣಿಕಂಠ ತ್ರಿಶಂಕರ್, ಮೈಸೂರು

## ನಿಮ್ಮ ಪತ್ರಗಳು

### ಗರ್ಭಪಾತ ಕುರಿತಂತೆ ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹ!

ಮಾನ್ಯರೆ,

ಗರ್ಭಪಾತದ ಹಕ್ಕುಗಳ ವಿಚಾರವಾಗಿ ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ಮಹಿಳೆಗೆ ತನ್ನ ದೇಹದ ವಿಚಾರದಲ್ಲಿ ಇರುವ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವಂತಿದೆ. ವಿವಾಹಿತರೇ ಇರಲಿ, ಅವಿವಾಹಿತರೇ ಆಗಲಿ ಎಲ್ಲಾ ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳಲು ಅರ್ಹರು, ಇವರ ನಡುವೆ ತಾರತಮ್ಯ ಮಾಡುವುದು ಅಸಂವಿಧಾನಿಕ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸ್ವಾಗತಾರ್ಹವಾಗಿದೆ.

ಸಾಮಾನ್ಯವಾಗಿ ವಿವಾಹಿತ ಹಾಗೂ ಅವಿವಾಹಿತ ಮಹಿಳೆಯರು ತಮ್ಮ ದೇಹದ ಮೇಲೆ ಹಕ್ಕನ್ನು ಚಲಾಯಿಸಲು ಹೆಚ್ಚಿನ ಅಡೆತಡೆಗಳನ್ನು ಎದುರಿಸುತ್ತಾರೆ. ಇದರಿಂದಾಗಿ ಅಪಾಯಗಳು ಮತ್ತು ತೊಡಕುಗಳಿಗೆ ಕಾರಣವಾಗುತ್ತದೆ. ಎಷ್ಟೋ ಸಲ ಇಚ್ಛೆ ಇಲ್ಲದೆ ಗರ್ಭ ಧರಿಸಿದಾಗ ಅನೇಕ ಮಹಿಳೆಯರು ಗುಟ್ಟಾಗಿ ಗರ್ಭಪಾತ ಮಾಡಿಸುವ ದಂಧೆಕೋರ ವೈದ್ಯರ ಬಳಿ ತೆರಳಿ, ಅಸುರಕ್ಷಿತ ರೀತಿಯಲ್ಲಿ ಗರ್ಭಪಾತ ಮಾಡಿಸಿಕೊಳ್ಳುತ್ತಾರೆ. ಸುಪ್ರೀಂಕೋರ್ಟ್ ಗಮನಿಸಿರುವಂತೆ ಅಸುರಕ್ಷಿತ ಗರ್ಭಪಾತಗಳು ತಾಯಂದಿರ ಮರಣಕ್ಕೆ ಪ್ರಮುಖ ಕಾರಣವಾಗುತ್ತದೆ. ಅಸುರಕ್ಷಿತ ಗರ್ಭಪಾತಗಳ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಭಾರತದಲ್ಲಿ ನಡೆಸಲಾಗುವ ಶೇ 60ರಷ್ಟು ಗರ್ಭಪಾತಗಳು ಸುರಕ್ಷಿತವಾಗಿಲ್ಲ. ಸುರಕ್ಷಿತ ಗರ್ಭಪಾತ ಸೇವೆಗಳಿಗೆ ಅವಕಾಶ ನಿರಾಕರಿಸುವುದು, ನಿರ್ಬಂಧಿತ ಗರ್ಭಪಾತ ಅಭ್ಯಾಸಗಳು ಅಸುರಕ್ಷಿತ ಗರ್ಭಪಾತಗಳಿಗೆ ಎಡೆಮಾಡಿಕೊಡುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಸಂತಾನೋತ್ಪತ್ತಿಯ ಸ್ವಾಯತ್ತತೆ ಹಾಗೂ ಖಾಸಗಿತನದ ಹಕ್ಕುಗಳು ವಿವಾಹಿತರಿಗೆ ಇರುವಂತೆ ಅವಿವಾಹಿತ ಮಹಿಳೆಯರು ಕೂಡ ಮಗುವನ್ನು ಹೆರಬೇಕೇ ಅಥವಾ ಬೇಡವೇ ಎಂಬ ಆಯ್ಕೆಯ ಹಕ್ಕನ್ನು ಅವರಿಗೆ ನೀಡಿರುವುದು ಗಮನಾರ್ಹವಾದುದು. ವಿವಾಹಿತ ಮಹಿಳೆಯರಿಗೆ 24 ವಾರಗಳ ನಡುವಿನ ಗರ್ಭಾವಸ್ಥೆಯಲ್ಲಿ ಗರ್ಭಪಾತಕ್ಕೆ ಅವಕಾಶ ನೀಡಿ, ಏಕಾಂಗಿಯಾಗಿರುವ ಅಥವಾ ಅವಿವಾಹಿತ ಮಹಿಳೆಯರನ್ನು ಗರ್ಭಪಾತದಿಂದ ನಿರ್ಬಂಧಿಸಿರುವುದು ಸಂವಿಧಾನದ 14ನೇ ವಿಧಿಯ (ಸಮಾನತೆಯ ಹಕ್ಕು) ಉದ್ದೇಶಕ್ಕೆ ವಿರುದ್ಧವಾಗಿದೆ. ಕಾನೂನು ಯಾವಾಗಲೂ ಸ್ಥಿರವಾಗಿರಬಾರದು. ಇದು ಸಾಮಾಜಿಕ ವಾಸ್ತವಗಳಿಗೆ ಅನುಗುಣವಾಗಿ ಬದಲಾಗುತ್ತಿರಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಇನ್ನೊಂದು ಪ್ರಮುಖವಾದ ವಿಚಾರವೆಂದರೆ ಪೋಕ್ಸೋ ಕಾಯ್ದೆ ಅಡಿ ಅಪ್ರಾಪ್ತ ವಯಸ್ಸಿನವರು ಗರ್ಭಪಾತಕ್ಕೆ ಬಯಸಿದರೆ, ನೋಂದಾಯಿತ ವೈದ್ಯಕೀಯ ತಜ್ಞರು ಅವರ ಗುರುತನ್ನು ಬಹಿರಂಗಪಡಿಸುವ ಅಗತ್ಯವಿಲ್ಲ. ಕೇವಲ ದೈಹಿಕ ಆರೋಗ್ಯಕ್ಕೆ ಮಾತ್ರವಲ್ಲದೆ ಮಾನಸಿಕ ಆರೋಗ್ಯಕ್ಕೆ ಅಪಾಯ ಎದುರಾದಾಗ ಕಾನೂನಿನ ಅಡಿ ಅವಕಾಶ ಕೋರಬಹುದು ಹಾಗೂ ಈ ಆಯ್ಕೆಯ ವಿಚಾರದಲ್ಲಿ ಮಹಿಳೆ ಸಂಪೂರ್ಣ ಸ್ವತಂತ್ರಳು ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಪ್ರಸ್ತುತ ಸುಪ್ರೀಂಕೋರ್ಟ್ ನೀಡಿರುವ ಈ ತೀರ್ಪು ಹೆಣ್ಣಿನ ಹಕ್ಕು ಮತ್ತು ಘನತೆಗೆ ಹೆಚ್ಚಿನ ಒತ್ತಾಸೆ ನೀಡಿದಂತಾಗಿದೆ.

– ಹರಳಹಳ್ಳಿಪುಟ್ಟರಾಜು, ಪಾಂಡವಪುರ.

### ದಕ್ಷಿಣ–ಉತ್ತರ ಜೋಡಿಸಿ

ಮಾನ್ಯರೆ,

ಕಾಂಗ್ರೆಸ್‌ನವರು ಭಾರತ ಜೋಡಿಸಿ ಕಾರ್ಯಕ್ರಮ ಹಮ್ಮಿಕೊಂಡು ಕರ್ನಾಟಕದಲ್ಲಿ ಕಾರ್ಯಕ್ರಮ ಮುಗಿಸಿ ಹೋದರು. ಆದರೆ ಮೈಸೂರು ಚಾಮರಾಜನಗರ ಸಂಸದರು ಕರ್ನಾಟಕದಲ್ಲೇ ದಕ್ಷಿಣ–ಉತ್ತರವನ್ನು ಜೋಡಿಸುವ ಕೆಲಸ ಮಾಡಬೇಕಿದೆ. ದಕ್ಷಿಣದ ಚಾಮರಾಜನಗರ ಮತ್ತು ಉತ್ತರದ ಬೀದರನ್ನು ರೈಲು ಮೂಲಕ ಜೋಡಿಸಬೇಕಾಗಿದೆ. ಈಗ ಹೇಗೂ ಬೆಂಗಳೂರಿಂದ ನಂಡೆಡ್‌ಗೆ ಹೋಗುವ ರೈಲು ಬೀದರ್ ಮೂಲಕ ಹೋಗುತ್ತದೆ ಇದರ ಸಮಯ ಬಲಾಯಿಸಿ ಚಾಮರಾಜನಗರ–ನಂಡೆಡ್‌ಗೆ ಬದಲಾಯಿಸಿದರೆ, ಬೆಂಗಳೂರು ನಿಲ್ದಾಣದ ಒತ್ತಡವು ಕಮ್ಮಿಯಾಗುತ್ತದೆ ಮತ್ತು ಕರ್ನಾಟಕದ ಉತ್ತರ–ದಕ್ಷಿಣ ಜೋಡೋ ಮಾಡಿದಂತೆಯೂ ಆಗುತ್ತದೆ. ಸಂಸದರು ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬುತ್ತೇನೆ. ಇದರಿಂದ ಚಾಮರಾಜನಗರ–ಮೈಸೂರು ಜನತೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಉತ್ತಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಹೆಚ್ಚು.

– ಅಕ್ಕಿಹೆಬ್ಬಾಳು ವೆಂಕಟೇಶ್, ಮೊಕ್ಕಾಮ್ ಬೆಂಗಳೂರು

### ರಸ್ತೆ ಗುಂಡಿಗಳನ್ನು ಮುಚ್ಚಿ ಜನರ ಪ್ರಾಣ ಉಳಿಸಿ

ಮಾನ್ಯರೆ,

ದಸರೆ ಮುಗಿದರೂ ಮೈಸೂರಿನ ರಸ್ತೆ ಗುಂಡಿಗಳನ್ನು ಮುಚ್ಚಲಾಗದ ಮೈಸೂರು ಮಹಾನಗರ ಪಾಲಿಕೆ ಬಗ್ಗೆ ನಾಚಿಕೆ ಯಾಗುತ್ತದೆ. ಪದೇ ಪದೇ ಕೇಳಲು ಮೇಯರ್ ಅವರು ಪ್ರಾರಂಭದ ಜೋಶ್‌ನಲ್ಲಿ ದಸರೆಯೊಳಗೆ ಎಲ್ಲಾ ರಸ್ತೆ ಗುಂಡಿಗಳನ್ನು



ಮುಚ್ಚಲು ಸಮಾರೋಪಾದಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಘೋಷಣೆ ಏನೋ ಮಾಡಿದರು. ಆದರೆ ಮೈಸೂರಿನ ಎಲ್ಲಾ ರಸ್ತೆಗಳ ಗುಂಡಿಗಳನ್ನು ಮುಚ್ಚದೆ ಪಾಲಿಕೆ ಅಧಿಕಾರಿಗಳು ಕಣ್ಣೊರೆಸುವ ತಂತ್ರ ಮಾಡಿದರು.

ರಸ್ತೆ ಗುಂಡಿಗಳನ್ನು ಮುಚ್ಚಲಾಗದ ಮಹಾನಗರ ಪಾಲಿಕೆ ಮಲಗಿದೆಯೇ, ಪಾಲಿಕೆ ಸದಸ್ಯರುಗಳಿಗೆ ಅವರ ಕ್ಷೇತ್ರದ ರಸ್ತೆ ಗುಂಡಿಗಳನ್ನು ಮುಚ್ಚಿಸಲು ಆಗುತ್ತಿಲ್ಲವೇ? ಎಲೆಕ್ಷನ್ ಸಮಯದಲ್ಲಿ ಬಂದು ಕೈಕಾಲು ಹಿಡಿಯುತ್ತೀರಿ. ನಿಮ್ಮಿಂದ ರಸ್ತೆ ಗುಂಡಿ ಗಳನ್ನು ಮುಚ್ಚಿಸಲು ಸಾಧ್ಯವಾಗುತ್ತಿಲ್ಲವೆಂದಾದರೆ ಮುಂದಿನ ಚುನಾವಣೆಗೆ ಯಾವ ಮುಖ ಇಟ್ಟುಕೊಂಡು ಓಟು ಕೇಳುತ್ತೀರಿ? ಇನ್ನೂ ವಲಯ ಇಂಜಿನಿಯರ್‌ಗಳ ಕಣ್ಣಿಗೆ ಈ ಗುಂಡಿಗಳು ಕಾಣುತ್ತಿಲ್ಲವೆ, ಕಂಡರೂ ಇದು ನಿಮಗೆ ಲಾಭದಾಯಕವಲ್ಲ ವೆಂಬ ಧೋರಣೆಯೇ ಅಥವಾ ರಸ್ತೆ ಗುಂಡಿ ಮುಚ್ಚಲಾರದಷ್ಟು ಪಾಲಿಕೆ ದಿವಾಳಿ ಯಾಗಿದೆಯೇ? ಮಹಾಪೌರರು ಮತ್ತು ಆಯುಕ್ತರೇ ಇದಕ್ಕೆ ಉತ್ತರಿಸಬೇಕು. ಜನರು ಜೀವ ಕಳೆದುಕೊಳ್ಳುವ ಮುನ್ನ ರಸ್ತೆ ಗುಂಡಿಗಳನ್ನು ಮುಚ್ಚಿ ಮೈಸೂರು ಮಹಾನಗರ ಪಾಲಿಕೆ ಮಾನ ಕಾಪಾಡಿ ಎಂಬುದೇ ನನ್ನ ಕಳಕಳಿಯ ಮನವಿ.

– ಬಿ.ಜಿ.ರಂಗೇಗೌಡ, ಮೈಸೂರು

## ಪೋಸ್ಟಿಂಗ್‌ಗೆ ಹಣ: ಅಮಾನತುಗೊಂಡ ಪೊಲೀಸ್ ಅಧಿಕಾರಿ ಸಾವು ಪ್ರಕರಣದ ತನಿಖೆ ಡಿಜಿಪಿಗೆ



ಬೆಂಗಳೂರು, ಅ.30– ಅಮಾನತುಗೊಂಡ ಪೊಲೀಸ್ ಇನ್ಸ್‌ಪೆಕ್ಟರ್ ಸಾವಿನ ಪ್ರಕರಣದ ಕುರಿತು ಗಮನ ಹರಿಸುವಂತೆ ಮತ್ತು ಅಗತ್ಯವಿದ್ದರೆ ತನಿಖೆ ನಡೆಸುವಂತೆ ರಾಜ್ಯದ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದ್ದಾರೆ.

ವೈರಲ್ ಆಗಿರುವ ಉದ್ದೇಶಿತ ವೀಡಿಯೊ ಸಂಭಾಷಣೆ ನಂತರ, ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ(ಎಸ್) ಸಾವಿನ ಕುರಿತು ನ್ಯಾಯಾಂಗ ಮತ್ತು ಉನ್ನತ ಮಟ್ಟದ ತನಿಖೆಗೆ ಒತ್ತಾಯಿಸಿವೆ. ವೈರಲ್ ಆಗಿದ್ದ ವಿಡಿಯೋದಲ್ಲಿ, ಅಧಿಕಾರಿಯ ಅಂತಿಮ ದರ್ಶನ ಪಡೆಯಲು ಬಂದಿದ್ದ ಸಚಿವ ಎಂಟಿಬಿ ನಾಗರಾಜ್ ಅವರು, ಪೋಸ್ಟಿಂಗ್ ಪಡೆಯಲು 70 ರಿಂದ 80 ಲಕ್ಷ ಕೊಟ್ಟು ಬಂದರೆ ಹೃದಯಾಘಾತವಾಗದೆ ಇನ್ನೇನಾಗುತ್ತದೆ. ಈ ಒತ್ತಡದಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳಿಗೆ ಹೇಳುವುದು ಕಂಡುಬಂದಿತ್ತು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, 'ನಮ್ಮ ಡಿಜಿ (ಪೊಲೀಸ್ ಮಹಾನಿರ್ದೇಶಕರು) ನಗರದಲ್ಲಿ ಇರಲಿಲ್ಲ, ನಿನ್ನೆ ರಾತ್ರಿ ವಾಪಸ್ಸಾಗಿದ್ದಾರೆ. ಇಂದು ಎಲ್ಲ ಮಾಹಿತಿ ಕಲೆಹಾಕುವಂತೆ ಸೂಚನೆ ನೀಡುತ್ತೇನೆ. ಏನಾದರೂ ಸಿಕ್ಕರೆ ವಿಚಾರಣೆ ನಡೆಸಬೇಕು. ಅದರಲ್ಲಿ ನಾವು ಯಾವುದೇ ಹಿಂಜರಿಕೆ ತೋರಿಸುವುದಿಲ್ಲ ಎಂದಿದ್ದಾರೆ.

**ಏನಿದು ಪ್ರಕರಣ?:** ಕರ್ತವ್ಯ ಲೋಪದ ಹಿನ್ನಲೆಯಲ್ಲಿ ಸೇವೆಯಿಂದ ಅಮಾನತುಗೊಂಡಿದ್ದ ಕೆಆರ್ ಪುರಂ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ನಂದೀಶ್ ಎಚ್.ಎಲ್ ಅವರು ತೀವ್ರ ಹೃದಯಾಘಾತದಿಂದ ಅಕ್ಟೋಬರ್ 27ರಂದು ಮೃತಪಟ್ಟಿದರು. ಸೇವೆಯಿಂದ ಅಮಾನತುಗೊಂಡ ಬಳಿಕ ನಂದೀಶ್ ಅವರು ಖಿನ್ನತೆಗೆ ಒಳಗಾಗಿದ್ದು ಅದೇ ಹೃದಯಾಘಾತಕ್ಕೆ ಕಾರಣವಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಹುಣಸೂರು ಮೂಲದ ಇನ್ಸ್ ಪೆಕ್ಟರ್ ನಂದೀಶ್ ಇತ್ತೀಚೆಗೆ ಪಬ್‌ವೊಂದು ಅವಧಿ ಮೀರಿ ನಡೆಸಲು ಸಹಕಾರ ನೀಡುತ್ತಿದ್ದರೆಂಬ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಅಮಾನತುಗೊಳಿಸಲಾಗಿತ್ತು.

## ರಾಜ್ಯದಲ್ಲಿ ಭಾನುವಾರ 185 ಮಂದಿಗೆ ಕೊರೊನಾ

ಬೆಂಗಳೂರು, ಅ.30– ರಾಜ್ಯದಲ್ಲಿ ಕೊರೋನಾ ಪಾಸಿಟಿವ್ ಪ್ರಕರಣಗಳ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 185 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,68,911ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೋನಾದಿಂದ ಇಂದು ಯಾರು ಮೃತಪಟ್ಟಿಲ್ಲ. ಇನ್ನು ರಾಜ್ಯದಲ್ಲಿ ಸೋಂಕಿಗೆ ಇಲ್ಲಿಯವರೆಗೂ 40,256 ಮಂದಿ ಬಲಿಯಾಗಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ ಇಂದು 114 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,74,629ಕ್ಕೆ ಏರಿಕೆಯಾಗಿದೆ ಇಂದು ರಾಜಧಾನಿಯಲ್ಲೂ ಕೊರೋನಾದಿಂದ ಯಾವುದೇ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 83 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 40,26,529ಕ್ಕೆ ಏರಿಕೆಯಾಗಿದೆ. ಇನ್ನು 2,084 ಸಕ್ರಿಯ ಪ್ರಕರಣಗಳಿವೆ.

## ಇಂದು ಸುಪ್ರೀಂಕೋರ್ಟ್‌ನಲ್ಲಿ ಸಿಎಎ ಪ್ರಶ್ನಿಸಿರುವ 232 ಅರ್ಜಿಗಳ ವಿಚಾರಣೆ

ನವದೆಹಲಿ, ಅ.30– ಒಂಬತ್ತು ದಿನಗಳ ದೀಪಾವಳಿ ರಜೆ ನಂತರ ಸೋಮವಾರದಿಂದ ಪುನರ್ ಆರಂಭವಾಗುವ ಕಲಾಪದಲ್ಲಿ ವಿವಾದಿತ ಪೌರತ್ವ (ತಿದ್ದುಪಡಿ) ಕಾಯ್ದೆ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸುವ ಅರ್ಜಿಗಳು ಸೇರಿದಂತೆ ಸುಮಾರು 240 ಸಾರ್ವಜನಿಕ ಹಿತಾಸಕ್ತಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ನಿಗದಿಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಮತ್ತು ನ್ಯಾಯಮೂರ್ತಿಗಳಾದ ಎಸ್ . ರವೀಂದ್ರ ಭಟ್ ಮತ್ತು ಬೇಲಾ ಎಂ ತ್ರಿವೇದಿ ಅವರನ್ನೊಳಗೊಂಡ ಪೀಠ ಸಿಎಎಗೆ ಸಂಬಂಧಿಸಿದ 232 ಅರ್ಜಿಗಳನ್ನು ಅಕ್ಟೋಬರ್ 31 ರಂದು ವಿಚಾರಣೆಗೆ ಪಟ್ಟಿ ಮಾಡಿದೆ. ಈ ಹಿಂದೆ ನವೆಂಬರ್ 8ರಂದು ಕಚೇರಿಯಿಂದ ನಿರ್ಗಮಿಸಲಿರುವ ಸಿಜೆಐ ಲಲಿತ್ ನೇತೃತ್ವದ ಪೀಠ, ಸಿಎಎಯನ್ನು ಪ್ರಶ್ನಿಸುವ ಅರ್ಜಿಗಳನ್ನು ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸಿತ್ತು.

2014 ರವರೆಗೆ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ ದೇಶಕ್ಕೆ ಬಂದಿರುವ ಹಿಂದೂ, ಸಿಖ್, ಬೌದ್ಧ, ಕ್ರಿಶ್ಚಿಯನ್, ಜೈನ ಮತ್ತು ಪಾರ್ಸಿ ಸಮುದಾಯಗಳಿಗೆ ಸೇರಿದ ಮುಸ್ಲಿಮೇತರ ವಲಸಿಗರಿಗೆ ಭಾರತೀಯ ಪೌರತ್ವ ನೀಡಲು 2019 ರ ತಿದ್ದುಪಡಿ ಕಾನೂನು ಜಾರಿಗೆ ಬಂದಿದೆ. ಮುಸ್ಲಿಮರನ್ನು ಹೊರಗಿಡುವ ಬಗ್ಗೆ ವಿರೋಧ ಪಕ್ಷಗಳು, ನಾಯಕರು ಮತ್ತು ಇತರರಿಂದ ತೀವ್ರ ಟೀಕೆಗಳು ವ್ಯಕ್ತವಾಗಿವೆ.

ಈ ವಿಷಯ ಕುರಿತು ಅರ್ಜಿ ಸಲ್ಲಿಸಿರುವುದರಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಮುಂಚೂಣಿಯಲ್ಲಿದೆ. ಕೇಂದ್ರದ ಮಾತುಗಳನ್ನು ಕೇಳದೆ ಪೌರತ್ವ (ತಿದ್ದುಪಡಿ) ಕಾಯ್ದೆಯ ಕಾರ್ಯಾಚರಣೆಯನ್ನು ತಡೆಹಿಡಿಯುವುದಿಲ್ಲ ಎಂದು ಜನವರಿ 2020ರಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತು. ಸಿಎಎಯನ್ನು ಪ್ರಶ್ನಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಕೇಂದ್ರ ಸರ್ಕಾರದಿಂದ ಪ್ರತಿಕ್ರಿಯೆಯನ್ನು ಕೋರಿರುವ ಉನ್ನತ ನ್ಯಾಯಾಲಯವು ಈ ವಿಷಯ ಕುರಿತ ಬಾಕಿ ಉಳಿದಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್‌ನಲ್ಲೂ ನಿರ್ಬಂಧಿಸಿದೆ. ಈ ಕಾಯ್ದೆ ಸಮಾನತೆಯ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಮತ್ತು ಧರ್ಮದ ಆಧಾರದ ಮೇಲೆ ಹೊರಗಿಡುವ ಮೂಲಕ ಅಕ್ರಮ ವಲಸಿಗರ ಒಂದು ವರ್ಗಕ್ಕೆ ಪೌರತ್ವವನ್ನು ನೀಡಲು ಉದ್ದೇಶಿಸಿದೆ ಎಂದು ಐಯುಎಂಎಲ್ ಹೇಳಿದೆ.

## ರಕ್ತದಾನದ ಮಹತ್ವ ಕುರಿತು ಅಂತರ ಕಾಲೇಜು ರಸಪ್ರಶ್ನೆ ಕಾರ್ಯಕ್ರಮ

ಮೈಸೂರು, ಅ.30– ಮೈಸೂರಿನ ಎಂ.ಎಂ.ಕೆ ಮತ್ತು ಎಸ್.ಡಿ.ಎಂ.ಮಹಿಳಾ ಮಹಾವಿದ್ಯಾಲಯದಲ್ಲಿ ಹೆಚ್.ಐ.ವಿ.ಏಡ್ಸ್ ರಕ್ತದಾನದ ಮಹತ್ವ ಕುರಿತು ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಮೈಸೂರು ಜಿಲ್ಲಾ ಏಡ್ಸ್ ಪ್ರತಿಬಂಧಕ ಘಟಕದ ಸಹಯೋಗದಲ್ಲಿ ಅಂತರ ಕಾಲೇಜು ಜಿಲ್ಲಾ ಮಟ್ಟದ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಈ ವೇಳೆ ಮೈಸೂರು ಜಿಲ್ಲಾ ಏಡ್ಸ್ ಪ್ರತಿಬಂಧಕ ಘಟಕದ ಕಾರ್ಯಕ್ರಮಾಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮ್ಮದ್ ಮಾತನಾಡಿ, ಇಪ್ಪತ್ತನೆಯ ಶತಮಾನದ ಬಹಳ ಗಂಭೀರ ಸಮಸ್ಯೆಯಾಗಿ ಕಾಣಿಸಿದ ಎಚ್.ಐ.ವಿ. ಏಡ್ಸ್ ರೋಗವು ಮಹಾಮಾರಿಯಾಗಿ ಜನರನ್ನು ಕಾಡುವುದರೊಂದಿಗೆ ಅಪಾರವಾದ ಸಮಸ್ಯೆಯನ್ನು ತಂದೊಡ್ಡಿದೆ. ಜಾಗತಿಗ ಸಮಸ್ಯೆಯಾದ ಈ ರೋಗವನ್ನು ತಡೆಯಲು ಯಾವುದೇ ಔಷಧಿಗಳಿಲ್ಲ. ಅರಿವು ಮತ್ತು ಜಾಗೃತಿಯ ಮೂಲಕ ಸಮಾಜದಲ್ಲಿ ಈ ರೋಗವನ್ನು ಹೋಗಲಾಡಿಸಲು ಯುವಜನರು ಪ್ರಯತ್ನ ಮಾಡಬೇಕೆಂದು ಕರೆ ನೀಡಿದರು.

ಏಡ್ಸ್ ರೋಗವು ಹೆಚ್ಚಾಗಿ ಅಸುರಕ್ಷಿತ ಲೈಂಗಿಕ ಸಂಪರ್ಕ ಮತ್ತು ಬೇಜವಾಬ್ದಾರಿಯುತವಾದ ಮನಸ್ಥಿತಿಯಿಂದ ಹರಡುವುದಾಗಿದೆ. ಈ ರೋಗವು ಬಂದರೆ ಸಾಕಷ್ಟು ರೀತಿಯ ವೈದ್ಯಕೀಯ ಸೌಲಭ್ಯವಿದ್ದರೂ ಸಾವನ್ನು ಮುಂದೂಡಬಹುದೇ ಹೊರತು ಪೂರ್ಣ ಪ್ರಮಾಣದಲ್ಲಿ ವಾಸಿಮಾಡಲು ಸಾಧ್ಯವಿಲ್ಲ. ಏಡ್ಸ್ ಬಂದಂತಹ ರೋಗಿಗಳಿಗೆ ಸಮಾಜದಲ್ಲಿ ಕೀಳರಿಮೆಯಿಂದ ನೋಡದೆ ಅವರಿಗೆ ಸಾಂತ್ವನ ಮತ್ತು ಅವರಿಗೆ ಧೈರ್ಯ ತುಂಬಬೇಕು. ಇಂದಿನ ಯುವ ಜನರು ಅರಿವು ಮತ್ತು ಜಾಗೃತಿಯ ಮೂಲಕ ಸಮಾಜದಲ್ಲಿ ಈ ರೋಗದ ಬಗೆಗೆ ತಿಳಿಸಬೇಕು ಎಂದರು.

ರಕ್ತದಾನವು ಶ್ರೇಷ್ಠದಾನವಾಗಿದ್ದು ಯುವಜನರು ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ರಕ್ತದಾನ ಮಾಡುವುದರಿಂದ ಇತರರಿಗೂ ಜೀವ ಉಳಿಸಿದ ಸಾರ್ಥಕ್ಯ ಉಂಟಾಗುತ್ತದೆ ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಸಾಯಿನಾಥ ಮಲ್ಲಿಗೆಮಾಡು ಮಾತನಾಡಿ, ಇಂದಿನ ಯುವಜನಾಂಗ ಹೆಚ್ಚು ಆಕರ್ಷಣೆಯ ಬದುಕಿಗೆ ಒಳಗಾಗಿ ಸಮಾಜದಲ್ಲಿ ಹಲವು ಸಮಸ್ಯೆಗಳನ್ನು ಅರಿಯುವ ಮನಸ್ಸನು ಇಲ್ಲವಾಗಿಸಿಕೊಳ್ಳದೆ ಸಾಮಾಜಿಕ ಜವಾಬ್ದಾರಿಯನ್ನು ಪಡೆದು ಈ ರೋಗದ ಬಗೆಗೆ ತಾವು ವಾಸಿಸುವ ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕು ವಿವೇಕಯುತವಾದ ಜೀವನವನ್ನು ನಾವು ಅಳವಡಿಸಿಕೊಂಡರೆ ಬದುಕು ವಿಕಸನವಾಗುವುದು. ಯುವಜನರು ಪತ್ರಿಕೆಗಳನ್ನು ಹೆಚ್ಚು ಓದುವುದರಿಂದ ಸಾಮಾಜಿಕವಾದ ಅರಿವನ್ನು ಪಡೆಯಬಹುದು. ವಿವಿಧ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಿಳುವಳಿಕೆ ಪಡೆಯಬಹುದಾಗಿದೆ. ಯುವಜನರು ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ಮನಸ್ಸು ರೂಢಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ನಗರದ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಥಮ ಬಹುಮಾನವನ್ನು ಮೈಸೂರಿನ ನಟರಾಜ ಮಹಿಳಾ ಪ್ರಥಮ ದರ್ಜೆ, ದ್ವಿತೀಯ ಬಹುಮಾನವನ್ನು ಎಸ್.ಡಿ.ಎಂ.ಮಹಿಳಾ ಕಾಲೇಜು ಮತ್ತು ತೃತೀಯ ಬಹುಮಾನವನ್ನು ಯುವರಾಜ ಕಾಲೇಜು ವಿದ್ಯಾರ್ಥಿಗಳು ಪಡೆದುಕೊಂಡರು. ಎಲ್ಲರಿಗೂ ಪ್ರಮಾಣಪತ್ರವನ್ನು ವಿತರಿಸಲಾಯಿತು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ಭಾರತದ ವಿರುದ್ಧ ದ.ಆಫ್ರಿಕಾಕ್ಕೆ 5 ವಿಕೆಟ್ ಜಯ

ಪರ್ತ್, ಅ.30– ಐಡೆನ್ ಮಾರ್ಕ್ರಾಮ್, ಡೇವಿಡ್ ಮಿಲ್ಲರ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ಭಾರತದ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.



ಇಲ್ಲಿನ ಕ್ರಿಕೆಟ್ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಿತು. ತಂಡದ ಪರ ಸೂರ್ಯಕುಮಾರ್ ಯಾದವ್ 40 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ 68 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಉಳಿದಂತೆ ನಾಯಕ ರೋಹಿತ್ ಶರ್ಮಾ 15, ವಿರಾಟ್ ಕೊಹ್ಲಿ 12 ರನ್ ಗಳಿಸಿದರು. ದ.ಆಫ್ರಿಕಾ ಪರ ಲುಂಗಿ ಎನ್‌ಗಿಡಿ 4, ಪರ್ನೆಲ್ 3, ನೋರ್ಟ್ಜೆ 1 ವಿಕೆಟ್ ಪಡೆದರು.

134ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 19.4 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 137ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ಐಡೆನ್ ಮಾರ್ಕ್ರಾಮ್ 52, ಡೇವಿಡ್ ಮಿಲ್ಲರ್ 59 ಹಾಗೂ ನಾಯಕ ತೆಂಬಾ ಬವುಮಾ 10 ರನ್ ಗಳಿಸಿದರು. ಭಾರತದ ಪರ ಅರ್ಶದೀಪ್ ಸಿಂಗ್ 2, ಮೊಹಮ್ಮದ್ ಶಮಿ, ಹಾರ್ದಿಕ್ ಪಾಂಡ್ಯ, ರವಿಚಂದ್ರನ್ ಅಶ್ವಿನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಲುಂಗಿ ಎನ್‌ಗಿಡಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

# 'ದಿವ್ಯ ಕಾಶಿ–ಭವ್ಯ ಕಾಶಿ' ದರ್ಶನ: ನ.11ರಿಂದ ರೈಲು ಪ್ರಾರಂಭ

ಬೆಂಗಳೂರು, ಅ.30– ರಾಜ್ಯದ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ 5 ಸಾವಿರ ರೂ. ಸಹಾಯಧನದೊಂದಿಗೆ ರಾಜ್ಯದ ಭಕ್ತಾಧಿಗಳಿಗೆ ದಿವ್ಯ ಕಾಶಿ– ಭವ್ಯ ಕಾಶಿ ದರ್ಶನ ಕಾರ್ಯಕ್ರಮ ಆಯೋಜಿಸಲಾಗಿದ್ದು, ಮುಂದಿನ ತಿಂಗಳು 11ರಿಂದ ರೈಲು ಪ್ರಾರಂಭವಾಗಲಿದೆ ಎಂದು ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ರೈಲು ಪ್ಯಾಕೇಜ್ ದರ ರೂ.15,000 ಆಗಿದ್ದು, 8 ದಿನಗಳ ವಿಶೇಷ ಟೂರ್ ಪ್ಯಾಕೇಜ್‌ನಲ್ಲಿ ಸಂಪೂರ್ಣ ಪ್ರಯಾಣ, ತಿಂಡಿ, ಊಟ, ವಸತಿ, ದರ್ಶನ ಹಾಗೂ ವಿಮೆ ಒಳಗೊಂಡಿರುತ್ತದೆ ಎಂದು ಅವರು ಹೇಳಿದ್ದಾರೆ. ಕಡಿಮೆ ವೆಚ್ಚದಲ್ಲಿ ಕಾಶಿ ವಿಶ್ವನಾಥ, ಅಯೋಧ್ಯೆ, ರಾಮಲಲ್ಲಾ ಮತ್ತು ಪ್ರಯಾಗ ರಾಜ್ ದೈವ ಭೂಮಿಯ ವೈಭವ ಸವಿಯುವ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಅವರು ವಿನಂತಿಸಿಕೊಂಡಿದ್ದಾರೆ. ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನ ವಿಶೇಷ ರೈಲು ಪ್ಯಾಕೇಜ್ ಬುಕ್ ಮಾಡಲು: https://bit.ly/3TRslIG ಸಂಪರ್ಕಿಸಬಹುದಾಗಿದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

### SITE FOR SALE
40x45 South Face
Price: Rs. 4,250 / sq.ft.
(Slightly Negotiable)
Just 100 Mts. from Surya Bakery Main Road, Hebbal, Mysore.
*Brokers Excuse*
9901212321, 8880883339

### ಮನೆ ಮಾರಾಟಕ್ಕಿದೆ
ಲಕ್ಷ್ಮಿ ಟಾಕೀಸ್ ಹಿಂಭಾಗ BB Laaya ರಸ್ತೆ, ಜಯಲಕ್ಷ್ಮಿ ವಿಲಾಸ ಶಾಲೆ ಎದುರು. 1367/3, k-27, 10.5 x 34 ವಿಸ್ತೀರ್ಣದ. 3 bedroom ಹೊಂದಿರುವ duplex ಮನೆಯು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ
9886188326 , 9880481296

### ಛತ್ರ ಖಾಲಿ ಇದೆ
ನವೆಂಬರ್ 20 ಮತ್ತು 21–2022 ವಿಠಲ ರುಕ್ಮಿಣಿ ಕನ್‌ವೆನ್‌ಷನ್ ಹಾಲ್. ಸಂಪರ್ಕಿಸಿ:
9880048310

### HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

### ಶ್ರೀ ಗೌರಿಶಂಕರ ಟ್ರಾವೆಲ್ಸ್
1-11-22 (8 ದಿನ) ದೆಹಲಿ, ಆಗ್ರಾ, ಪ್ರಯಾಗ್ ರಾಜ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
10–11–22 (4 ದಿನ) ಬಾಂಬೆ, ಶಿರಡಿ, ನಾಸಿಕ್ 3 ಜ್ಯೋತಿರ್ಲಿಂಗ, ಎಲ್ಲೋರ.
24–12–22 (6 ದಿನ) ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಕೊಚ್ಚಿ, ಆಲಪ್ಪಿ ಇತ್ಯಾದಿ.
ವಿಮಾನ / ಬಸ್ / ಊಟ / ರೂಂ
9620002114

### SITES @ MYSURU
OFF MYSURU - NANJANAGUD ROAD
NEAR TALUR CIRCLE
DTCP APPROVED & 'A' KHATA
30X40 SOUTH FACING | 75% LOAN
Rs. 760/- SQFT
GSS 73497-98444

### BUILDING FOR RENT
at Prime Location in K.T.Street,
3 Floors,
G & 1 - Shop
2 & 3 - Gowdown
(15x25) Size
9449087351 / 8618622350

### V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

### TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

### SITE FOR SALE
20x30 East Face, Muda Approved, Preethi Layout, 3rd Stage, Sreerampura, Mysore
9620026084

### SPRINT CONSTRUCTIONS
WORK WITH QUALITY
* CIVIL ENGINEERS * BUILDERS
20x30 SITE FOR SALE- 16.5 LAKHS
20x30 HOME - 36LAKHS
( MUDA, NEAR BELVADI, CLOSE TO HIGHWAY).
# 484, Chaduranga Road, R.K.Nagar, Mysuru-22
Ph: 9538525456, 0821-4525966
Web: www.sprintconstructions.net
BY SPRINT VENTURES PVT LTD.

### ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ಮ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

### MUDA / DTCP SITES
ಹೆಚ್.ಡಿ.ಕೋಟೆ ರಸ್ತೆಯಲ್ಲಿ ಉತ್ತಮ ನಿವೇಶನಗಳು 11 ಲಕ್ಷಕ್ಕೆ ಲಭ್ಯವಿದೆ. ಬನ್ನೂರು ರಸ್ತೆಯಲ್ಲಿ 30x50 ಅಳತೆಯುಳ್ಳ ಸೈಟುಗಳು 36.5 ಲಕ್ಷಕ್ಕೆ ಮಾರಾಟಕ್ಕಿದೆ. ಬ್ಯಾಂಕ್ ಸೌಲಭ್ಯ ದೊರಕುತ್ತದೆ. ಸಂಪರ್ಕಿಸಿ:
9663104263

### HOUSE FOR SALE
20x30 Duplex House Three (3) BHK MUDA approved Layout, Near Dattagalli, Mysore. Contact:
Mail: pantanginarasimharao@gmail.com
8310259191
8618255505

### ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

### ಸೈಟು ಮಾರಾಟಕ್ಕಿದೆ
40x40 ಅಳತೆಯ 'ಎ' ಖಾತೆಯುಳ್ಳ ಸೈಟು ಮಾರಾಟಕ್ಕಿದೆ. 17 ಲಕ್ಷದ 50 ಸಾವಿರಗಳು ಟಿವಿಎಸ್ ಫ್ಯಾಕ್ಟರಿ ಹತ್ತಿರ (ಲೋನ್ ಸೌಲಭ್ಯವಿದೆ) ಮೈಸೂರು
9742198093

### ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು – 10 ಮಂದಿ
ಸ್ಥಳ: 1) ಅಗ್ರಹಾರ, 2) ವಿದ್ಯಾರಣ್ಯಪುರಂ, 3) ಗುಂಡ್ಲುಪೇಟೆ ಮತ್ತು ಮೈಸೂರು ಸುತ್ತಮುತ್ತ. ವಸತಿ ಹಾಗೂ ಊಟದ ವ್ಯವಸ್ಥೆಯಿದೆ.
9686422400
9242406261

### ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ.)
8050699742 / 7892480649

### ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

### ಶ್ರೀ ಗುರು ದತ್ತಾತ್ರೇಯ ಜ್ಯೋತಿಷ್ಯ ಮಂದಿರ
ಪಂಡಿತ ಗುರುದತ್ತ ಭಟ್
ಗುರುವಿನ ದೈವ ಶಕ್ತಿ ಜ್ಯೋತಿಷರು
ನಿಮ್ಮ ಜನ್ಮ ದಿನಾಂಕ ಸಮಯದ ಆಧಾರದಿಂದ ಜಾತಕ ನೋಡಿ ಕುಟುಂಬದ ಸಂಪೂರ್ಣ ಭವಿಷ್ಯ ನುಡಿಯುವ ಏಕೈಕ ಜೋತಿಷ್ಯರು, ನಿಮ್ಮ ಜೀವನದಲ್ಲಿ ಅನುಭವಿಸುವ ಸಂಕಷ್ಟಗಳಿಗೆ ದತ್ತಾತ್ರೇಯ ಸ್ವಾಮಿ ಅನುಗ್ರಹದಿಂದ ಪರಿಹಾರ ಶತಸಿದ್ಧ. ಚಿಂತಿಸ ಬೇಡಿ, ಇಂದೇ ಕರೆ ಮಾಡಿ.
9686315566
ಮನೆ ವಿಳಾಸ: #1381, ಸುಯೋಗ ಆಸ್ಪತ್ರೆ ಪಕ್ಕ, ರಾಮಕೃಷ್ಣನಗರ, ಮೈಸೂರು.
ಇದು ಚಮತ್ಕಾರ ಅಲ್ಲ ಸಿದ್ಧಿ ಸಾಧಕರ ಸಾಧನೆ

### ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME -BASED
ecode GAS SAFE | All Taluk & Dist

| EDUCATION ವಿದ್ಯಾರ್ಹತೆ | WORK TIME ಕೆಲಸದ ಸಮಯ | SALARY ಸಂಬಳ |
|---|---|---|
| SSLC,PUC any DEEGREE | 4 HOURS 8 HOURS | 8000/- UP TO 19000/- |

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

### ಶ್ರೀ ಕನ್ನಿಕಾ ಪರಮೇಶ್ವರಿ ಜ್ಯೋತಿಷ್ಯಾಲಯ
ಪಂಡಿತ್. ಭೀಮರಾವ್
ನಿಮ್ಮ ಒಂದೇ ಕರೆ ನಿಮ್ಮ ಭವಿಷ್ಯವನ್ನು ಬದಲಿಸುವುದು ಬೇರೆ ಯಾರಾದರೂ ಮಾಡಿಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸಾಲ ಬಾಧೆ, ದಾಂಪತ್ಯ ಸಮಸ್ಯೆ, ಪ್ರೇಮ ವಿಚಾರ, ಅತ್ತೆ ಸೊಸೆ ಕಲಹ, ಲೈಂಗಿಕ ಸಮಸ್ಯೆ ಇನ್ನೂ ಅನೇಕ ಗುಪ್ತ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ 100% ಶಾಶ್ವತ ಪರಿಹಾರ
9972196728
ವಿಳಾಸ: 806, 3ನೇ ಹಂತ, ಆದಿತ್ಯ ಆಸ್ಪತ್ರೆ ಹತ್ತಿರ, ಗೋಕುಲಂ, ಮೈಸೂರು.

### ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್, ತುಮಕೂರು
ಎಸಿ ರೂಂ, ಊಟದೊಂದಿಗೆ ವಿಮಾನದಲ್ಲಿ 24–11–2022, 10 ದಿನಗಳ ಉಜ್ಜಯಿನಿ, ಗುಜರಾತ್ ನಾಲ್ಕು ಜ್ಯೋತಿರ್ಲಿಂಗ, ಪಟೇಲ್ ಪ್ರತಿಮೆ ವಿಮಾನ ಪ್ರವಾಸ.
29–12–22 ದೆಹಲಿ, ಕಾಶಿ, ಗಯಾ, ಪ್ರವಾಸ 8 ದಿನಗಳು.
8496044942

### ಮಾರಾಟಕ್ಕಿದೆ
ಸೈಟು + ಮನೆ ರೆವಿನ್ಯೂ
20x30 - 26 ಲಕ್ಷ
30x40 - 41 ಲಕ್ಷ
ಆರ್.ಎಸ್.ನಾಯ್ಡುನಗರ
ಸೈಟ್ + ಮನೆ ಮುಡಾ
20x30 - 55 ಲಕ್ಷ
ಡಾ|| ರಾಜ್ ಕುಮಾರ್ ರೋಡ್, ಸಾತಗಳ್ಳಿ
SBR Construction
9900840025

### WANTED
Typist, DTP ಕೆಲಸಕ್ಕೆ
ಇಂಗ್ಲೀಷ್ & ಕನ್ನಡ
ಜಯನಗರ
9844242414

### Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

### ಬೈಕ್ ರೈಡರ್ ಬೇಕಾಗಿದ್ದಾರೆ
rapido BIKE TAXI
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

### ಬೇಕಾಗಿದ್ದಾರೆ
ಕುಶಾಲನಗರ, ಕೊಡಗು ಅನುಭವವುಳ್ಳ ಇಂಡಕ್ಷನ್ ಹಾಗೂ ಸಬ್‌ಮರ್ಸಿಬಲ್ ಮೋಟಾರ್ ರಿವೈಂಡರ್ ಸ್ಟಾರ್ಟರ್ ರಿಪೇರಿ ಮಾಡುವವರು, ಲೇತ್ ಟರ್ನರ್, ಹಿಟಾಚಿ, JCB, CO2 ವೆಲ್ಡಿಂಗ್ ಮಾಡುವವರು ಬೇಕಾಗಿದ್ದಾರೆ. ವೇತನ: 20,000 ದಿಂದ 30,000 ವರೆಗೆ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ:
9448433350 / 9945465002

### GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

### WANTED
Office Assistant cum Marketing Executive (Female Only) Qualification: Any Degree with the knowledge of MS Excel, Word. Contact:
9606539394
08212953294

### WANTED
SERVICE ENGINEER
B.E / Diploma / ITI / Mechanical
Kent RO Water Purifier Authorised Service Center / Home Appliances
TELE CALLERS / OFFICE WORK - FEMALE
9900237315 / 9845963421

### ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಿ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

### ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: 5th ತರಗತಿಯಿಂದ 2nd PUC ಮತ್ತು ITI (Fitter) B.Com. ಹುಡುಗರು ಬೇಕಾಗಿದ್ದಾರೆ. ESI & PF ಸೌಲಭ್ಯ ಇರುತ್ತದೆ. ಸಂಬಳ: 11,500 ರಿಂದ 14,000 ಇರುತ್ತದೆ. ಸಂಪರ್ಕಿಸಿ:
8951869646, 9902645646

### ಸೋಲಾರ್ ವಾಟರ್ ಹೀಟರ್ Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

### 40x60 Site for Sale
(MUDA Approved)
Sapthamathruka Layout, Near Sai Baba Temple Site No. 290.
(Owner) Contact:
Mob: 9686510532

### ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾದೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

### ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯಸ್ಸು– 18 ರಿಂದ 30 ವರ್ಷದೊಳಗಡೆ ಇರಬೇಕು. ವಿದ್ಯಾರ್ಹತೆ: SSLC, ITI, Any Trade ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಕೂಲತೆ: PF, ESI ಊಟದ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
7019380847 / 9591977540
9845743950

### ಶ್ರೀ ಮಹಾಕಾಳಿ ಜ್ಯೋತಿಷ್ಯರು
ನಿಮ್ಮೆಲ್ಲಾ ಸಮಸ್ಯೆಗಳಿಗೆ ಕಾಳಿದೇವಿಯ ಸರ್ವಸಿದ್ಧಿ ಪೂಜಾ ಶಕ್ತಿಯಿಂದ ಶಾಶ್ವತ ಪರಿಹಾರ. ಮದುವೆ ಸಮಸ್ಯೆ, ಹಣದ ಸಮಸ್ಯೆ, ಪ್ರೀತಿಯ ಸಮಸ್ಯೆ, ಉದ್ಯೋಗದ ಸಮಸ್ಯೆ, ಗಂಡ–ಹೆಂಡತಿ ಕಲಹ.
ಪ್ರಧಾನ ಜ್ಯೋತಿಷಿ ಹನುಮಂತರಾವ್
Mob: 9686487402

### WANTED
ETIOS / SWFT DZIRE above 2018 model (For attachment for Govt. Office) white colour.
ಭದ್ರತಾ ಸಿಬ್ಬಂದಿಗಳು (ವಯಸ್ಸು 30 ರಿಂದ 50) ರಾತ್ರಿ ಪಾಳಿಯ ಮಾತ್ರ, ಸಿಟಿ ಸುತ್ತಮುತ್ತ.
Mob: 9036745292
(Call 10 am to 6 pm)

### WANTED
TRAINEE ENGINEERS
For an industry in Mysore, male candidate, BE / Diploma: E&E / E&C. Contact between 10 am to 5 pm.
Mob: 9901178588
APPLY WITH RESUME: hr.sipltd@yahoo.com

### DOCUMENTS LOST
B. Samiulla Khan, Door No. 750, Bannimantap 'B' Layout, S.S. Nagar, Mysore-570 015, have lost MUDA property documents bearing P.No. 750, 'B' Layout, Bannimantap, Mysore City. *Finders please contact:*
Mob: 8453855599

### DOCUMENTS LOST
B. Samiulla Khan, Door No. 750, Bannimantap 'B' Layout, S.S. Nagar, Mysore-570 015, I lost MUDA property documents bearing P.No. Model House No. 2, Bannimantap 'C' Layout, Mandi Mohalla, Mysore. Finders please contact:
Mob: 8453855599

### ಸುವರ್ಣ ಯಾತ್ರ
8 ದಿನಗಳ ನೇಪಾಳ ಪ್ರವಾಸ, 15–11–22 ಮುಕ್ತಿನಾಥ, ಕಠ್ಮಂಡು, ಬುದ್ಧನೀಲಾಕಂಠ, ಪಶುಪತಿನಾಥ, ಮನೋಕಾಮನ, ಪೋಕ್ರಾ, ಗುಹ್ಯೇಶ್ವರಿ ಶಕ್ತಿ ಪೀಠ, ಅಯೋಧ್ಯೆ, ಲುಂಬಿನಿ, ಸೋನಾಲಿ ಹಾಗೂ ಇತರೆ ಸ್ಥಳಗಳು.
9019462508, 9008381022

### ನಿಮ್ಮ ಮನೆಯಲ್ಲಿ ನಲ್ಲಿ ಕೆಲಸ
ನಿಮ್ಮ ಮನೆಯಲ್ಲಿ ನಲ್ಲಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆಮಾಡಿ.
VASANTHA BUILDERS
Mob: 9164573142, 8151035074, 9538638587

### ಹೋಂನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು 8hr ಹಾಗೂ 24hr ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ: 12,000 – 23,000 ರವರೆಗೆ (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ) ಅಗ್ರಹಾರ:
9035113222
9513203333

### ತಕ್ಷಣ ಬೇಕಾಗಿದ್ದಾರೆ
ಪ್ರತಿಷ್ಠಿತ ಸೋಲಾರ್ ಕಂಪನಿಯಲ್ಲಿ ಮಾರ್ಕೆಟಿಂಗ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ: Any Degree. (ದ್ವಿಚಕ್ರ ವಾಹನ ಕಡ್ಡಾಯ) ಮತ್ತು ಆಫೀಸ್‌ನಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: B.Com., B.Sc., BBA, M.Com.
Call: 9535608456

### ಸುವರ್ಣ ಯಾತ್ರ
ಕಾರ್ತೀಕ ಮಾಸದ ವಿಶೇಷ ಕಾಶಿ ಪ್ರವಾಸ, 7 ದಿನಗಳು, 15–11–22. 2 ಜ್ಯೋತಿರ್ಲಿಂಗ ದರ್ಶನದೊಂದಿಗೆ, ಶ್ರೀ ಬಾಬಾ ಬೈದ್ಯನಾಥ ನೈಮಿಷರಾಣ್ಯ, ಅಲೋಪಿದೇವಿ ಶಕ್ತಿಪೀಠ, ಪ್ರಯಾಗ್‌ರಾಜ್, ಅಯೋಧ್ಯೆ ಹಾಗೂ ಇತರೆ ಸ್ಥಳಗಳು.
9019462508, 9008381022

### Vedika Tutorials
For Diploma ($M_1 M_2$), B.E. Mathematics ($M_1$, $M_2$, $M_3$, $M_4$) & for backlogs.
Online and Offline.
Admission Open
Niveditha Nagara, Mysuru
For more information contact:
9480905031, 8694836999

### ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಮೈಸೂರಿನವರಿಗೆ ಮಾತ್ರ.
Mob: 9886745981

### ಬಾಡಿಗೆಗಿದೆ
ಮೈಸೂರಿನಲ್ಲಿ ಶ್ರೀರಾಂಪುರ 2ನೇ ಸ್ಟೇಜ್, 2ನೇ ಕ್ರಾಸ್, ಮಹಾವೀರ ಸ್ಕೂಲ್‌ನ ಹತ್ತಿರ, 2ನೇ ಫ್ಲೋರ್‌ನಲ್ಲಿ ಅಟ್ಯಾಚಡ್ ಬಾತ್ ರೂಂ ಇರುವ ಒಂದು ರೂಂ ಬಾಡಿಗೆಗೆ ದೊರೆಯುತ್ತದೆ. ವೆಜಿಟೇರಿಯನ್‌ಗೆ ಮಾತ್ರ ಬ್ರೋಕರ್‌ಗಳಿಗೆ ಅವಕಾಶವಿಲ್ಲ.
9902614246, 9611646047

### ಬಂಧನ ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಪ್ರತಿದಿನ ವಧು ವರರ ನೇರ ಸಂದರ್ಶನ ಇರುತ್ತದೆ.
ಡಾ.ಗುರೂಜಿ ಮೈಸೂರು
6361740552
www.bhandhana.com

### ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್.ಆರ್.ಮೊಹಲ್ಲ ಮುಂತಾದ ಏರಿಯಾಗಳಲ್ಲಿನ ಕಂಪನಿ, ಆಫೀಸ್, ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ, ಸಂಬಳ: 14,000–36000/– ಸಂಪರ್ಕಿಸಿ:
7892878915
9663704915

### ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

### ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

### ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

### FOR SALE
1) 30x40 - 12 Lakhs 30x50 - 15 L sites available attch Brahmins E blk layout. (2) 12x36 G+2 House Kuvempunagar 28 Guntas Land in Varkodu. (3) 30x40 Sites and House Dattagalli, JP Nagar, Vijayanagar, Srirampura, Vijayanagar.
PRAKRUTHI PROPERTIES
90359 90359, 95386 90359

### WANTED
Marketing manager - 02
Anchors - 02
Female Telecaller - 08
Data Entry Operators - 10
*For More Information*
Call: 9743283001

### HOUSE FOR RENT
2BHK House / First Floor, South Face #521, 2nd Main, 12th Cross, B.M.Shree Nagar, Mysore - 16.
9035041491 / 9036262544

### ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

### AFFIDAVIT
Abdur Rehman S/o Abdul Mabood (Ghousiyanagar Mysore) That my father name Abdul Mabood as mentioned in Passport bearing No. S4851685 and other Document. But in the Visa bearing No.174180461 issued by Kingdom of Saudi Arabia my father name has not been mentioned as for the Affidavit sworn by me before Asadulla Khan Notary, Mysore on 29/10/2022.
Sd/- Abdur Rehman

### ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

### WANTED
For Hotel M B International Banquet Sales Manager, General Manager, Receptionist, House Keeping Staff, Office Assistant. Call
9739786223

### ಪರ್ಮನೆಂಟ್ ಉದ್ಯೋಗ
ಮೈಸೂರಿನಲ್ಲಿರುವ Govt Rgstd A.W Group of ಕಂಪನಿಯಲ್ಲಿ ಖಾಲಿಯಿರುವ ಪರ್ಮನೆಂಟ್ ಹುದ್ದೆಗಳಿಗೆ 217 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, Joc - 67, PUC, ITI-98, Dip, any Degree-52 ವಯೋಮಿತಿ ; 18 to 30 years, ತಿಂಗಳಿಗೆ: 19800-25000/- (ಉಚಿತ ವಸತಿ)
ಸೌಂದರ್ಯ :
9844219943, 9900163228

### ಉಚಿತ ಉಚಿತ ಉಚಿತ
ನಮ್ಮ ಬಟ್ಟೆಯ ಶಾಪ್‌ನಲ್ಲಿ ಲೆನಿನ್ ನಂತಹ ರೇಮಂಡ್ಸ್ ನಂತಹ ಬಟ್ಟೆಗಳಲ್ಲಿ ನೀವು ಆಯ್ಕೆ ಮಾಡಿದ ಶರ್ಟು ಮತ್ತು ಪ್ಯಾಂಟ್ ಬಟ್ಟೆಯನ್ನು ಖರೀದಿಸಿದರೆ ಉಚಿತವಾಗಿ ಸ್ಟಿಚಿಂಗ್‌ನ್ನು ಮತ್ತು ನಿಮ್ಮ ಸೈಜಿನ ಡಾಲರ್ ಕಂಪನಿಯ ಅಂಡರ್‌ವೇರ್ ಮತ್ತು ಬನಿನ್‌ಯನ್ನು ಉಚಿತವಾಗಿ ಪಡೆಯಿರಿ ಬೆಲೆ ರೂ. 1600/- (ಷರತ್ತು ಅನ್ವಯ)
ಶಿವರಾಂಪೇಟೆಯ ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ
9206470833 ಮೈಸೂರು

### ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ
ಬೇಕಾಗಿದ್ದಾರೆ
1) ಬನ್ನಿಮಂಟಪದಲ್ಲಿರುವ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ ಮತ್ತು ಸ್ವಚ್ಛತಾ ಕೆಲಸಗಾರರು ಬೇಕಾಗಿದ್ದಾರೆ. 2) ಜೆ.ಎಸ್.ಎಸ್ ಸಂಸ್ಕೃತ ಪಾಠ ಶಾಲೆ ವಿದ್ಯಾರ್ಥಿನಿಲಯದಲ್ಲಿ ಸ್ವಚ್ಛತಾ ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ, ನಂ.513, ಕೆ.ಎನ್.ಅಗ್ರಹಾರ, ಲಕ್ಷ್ಮೀ ಚಿತ್ರಮಂದಿರ ಎದುರು ರಸ್ತೆ, ಮೈಸೂರು.
0821-4247385
ಕೆ.ಆರ್.ಮೊಹಲ್ಲಾ, ಮೈಸೂರು

### SITES FOR SALE
20x30 & 30x40
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.
8660105902

### ಸೈಟು ಮಾರಾಟಕ್ಕಿದೆ
30x40 ವಿಜಯನಗರ 4ನೇ ಹಂತ, 2ನೇ ಕ್ರಾಸ್, ಸೈಟ್ ನಂ.10827, ಟೈಟಲ್ ಡೀಡ್ ಇದೆ.
8123078847

### ಸೈಟು ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ / ಶಾಂತವೇರಿ ಗೋಪಾಲಗೌಡ ನಗರದಲ್ಲಿ / ಲಲಿತಾದ್ರಿಪುರ ಬಡಾವಣೆ (South)
7676707676

### SITE FOR SALE
in Srirampura L.V.R. Layout, 40x60 - West - 78 Lakhs
Site for Sale in Vijayanagar 2nd Stage 47x50, East - 1.65 Cr.
7411093332 / 8660486231

### WANTED
ಮೈಸೂರಿನ ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು Diploma (Mechanical), with system knowledge. Freshers or with experience ಬೇಕಾಗಿದ್ದಾರೆ. ಒಳ್ಳೆಯ ವೇತನ Rs. 16,000 to Rs. 25,000 ಹಾಗೂ ಇತರೆ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9845395975, 9632081498
email: kushalenterprisesmys@gmail.com

### ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಜಿಲ್ಲಾ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಪೊಲೀಸ್ ಕವಾಯತು ಮೈದಾನಕ್ಕೆ ಸ್ಥಳಾಂತರ



ಮಂಡ್ಯ, ಅ.30– ಕಳೆದ ಹಲವು ವರ್ಷಗಳಿಂದ ಜಿಲ್ಲಾಡಳಿತದ ವತಿಯಿಂದ ನಡೆಯುವ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ಮೊದಲ ಬಾರಿಗೆ ಜಿಲ್ಲಾ ಕ್ರೀಡಾಂಗಣ ಸರ್.ಎಂ.ವಿಶ್ವೇಶ್ವರಯ್ಯ ಮೈದಾನದಿಂದ ನಗರದ ಬನ್ನೂರು ರಸ್ತೆಯಲ್ಲಿರುವ ಪೊಲೀಸ್ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನಕ್ಕೆ ಸ್ಥಳಾಂತರವಾಗಿದೆ.

ಈ ಕುರಿತು ಶನಿವಾರ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ 67ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಎಚ್.ಎನ್. ಗೋಪಾಲಕೃಷ್ಣ, ಸರ್‌ಎಂವಿ ಕ್ರೀಡಾಂಗಣದಲ್ಲಿ ಮಳೆಯಿಂದ ನೀರು ಭರ್ತಿಯಾಗಿದ್ದ ಪರಿಣಾಮ ರಿಪೇರಿ ಕಾಮಗಾರಿ ನಡೆಯುತ್ತಿದೆ. ಆದ್ದರಿಂದ ಅನಿವಾರ್ಯವಾಗಿ ಸಮಾರಂಭವನ್ನು ಪೊಲೀಸ್ ಸಶಸ್ತ್ರ ಮೀಸಲು ಪಡೆಯ ಕವಾಯತು ಮೈದಾನಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ನಗರದ ಉದ್ಯಾನವನ ಮತ್ತು ಸರ್ಕಲ್‌ಗಳಲ್ಲಿರುವ ಪ್ರತಿಮೆಗಳಿಗೆ ಹೂವಿನ ಹಾರದ ವ್ಯವಸ್ಥೆ ಮಾಡುವಂತೆ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಿಗೆ ಸೂಚಿಸಿದ ಡಿಸಿ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ, ರೇಷ್ಮೆ ಇಲಾಖೆ, ಪಶು ಸಂಗೋಪನ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ವತಿಯಿಂದ ನಿರ್ಮಾಣ ಮಾಡುವ ಸ್ತಬ್ಧ ಚಿತ್ರಗಳ ಮಾಹಿತಿಯನ್ನು ಮೆರವಣಿಗೆ ಉಪಸಮಿತಿಯ ಗಮನಕ್ಕೆ ಮುಂಚಿತವಾಗಿ ತರುವಂತೆ ಸೂಚಿಸಿದರು.

ಉತ್ತಮ ರೀತಿಯಲ್ಲಿ ರಾಷ್ಟ್ರಗೀತೆ, ನಾಡಗೀತೆ ಮತ್ತು ರೈತಗೀತೆಯನ್ನು ಹಾಡಿಸಲು ಡಿಡಿಪಿಐ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ನವೆಂಬರ್ 1 ರಂದು 7–30 ಕ್ಕೆ ಅಲಂಕೃತ ತಾಯಿ ಭುವನೇಶ್ವರಿಯ ಭಾವಚಿತ್ರದ ರಥಕ್ಕೆ ಪೂಜೆ ಸಲ್ಲಿಸಿ ಜಿಲ್ಲಾಧಿಕಾರಿಗಳ ಕಚೇರಿಯಿಂದ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾ ತಂಡಗಳು, ಪೊಲೀಸ್ ಬ್ಯಾಂಡ್ ಸೆಟ್, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ ತಂಡ, ವಿವಿಧ ಇಲಾಖೆಗಳ ಸ್ತಬ್ಧ ಚಿತ್ರಗಳು, ಕನ್ನಡ ಧ್ವಜ, ಕನ್ನಡ ಜಾಗೃತಿ ಫಲಕ, ಪರಿಸರ ಜಾಗೃತಿ ಫಲಕಗಳ ಏರ್ಪಾಡು ಮಾಡಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು.

ಸಭೆಯಲ್ಲಿ ಅಪರಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಉದಯಕುಮಾರ್, ತಹಶೀಲ್ದಾರ್ ಕುಂ.ಇ.ಅಹಮದ್, ಎಎಸ್ಪಿ ವೇಣುಗೋಪಾಲ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜವರೇಗೌಡ, ಜಿಲ್ಲಾಧಿಕಾರಿಗಳ ಕಚೇರಿಯ ಹಿರಿಯ ಸಹಾಯಕ ಸ್ವಾಮಿಗೌಡ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೇಲುಕೋಟೆಯಲ್ಲಿ ರಾಜಮುಡಿ ಬ್ರಹ್ಮೋತ್ಸವ ಆರಂಭ

ಮೇಲುಕೋಟೆ, ಅ.30– ಚೆಲುವನಾರಾಯಣಸ್ವಾಮಿಯವರ ಕಾರ್ತಿಕ ಮಾಸದ 'ರಾಜಮುಡಿ ಬ್ರಹ್ಮೋತ್ಸವ' ಭಾನುವಾರ ಸಂಜೆ ವಿಧ್ಯುಕ್ತವಾಗಿ ಆರಂಭವಾಯಿತು. ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ಗರುಡ ಪಟವನ್ನು ಚಿನ್ನದ ಧ್ವಜಸ್ತಂಭದಲ್ಲಿ ಆರೋಹಣ ಮಾಡಲಾಯಿತು.

ಧ್ವಜಾರೋಹಣದ ನಿಮಿತ್ತ ಗರುಡಪಟ ದೊಂದಿಗೆ ಚೆಲುವನಾರಾಯಣಸ್ವಾಮಿ ಉತ್ಸವ ನಡೆದ ನಂತರ ಚಿನ್ನದ ಧ್ವಜಸ್ತಂಭದ ಬಳಿ 3ನೇ ಸ್ಥಾನಿಕರಾದ ಕರಗಂ ನಾರಾಯಣ ಅಯ್ಯಂಗಾರ್ ಮುಕುಂದನ್, ಪ್ರಾರ್ಥ, ಸಂತಾನ ಕುಮಾರನ್, ಗರುಡಸ್ತುತಿಯನ್ನು ಪಠಿಸಿದ ನಂತರ ಧ್ವಜಾರೋಹಣ ನೆರವೇರಿಸಲಾಯಿತು.

ಬ್ರಹ್ಮೋತ್ಸವದ 4 ದಿನವಾದ ನವೆಂಬರ್ 2ರ ರಾತ್ರಿ 7 ಗಂಟೆಯ ವೇಳೆಗೆ ಮೈಸೂರು ರಾಜ ಒಡೆಯರ್ ಸಮರ್ಪಿಸಿರುವ ವಜ್ರಖಚಿತ ರಾಜಮುಡಿ ಕಿರೀಟ, ಗಂಡಬೇರುಂಡ ಪದಕ ಸೇರಿದಂತೆ 16 ವಜ್ರಖಚಿತ ಆಭರಣಗಳಿಂದ ಸ್ವಾಮಿಯನ್ನು ಅಲಂಕರಿಸಿ ಉತ್ಸವ ನೆರವೇರಿಸಲಾಗುತ್ತದೆ. ನವೆಂಬರ್ 3ರ ಗುರುವಾರ ಚೆಲುವನಾರಾಯಣನ ಅಷ್ಠತೀರ್ಥೋತ್ಸವ ಸಂಜೆ ತೊಟ್ಟಿಲಮಡುವಿನಲ್ಲಿ ನಡೆಯಲಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಸಿ.ಎಸ್. ಪುಟ್ಟರಾಜು, ಪ್ರಖ್ಯಾತ ರಾಜಮುಡಿ ಮತ್ತು ಅಷ್ಠತೀರ್ಥೋತ್ಸವ ಪ್ರಯುಕ್ತ ಚೆಲುವನಾರಾಯಣಸ್ವಾಮಿ ದೇವಾಲಯದ ರಾಜಗೋಪುರ ಮತ್ತು ರಾಜಬೀದಿಗೆ ಈ ವರ್ಷದಿಂದಲೇ ಸರಳ ದೀಪಾಲಂಕಾರ ಮಾಡಲಾಗುತ್ತದೆ ಎಂದರು.



ನವೆಂಬರ್ 2 ರಂದು ರಾಜಮುಡಿ ಉತ್ಸವ ಹಾಗೂ 3 ರಂದು ತೊಟ್ಟಿಲಮಡು ಜಾತ್ರೆಯೂ ವೈಭವವಾಗಿ ನಡೆಯಬೇಕು. ತೊಟ್ಟಿಲಮಡು ಬಳಿ ಮೇಲುಕೋಟೆ ಗ್ರಾಮ ಪಂಚಾಯಿತಿ ದೀಪಾಲಂಕಾರ ಮತ್ತು ಉತ್ತಮ ಬೆಳಕಿನ ವ್ಯವಸ್ಥೆ ಮಾಡಿದೆ. ಇದೇ ವೇಳೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇವೆ ಎಂದರು.

ಪ್ರಖ್ಯಾತ ಶ್ರೀವೈಷ್ಣವ ಕ್ಷೇತ್ರವಾದ ಮೇಲುಕೋಟೆಯಲ್ಲಿ ಆರಾಧ್ಯದೈವ ಚೆಲುವನಾರಾಯಣಸ್ವಾಮಿಯ ಎಲ್ಲಾ ಉತ್ಸವಗಳೂ ವೈಭವದಿಂದ ನಡೆಯಬೇಕು. ಇದಕ್ಕಾಗಿ ಶಕ್ತಿಮೀರಿ ಶ್ರಮಿಸುತ್ತೇನೆ. ರಾಜಮುಡಿ ಹಾಗೂ ಅಷ್ಠತೀರ್ಥೋತ್ಸವದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸ್ವಾಮಿಯ ದರ್ಶನ ಪಡೆದು ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು ಎಂದರು.



ಶ್ರೀರಂಗಪಟ್ಟಣ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ. ಶ್ರೀನಿವಾಸ್ ಅವರನ್ನು ಮಂಡ್ಯ ಜಿಲ್ಲಾ ಸರ್ಕಾರಿ ನೌಕರರ ಸಂಘದ ಗೌರವ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ಅಧಿಕಾರ ಸ್ವೀಕರಿಸಿದ ವೇಳೆ ಅವರನ್ನು ಸದಸ್ಯರುಗಳು ಅಭಿನಂದಿಸಿದರು.

## ಕನಗನಮರಡಿಯಲ್ಲಿ ತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆ



ಪಾಂಡವಪುರ, ಅ.30– ಜಿಲ್ಲಾ ಪಂಚಾಯಿತಿ ಅನುದಾನದಡಿ 9 ಲಕ್ಷ ರೂ. ವೆಚ್ಚದಲ್ಲಿ ತಾಲೂಕಿನ ಕನಗನಮರಡಿ ಗ್ರಾಪಂ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡಿರುವ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಶಾಸಕ ಸಿ.ಎಸ್.ಪುಟ್ಟರಾಜು ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಕನಗನಮರಡಿ ಗ್ರಾಪಂನಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕಾಗಿ ಸುಮಾರು 9 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಗ್ರಾಪಂನಲ್ಲಿ ಘಟಕ ನಿರ್ಮಾಣ ಮಾಡಲಾಗಿದ್ದು, ಇಂದು ಚಾಲನೆ ನೀಡಲಾಗಿದೆ. ಘಟಕವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ತಾಪಂ ಇಓ ಲೋಕೇಶ್‌ಮೂರ್ತಿ, ಗ್ರಾಪಂ ಅಧ್ಯಕ್ಷ ಸ್ವಾಮಿಗೌಡ, ಉಪಾಧ್ಯಕ್ಷೆ ಚಂದ್ರಕುಮಾರಿ, ಸದಸ್ಯರಾದ ಹೆಗ್ಗಡಹಳ್ಳಿ ರಾಮಕೃಷ್ಣ, ಕೆ.ಎಸ್.ರಂಗಸ್ವಾಮಿ, ಮಂಜುನಾಥ್, ಈರಚಾರಿ, ಅಭಿ, ಪ್ರಮಿಳ, ಸ್ವಾಮಿಗೌಡ, ಸುದರ್ಶನ್, ಪಿಡಿಓ ಪುರುಷೋತ್ತಮ, ಕಾರ್ಯದರ್ಶಿ ಜಯರಾಮು, ಸಿಬ್ಬಂದಿ ವರ್ಗದವರಾದ ನೇತ್ರಾವತಿ, ಶೋಭಾ, ಮಧುಸೂದನ್, ಗ್ರಾಮದ ಮುಖಂಡರಾದ ಪ್ರಭಾಕರ್, ಹೇಮಂತ್‌ಕುಮಾರ್, ಸುರೇಂದ್ರ, ಚಂದ್ರಶೇಖರ್ ಹಾಗೂ ಸ್ತ್ರೀಶಕ್ತಿ ಸಂಘದ ಮಹಿಳೆಯರು ಸೇರಿದಂತೆ ಹಲವರು ಇದ್ದರು.

# ಜನಸಂಪರ್ಕ ಸಭೆಯಿಂದ ಗ್ರಾಮಗಳ ಅಭಿವೃದ್ಧಿ



ಭಾರತೀನಗರ, ಅ.30– ಗ್ರಾಮದ ಸರ್ವೋತೋಮುಖ ಅಭಿವೃದ್ಧಿಗೆ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದೆ ಎಂದು ಶಾಸಕ ಡಿ.ಸಿ. ತಮ್ಮಣ್ಣ ತಿಳಿಸಿದರು.

ಇಲ್ಲಿಗೆ ಸಮೀಪದ ಕ್ಯಾತಘಟ್ಟ ಗ್ರಾಮದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಗ್ರಾಮಸ್ಥರಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಕಳೆದ 23 ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದೇನೆ. ಗ್ರಾಮಗಳಲ್ಲಿ ಸಮಸ್ಯೆಗಳನ್ನು ಆಲಿಸಲು ಕ್ಷೇತದಾದ್ಯಂತ ಪ್ರವಾಸ ಕೈಗೊಂಡಿದ್ದೇನೆ. ಜನರು ಇದಕ್ಕೆ ಸಹಕರಿಸುತ್ತಿರುವುದು ನನಗೆ ಸಂತಸ ತಂದಿದೆ ಎಂದರು.

ದೊಡ್ಡದೊಡ್ಡ ಕಾಮಗಾರಿಗಳನ್ನು ಕ್ಷೇತ್ರದಾದ್ಯಂತ ಶೇ.90ರಷ್ಟು ಮುಗಿಸಿದ್ದೇನೆ. ಇನ್ನುಳಿದ ಕಾಮಗಾರಿಗಳಿಗೆ ಮುಂದಿನ ದಿನಗಳಲ್ಲಿ ನಿಮ್ಮ ಆಶೀರ್ವಾದ ಇದ್ದರೆ ಅವುಗಳನ್ನು ಕೂಡ ಪೂರ್ಣಗೊಳಿಸುತ್ತೇನೆಂದು ಭರವಸೆ ನೀಡಿದರು.

ಸಣ್ಣ–ಪುಟ್ಟ ಕಾಮಗಾರಿಗಳನ್ನು ಗ್ರಾಪಂ ಮಟ್ಟದಲ್ಲಿ ಮಾಡಿಸಿಕೊಳ್ಳಬೇಕು. ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನಯಡಿ ಗ್ರಾಪಂ ಸದಸ್ಯರುಗಳು ಅಭಿವೃದ್ಧಿ ಮಾಡಲು ಮುಂದಾಗಬೇಕು. ಇದಕ್ಕೆ ನನ್ನ ಸಹಕಾರ ಇದ್ದೇ ಇರುತ್ತದೆ. ಯಾವುದೇ ಕಾರಣಕ್ಕೂ ಮತದಾರರು ಗೊಂದಲಕ್ಕೀಡಾಗಬಾರದೆಂದು ಮನವಿ ಮಾಡಿದರು.

ಈ ಜನಸಂಪರ್ಕ ಸಭೆಯಲ್ಲಿ ಸುತ್ತ–ಮುತ್ತಲ ಗ್ರಾಮಗಳ ಸಮಸ್ಯೆಗಳ ಬಗ್ಗೆ ಗ್ರಾಮಸ್ಥರು ಅರ್ಜಿ ಸಲ್ಲಿಸಿದರು.

ಹುಣ್ಣನದೊಡ್ಡಿ, ಛತ್ರದಹೊಸಹಳ್ಳಿ, ಚಿಕ್ಕರಸಿನಕೆರೆ, ಗುರುದೇವರಹಳ್ಳಿ, ಬೊಮ್ಮನದೊಡ್ಡಿ, ಗ್ರಾಮಗಳಿಗೆ ಆಗಮಿಸಿದ ಶಾಸಕರನ್ನು ಪಟಾಕಿ, ತಮಟೆ ನಗಾರಿಗಳೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಿ, ಅಭಿನಂದಿಸಿದ್ದು ವಿಶೇಷವಾಗಿತ್ತು.

ಇದೇ ವೇಳೆ ಕ್ಯಾತಘಟ್ಟ ಗ್ರಾಮದ ಮುಖಂಡರಾದ ತಿಮ್ಮರಾಜು, ಗಿರೀಶ್, ಸಿದ್ದರಾಜು, ಚಂದ್ರು, ಶಿವನಂಜಪ್ಪ, ಬೊಮ್ಮನದೊಡ್ಡಿ ಬಸವರಾಜು, ರವೀಂದ್ರ ಶಿವಮಾದು, ಹುಣ್ಣನದೊಡ್ಡಿ ಪಟೇಲ್ ಮಂಜು, ಕರಿಯಪ್ಪ, ಚಿಕ್ಕರಸಿನಕೆರೆ ಮುತ್ತುರಾಜು, ಮೂರ್ತಿ, ಬೊಮ್ಮಲಿಂಗು, ಗುರುದೇವರಹಳ್ಳಿ ಅರವಿಂದು, ಸಿದ್ದರಾಜು ಗ್ರಾಮದ ಯಜಮಾನರು ಸೇರಿದಂತೆ ಇತರರಿದ್ದರು.



ಚಿನಕುರಳಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಮಾಲೀಕತ್ವದ ಎಸ್‌ಟಿಜಿ ಗ್ರೂಪ್ ವತಿಯಿಂದ ಕ್ಷಯ ರೋಗಿಗಳಿಗೆ ನೀಡಲಾಗುತ್ತಿರುವ ಆಹಾರ ಕಿಟ್ ಅನ್ನು ಗ್ರಾಪಂ ಅಧ್ಯಕ್ಷ ಪಾಪಣ್ಣ(ಪುಟ್ಟಸ್ವಾಮಿ) ವಿತರಣೆ ಮಾಡಿದರು. ಸಮಾರಂಭದಲ್ಲಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಗ್ರಾಪಂ ಸದಸ್ಯ ಶ್ರೀನಿವಾಸ್, ಮಾಜಿ ಸದಸ್ಯ ಸಿ.ಡಿ. ಮಹದೇವು, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಆಶಾಲತಾ, ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಸಂದೀಪ್, ವೈದ್ಯರಾದ ಡಾ.ಮುರಳಿ, ಡಾ.ಪ್ರಮೀಳ, ಡಾ.ಶ್ವೇತ, ಡಾ.ಮಂಜುಶ್ರೀ ಹಾಜರಿದ್ದರು.

ಒಂದನೇ ಪುಟದಿಂದ

## ಮಹಿಳೆಯರ ವರ್ಣರಂಜಿತ ಸ್ಯಾರಿ ವಾಕಥಾನ್




ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ಮೈಸೂರಲ್ಲಿ ಭಾನುವಾರ ಆಯೋಜಿಸಿದ್ದ ಸ್ಯಾರಿ ವಾಕಥಾನ್‌ಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು.

ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ತಲುಪಿತು. 3.5 ಕಿ.ಮೀ. ವಾಕಥಾನ್‌ನಲ್ಲಿ ಪಾಲ್ಗೊಂಡು ಗಮನ ಸೆಳೆದರು.

**ಆರೋಗ್ಯ ತಪಾಸಣೆ:** ಕಾರ್ಯಕ್ರಮದ ಅಂಗವಾಗಿ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು. ಈ ವೇಳೆ 50ಕ್ಕೂ ಹೆಚ್ಚು ಮಹಿಳೆಯರು ತಪಾಸಣೆಗೆ ಒಳಗಾದರು. ಕ್ಯಾನ್ಸರ್ ರೋಗಿ ಗಳಿಗಾಗಿ ಕೂದಲು ದಾನ ಮಾಡುವ ಶಿಬಿರವನ್ನು ಆಯೋಜಿಸಲಾಗಿತ್ತು. 30ಕ್ಕೂ ಹೆಚ್ಚು ಮಹಿಳೆಯರು ಕೂದಲು ದಾನ ಮಾಡಿದರು. 8 ಇಂಚಿಗಿಂತ ಉದ್ದದ ಕೂದಲನ್ನು ದಾನ ಮಾಡಬಹುದಾಗಿತ್ತು. ಈ ಹಿನ್ನೆಲೆ ಯಲ್ಲಿ 30ಕ್ಕೂ ಹೆಚ್ಚು ಮಂದಿ ಮಹಿಳೆ ಯರು ಕೂದಲು ದಾನ ಮಾಡಿದರು.

ಕಾರ್ಯಕ್ರಮದಲ್ಲಿ ವಿ–ಸಖಿ ಸಂಸ್ಥೆಯ ಅಧ್ಯಕ್ಷೆ ಭಾನು ಆನಂದ್, ಸಹ ಸಂಸ್ಥಾಪಕಿ ರಾಜಲಕ್ಷ್ಮಿ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಡಾ.ಮೇಖಲ ಶ್ವೇತಾದ್ರಿ, ಡಾ.ವಿದ್ಯಾ, ನಿರ್ಮಲಾ ಮಾದಪ್ಪ, ಡಾ.ಮೈಥಿಲಿ, ರೋಟರಿ ಮೈಸೂರು ಈಸ್ಟ್ ಸಂಸ್ಥೆಯ ಅಧ್ಯಕ್ಷೆ ರೊ.ಎಲಿಜಬೆತ್ ಶಕುಂತಲಾ, ಕಾರ್ಯದರ್ಶಿ ಲತಾ ಕುಮಾರ್ ಇನ್ನಿತರರು ಇದ್ದರು.

## ಕಾಳಜಿ ಪ್ರಶಂಸಿಸಿದ ಪ್ರಧಾನಿ ಮೋದಿ

ಬೆಂಗಳೂರಿನ ಜನರು ಈಗ ಈ ಕಾಡಿನ ಸೌಂದರ್ಯವನ್ನು ಸವಿಯುತ್ತಿದ್ದಾರೆ ಎಂದರು.

ಬೆಂಗಳೂರಿನ ಸಹಕಾರ ನಗರದಲ್ಲಿ ಕನ್ನಡ ಭಾಷೆಗೆ ಉತ್ತೇಜನ ನೀಡುವ ಬಸ್ ತಂಗುದಾಣ ನಿರ್ಮಿಸಿದ್ದಕ್ಕಾಗಿ ಸುರೇಶ್ ಕುಮಾರ್ ಅವರು ಪ್ರಶಂಸೆಗೆ ಪಾತ್ರರಾಗಿದ್ದಾರೆ. ಪರಿಸರಶಾಸ್ತ್ರದ ಕಡೆಗೆ ಅವರ ಕೆಲಸವಲ್ಲದೆ, ಸುರೇಶ್ ಕುಮಾರ್ ಅವರು ಬಸ್ ತಂಗುದಾಣವನ್ನು ನಿರ್ಮಿಸಿದರು ಮತ್ತು ಕನ್ನಡ ಮತ್ತು ರಾಜ್ಯದ ಸಂಸ್ಕೃತಿಯನ್ನು ಉತ್ತೇಜಿ ಸಲು ಜನರಿಗೆ ಕನ್ನಡ ಭಾಷೆ ಬರೆದ ಹಿತ್ತಾಳೆ ಫಲಕಗಳನ್ನು ಉಡುಗೊರೆಯಾಗಿ ನೀಡಿದರು. ಅದೇ ಸಮಯದಲ್ಲಿ ಪರಿಸರ ಮತ್ತು ಸಂಸ್ಕೃತಿಯ ಕಡೆಗೆ ಕೆಲಸ ಮಾಡುವುದು ಎಷ್ಟು ಉತ್ತಮವಾಗಿದೆ ಎಂದು ಊಹಿಸಿ ಅವರು ಇಡೀ ದೇಶಕ್ಕೆ ಪಾಠ ಕಲಿಸಿದ್ದಾರೆ ಮತ್ತು ಅವರು ಈ ದೇಶದ ಯುವಕರಿಗೆ ಸ್ಫೂರ್ತಿಯಾಗಬೇಕೆಂದು ತಿಳಿಸಿದರು.

ಕರ್ನಾಟಕ, ತಮಿಳುನಾಡು ಮತ್ತು ತ್ರಿಪುರಾದಲ್ಲಿ ಸ್ಫೂರ್ತಿದಾಯಕ ಪ್ರಯತ್ನಗಳು ಪರಿಸರದೊಂದಿಗೆ ಭಾರತದ ನಿಕಟ ಬಾಂಧವ್ಯವನ್ನು ವಿವರಿಸುತ್ತದೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

## ಸೇತುವೆ ಕುಸಿದು 90 ಮಂದಿ ಸಾವು

ಪ್ರಧಾನಿಯವರು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರೊಂದಿಗೆ ಮಾತನಾಡಿದ್ದು, ಪರಿಸ್ಥಿತಿಯನ್ನು ಅವಲೋಕಿಸುವಂತೆ ಹೇಳಿದರು. ಅಪಘಾತದ ಸುದ್ದಿ ಬರುತ್ತಿದ್ದಂತೆ ಗುಜರಾತ್ ಗೃಹ ಸಚಿವ ಹರ್ಷ ಸಂಘವಿ ಮೊರ್ಬಿಗೆ ಭೇಟಿ ನೀಡಿದ್ದರು.

ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಕ್ಕೆ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಮತ್ತು ಗಾಯಗೊಂಡವರಿಗೆ ತಲಾ 50,000 ರೂ. ಪರಿಹಾರ ಘೋಷಿಸಲಾಗಿದೆ. ಮೃತರ ಕುಟುಂಬಕ್ಕೆ 4 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 50 ಸಾವಿರ ರೂ. ಪರಿಹಾರವನ್ನು ರಾಜ್ಯ ಸರ್ಕಾರ ನೀಡಲಿದೆ.

ಮೊರಬಿ ಪಟ್ಟಣಕ್ಕೆ ಭೇಟಿ ನೀಡುವ ಪ್ರವಾಸಿಗರ ಪ್ರಮುಖ ಆಕರ್ಷಣೆಯ ಕೇಂದ್ರವಾಗಿರುವ ತೂಗು ಸೇತುವೆ ಇದಾಗಿದೆ. ಸೇತುವೆ ನವೀಕರಣಕ್ಕೆ ಖಾಸಗಿ ಒಡೆತನದ ಒರೆವಾ ಕಂಪನಿಗೆ ನೀಡಲಾಗಿತ್ತು. ಶಿಥಿಲಗೊಂಡಿದ್ದ ಹಿನ್ನೆಲೆ ನವೀಕರಣಕ್ಕೆ ನೀಡಲಾಗಿತ್ತು. 6 ತಿಂಗಳ ಹಿಂದೆ ಬಂದ್ ಮಾಡಲಾಗಿತ್ತು. 2 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿತ್ತು. 2001 ರಲ್ಲಿ ಗುಜರಾತ್‌ನಲ್ಲಿ ಸಂಭವಿಸಿದ್ದ ಭೂಕಂಪದಲ್ಲಿ ಮೊದಲ ಬಾರಿಗೆ ಸೇತುವೆಯು ಹಾನಿಗೊಳಗಾಗಿತ್ತು. 140 ವರ್ಷದ ಹಳೆಯ ತೂಗು ಸೇತುವೆ ಇದಾಗಿತ್ತು.

# ಇಂದಿನಿಂದ ಕಾಂಗ್ರೆಸ್ ಜನಾಶೀರ್ವಾದ ಯಾತ್ರೆ



ಕೆ.ಆರ್.ನಗರ, ಅ.30– ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಾವುಟ ಹಾರಿಸಲು ಅ.31ರಿಂದ ಜನಾಶೀರ್ವಾದ ಯಾತ್ರೆ ಆರಂಭವಾಗಲಿದ್ದು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಹಕಾರ ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಕೋರಿದರು.

ಪಟ್ಟಣದ ಅಖಿಲ ನಾಮಧಾರಿಗೌಡ ಸಮುದಾಯ ಭವನದಲ್ಲಿ ನಡೆದ ಜನಾರ್ಶೀವಾ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 75 ದಿನಗಳ ಕಾಲ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳಲ್ಲಿ ಬರುವ 200 ಹಳ್ಳಿಗಳಲ್ಲಿ ಪಾದಯಾತ್ರೆ ನಡೆಸಿ 48 ಸಾವಿರ ಕುಟುಂಬಗಳನ್ನು ಭೇಟಿ ಮಾಡಿ ಜನರ ಆಶೀರ್ವಾದ ಪಡೆಯ ಲಾಗುತ್ತದೆ ಎಂದರು.

ಶಾಸಕ ಸಾ.ರಾ.ಮಹೇಶ್ ಅವರ ಸರ್ವಾಧಿಕಾರಿ ಆಡಳಿತ ಮತ್ತು ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯ ಮಾಡುತ್ತಿರು ವುದರ ಜತೆಗೆ ಗ್ರಾಪಂ ಆಡಳಿತದಲ್ಲೂ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಜನರಿಗೆ ಪಾದಯಾತ್ರೆ ಸಂದರ್ಭ ಮನವರಿಕೆ ಮಾಡಿಕೊಡಲಾಗುತ್ತದೆ ಎಂದರು.

3 ಬಾರಿ ಶಾಸಕರಾಗಿ ಮತ್ತು 14 ತಿಂಗಳು ಸಚಿವರಾಗಿ ಆಡಳಿತ ನಡೆಸಿರುವ ಶಾಸಕರು ರಾಜಕೀಯದಲ್ಲಿ ಎಷ್ಟು ಹಣ ಗಳಿಸಿದ್ದಾರೆ ಎಂದು ಪ್ರಶ್ನಿಸಿದ ಡಿ.ರವಿಶಂಕರ್ ನಾನು 2 ಬಾರಿ ಜಿಪಂ ಸದಸ್ಯನಾಗಿ ಹಾಗೂ ನಮ್ಮ ಕುಟುಂಬ ದಶಕಗಳ ಕಾಲ ಕ್ಷೇತ್ರದಲ್ಲಿ ರಾಜಕಾರಣ ಮಾಡುತ್ತಿದ್ದು, ಸಾರ್ವಜನಿಕ ಹಣ ಪಡೆದಿರುವ ಬಗ್ಗೆ ಶಾಸಕರು ಸಾಬೀತು ಪಡಿಸಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ. ಪುಟ್ಟಸಿದ್ದಶೆಟ್ಟಿ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಸಿ.ಪಿ.ರಮೇಶ್, ಶ್ರೀನಿವಾಸ್, ಎಸ್.ಪಿ.ತಮ್ಮಯ್ಯ, ರವಿ, ಜಿಪಂ ಮಾಜಿ ಸದಸ್ಯ ರಾಜಯ್ಯ, ಗ್ರಾಪಂ ಸದಸ್ಯ ಉಮೇಶ್ ಅವರು ಮಾತನಾಡಿ, ಸರ್ಕಾರದ ಸವಲತ್ತು ಪಡೆಯಲು ತಾಪಂ ಮತ್ತು ತಾಲೂಕು ಕಚೇರಿಯಲ್ಲಿ ಕಾಯುವುದನ್ನು ತಪ್ಪಿಸಲು 2023ರ ಚುನಾವಣೆ ಯಲ್ಲಿ ಡಿ.ರವಿಶಂಕರ್ ಅವರನ್ನು ಗೆಲ್ಲಿಸಲು ಎಲ್ಲರೂ ಪಣತೊಡಬೇಕು ಎಂದರು.

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯ ಕುಮಾರ್ ಮಾತನಾಡಿ, ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಅವರು ಹಮ್ಮಿಕೊಂಡಿರುವ ಜನಾಶೀರ್ವಾದ ಯಾತ್ರೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಎಲ್ಲಾ ಮುಖಂಡರು ಒಪ್ಪಿಗೆ ಸೂಚಿಸಿದ್ದಾರೆ. ಯಾತ್ರೆ ಯಶಸ್ವಿಗೊಳ್ಳಲು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಹಕಾರ ನೀಡಬೇಕು ಎಂದು ಕೋರಿ ವೈಯಕ್ತಿಕವಾಗಿ 50 ಸಾವಿರ ರೂ. ನೀಡಿದರು.

ಪುರಸಭಾಧ್ಯಕ್ಷ ಪ್ರಕಾಶ್, ಮಾಜಿ ಅಧ್ಯಕ್ಷೆ ಗೀತಾ, ಕೆ.ಜಿ.ಸುಬ್ರಹ್ಮಣ್ಯ, ನರಸಿಂಹರಾಜು, ಪುರಸಭೆ ಸದಸ್ಯರಾದ ನಟರಾಜು, ಶಿವಕುಮಾರ್, ಸಿದ್ದಿಖ್, ಶಂಕರ್, ತಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ವೀಣಾ, ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹ ದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ನಗರಾಧ್ಯಕ್ಷ ಎಂ.ಜೆ.ರಮೇಶ್, ಮುಖಂಡರಾದ ಎಲ್.ಪಿ.ರವಿಕುಮಾರ್, ತನ್ವೀರ್, ಹೆಚ್.ಪಿ.ಪ್ರಶಾಂತ್, ಹೆಚ್. ಹೆಚ್.ನಾಗೇಂದ್ರ, ನಾಗರಾಜು, ವೈ.ಎಸ್.ಜಯಂತ್, ರಾಮಚಾರಿ, ನಂದೀಶ್, ಜಲ್ಲಿಮಂಜು, ಚೆಲುವರಾಜು, ಕೆ.ಎಲ್.ಕುಮಾರ್, ಗಾರೆರವಿ ಮತ್ತಿತರರಿದ್ದರು.

## ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಹೆಚ್‌ಪಿಎಂ ಚಾಲನೆ



ಹುಣಸೂರು, ಅ.30– ತಾಲೂಕಿನ ಮೂಡಲಕೊಪ್ಪಲು ಗ್ರಾಮದಲ್ಲಿ 22 ಲಕ್ಷ ರೂ. ವೆಚ್ಚದಲ್ಲಿ ಚರಂಡಿ ಹಾಗೂ ರಸ್ತೆ, ರಾಜ್ಯ ಹೆದ್ದಾರಿ 275 ರಿಂದ ಮಾದಹಳ್ಳಿ ಮಠದವರೆಗೆ 5 ಕೋಟಿ ರೂ. ವೆಚ್ಚದಲ್ಲಿ 3.2 ಕಿಮೀ ಡಾಂಬರೀಕರಣ ಕಾಮಗಾರಿಗೆ ಶಾಸಕ ಹೆಚ್.ಪಿ ಮಂಜುನಾಥ್ ಚಾಲನೆ ನೀಡಿದರು. ಈ ವೇಳೆ ಸಾಂಬ ಸದಾಶಿವ ಸ್ವಾಮೀಜಿ, ಗ್ರಾಪಂ ಅಧ್ಯಕ್ಷೆ ಬೇಬಿ, ಜಿಪಂ ಮಾಜಿ ಸದಸ್ಯ ಸೋಮಶೇಖರ್, ಗ್ರಾಪಂ ಸದಸ್ಯರಾದ ನಿಂಗೇಗೌಡ, ಬಸವರಾಜು, ಸವಿತಾ ಸಮಾಜದ ಮುಖಂಡರಾದ ಲೋಕೇಶ್ ನಾಯಕ್, ಅಯ್ಯಣ್ಣ, ಮಹೇಶ್, ರಾಜೇಗೌಡ, ಸಣ್ಣಸ್ವಾಮಿ, ಲೋಕೇಶ್, ಜಯರಾಮೇಗೌಡ ಹಾಗೂ ಗ್ರಾಮದ ಮುಖಂಡರು ಇದ್ದರು.

## ನಾಳೆ ಕನ್ನಡ ರಾಜ್ಯೋತ್ಸವ ಆಚರಣೆ

ಮಡಿಕೇರಿ, ಅ.30– ಜಿಲ್ಲಾಡಳಿತದಿಂದ 67ನೇ ಕನ್ನಡ ರಾಜ್ಯೋತ್ಸವ ನ.1ರಂದು ಬೆಳಗ್ಗೆ 9 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿಗಳಾದ ಎಂ.ಪಿ.ಸುಜಾಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಆಯನೂರು ಮಂಜುನಾಥ್, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ನಗರಸಭಾಧ್ಯಕ್ಷೆ ಎನ್.ಪಿ.ಅನಿತಾ ಪೂವಯ್ಯ, ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ, ಜಿ.ಪಂ. ಸಿಇಓ ಡಾ.ಎಸ್.ಆಕಾಶ್ ಇತರರು ಪಾಲ್ಗೊಳ್ಳಲಿದ್ದಾರೆ.

# ಗಮನ ಸೆಳೆದ ಕೋಟಿ ಕಂಠ ಗಾಯನ ಸ್ಪರ್ಧೆ




ತಿ.ನರಸೀಪುರ, ಅ.30– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಶ್ರಯದಲ್ಲಿ 67ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಆಯೋಜಿಸಿದ್ದ 'ಕೋಟಿ ಕಂಠ ಗಾಯನ ಸ್ಪರ್ಧೆ' ಗಮನ ಸೆಳೆಯಿತು.

ಕನ್ನಡ ಭಾಷೆ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಮಾತಾಡ್ ಮಾತಾಡ್ ಕನ್ನಡ ಎಂಬ ಘೋಷ ವಾಕ್ಯದಡಿ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ರಾಜ್ಯಾದ್ಯಂತ ಆಯೋಜಿಸಿದ್ದ ಕೋಟಿ ಕಂಠ ಗಾಯನ ಕಾರ್ಯಕ್ರಮ ತಾಲೂಕಿನ ಮೂಗೂರು, ಸೋಮನಾಥಪುರ ಹಾಗೂ ತಿ.ನರಸೀಪುರ ಪಟ್ಟಣದಲ್ಲಿ ಯಶಸ್ವಿಯಾಗಿ ಜರುಗಿತು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದ ಸೋಪಾನ ಕಟ್ಟೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಕಾರ್ಯಕ್ರಮದಲ್ಲಿ ಪಟ್ಟಣದ ವಿವಿಧ ಶಾಲೆಯ ಸಾವಿರಾರು ಮಕ್ಕಳು ಪಾಲ್ಗೊಂಡು ಕನ್ನಡದ ಬಗ್ಗೆ ಜಾಗೃತಿ ಮೂಡಿಸುವ ಹಾಡುಗಳನ್ನು ಹಾಡಿದರು. ಜಯ ಭಾರತ ಜನನಿಯ ತನುಜಾತೆ ಸೇರಿದಂತೆ ಡಾ. ಪುನೀತ್ ರಾಜ್‌ಕುಮಾರ್ ಅಭಿನಯದ ರಾಜಕುಮಾರ ಚಿತ್ರದ ಗೊಂಬೆ ಹೇಳುತೈತೆ ಹಾಡನ್ನು ಹಾಡುವ ಮೂಲಕ ಗಾಯನ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಕನ್ನಡ ಮತ್ತು ಸಂಸ್ಕೃತ ಇಲಾಖೆ ಅಧಿಕಾರಿಗಳು ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ನನ್ನವ್ವ ಕಲಾ ತಂಡದ ವೈ.ಜಿ.ಮಹದೇವ್ 'ಕನ್ನಡ ಭಾಷೆಯಲ್ಲಯೇ ಮಾತನಾಡುತ್ತೇನೆ. ಕನ್ನಡವನ್ನು ಇತರರಿಗೆ ಕಲಿಸುತ್ತೇನೆ' ಎಂಬ ಬಗ್ಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಪಟ್ಟಣದ ಸೆಂಟ್ ಮೇರಿಸ್, ವಾಸವಿ ಲಯನ್ಸ್, ಸೆಂಟ್ ನೋಬರ್ಟ್, ಲಿಟ್ಲ್ ಫ್ಲವರ್ ಶಾಲೆ ಸೇರಿದಂತೆ ಸರ್ಕಾರಿ ಶಾಲೆ ಮಕ್ಕಳು ಭಾಗ ವಹಿಸಿದ್ದರು. ಈ ವೇಳೆ ತಹಸೀಲ್ದಾರ್ ಸಿ.ಜೆ.ಗೀತಾ, ತಾಪಂ ಇಓ ಕೃಷ್ಣ ಕುಮಾರ್, ಬಿಇಓ ಮರಿಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಬಸವರಾಜು, ಸದಸ್ಯರಾದ ಎಸ್.ಕೆ. ಕಿರಣ್, ಕೆ.ಗಣೇಶ್, ಲೋಕೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಡಿ.ಮಾದಪ್ಪ, ಕಾರ್ಯದರ್ಶಿ ಪುಟ್ಟಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಶಿಕ್ಷಕರು ಭಾಗವಹಿಸಿದ್ದರು.

## ಪೋಕ್ಸೋ ಆರೋಪಿಗೆ ಠಾಣೆ ಜಾಮೀನು: ಖಂಡನೆ



ಶ್ರೀರಂಗಪಟ್ಟಣ, ಅ.30– ಬಾಲಕಿಯೊಬ್ಬಳಿಗೆ ತನ್ನ ಗುಪ್ತಾಂಗ ತೋರಿಸಿ ಕಿರುಕುಳ ನೀಡುತ್ತಿದ್ದ ಪ್ರಕರಣದಲ್ಲಿ ಆರೋಪಿಗೆ ಪೊಲೀಸರು ಠಾಣೆಯಲ್ಲಿಯೇ ಜಾಮೀನು ನೀಡಿರುವುದನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಖಂಡಿಸಿ, ಆರೋಪಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಅವರಿಗೆ ದೂರವಾಣಿ ಮೂಲಕ ಮಾತನಾಡಿ, ಈ ಘಟನೆ ಮಾನವ ತಲೆ ತಗ್ಗಿಸುವ ವಿಚಾರವಾಗಿದೆ. ಕಳೆದ 15 ದಿನಗಳ ಹಿಂದೆ ಮಳ್ಳವಳ್ಳಿಯಲ್ಲೂ ಇಂತಹ ಘಟನೆ ನಡೆದಿತ್ತು. ಆರೋಪಿಗಳಿಗೆ ಶಿಕ್ಷೆ ಕಡಿಮೆಯಾದರೂ ಸಮಾಜದಲ್ಲಿ ಇಂತಹ ಪ್ರಕರಣಗಳು ತಲೆ ಎತ್ತುತ್ತಿರುತ್ತವೆ. ಆರೋಪಿಗೆ ಗರಿಷ್ಠ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಆರೋಪಿಗೆ ಠಾಣೆಯಲ್ಲಿ ಜಾಮೀನು ನೀಡಿರುವುದರಿಂದ ದುಷ್ಕರ್ಮಿಗಳು ಭಯವಿಲ್ಲದೆ ಮುಂದೆಯೂ ಇಂತಹ ಘಟನೆಗಳು ನಡೆಯುವಂತಾಗುತ್ತದೆ. ಆದ್ದರಿಂದ ಆತನಿಗೆ ಗರಿಷ್ಠ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

# ಕೊಡಗಿನ ಪ್ರಗತಿಪರ ಕೃಷಿಕ ಸೋಮೇಂಗಡ ಗಣೇಶ್ ತಿಮ್ಮಯ್ಯಗೆ ರಾಜ್ಯೋತ್ಸವ ಪ್ರಶಸ್ತಿ

ಮಡಿಕೇರಿ,ಅ.30– ರಾಜ್ಯ ಸರಕಾರ ಕೊಡಮಾಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಕೊಡಗಿನ ಪ್ರಗತಿಪರ ಕೃಷಿಕ ಸೋಮೇಂಗಡ ಗಣೇಶ್ ತಿಮ್ಮಯ್ಯ ಅವರು ಬಾಜನರಾಗಿದ್ದಾರೆ. ದಕ್ಷಿಣ ಕೊಡಗಿನ ನಲ್ಲೂರು ಗ್ರಾಮದವರಾದ ಗಣೇಶ್ ತಿಮ್ಮಯ್ಯ ಪ್ರಗತಿ ಪರ ಕೃಷಿಕರಾಗಿದ್ದು, ಈ ಹಿಂದೆ ಸಮಗ್ರ ಕೃಷಿ ಪದ್ದತಿ ಅಳವಡಿಕೆಗಾಗಿ ಕೇಂದ್ರ ಸರ್ಕಾರದಿಂದ ಕೊಡಮಾಡುವ 'ಬಾಬು ಜಗಜೀವನ್ ರಾಂ ಕೃಷಿ ಸಮ್ಮಾನ್' ಪ್ರಶಸ್ತಿಗೂ ಬಾಜನರಾಗಿದ್ದರು. ಮಾತ್ರವಲ್ಲದೇ, ಐಸಿಆರ್‌ಐಹೆಚ್‌ಆರ್‌ನಿಂದಲೂ ಅತ್ಯುತ್ತಮ ಕೃಷಿಕ ಪ್ರಶಸ್ತಿಯೂ ಲಭಿಸಿದೆ.



"ರಾಜ್ಯೋತ್ಸವ ಪ್ರಶಸ್ತಿಗೆ ಕೃಷಿಯನ್ನು ಪರಿಗಣಿಸಿರುವುದು ಸಂತೋಷ ತಂದಿದೆ. ಪ್ರಶಸ್ತಿ ಲಭಿಸಿದ್ದು ಸಮಾಧಾನವಾಗಿದೆ. ಇದರಿಂದ ಮತ್ತಷ್ಟು ಕೆಲಸ ಮಾಡಲು ಸ್ಫೂರ್ತಿ ಬಂದಿದೆ. ಕಳೆದ 30 ವರ್ಷಗಳಿಂದ ಕೃಷಿಯನ್ನು ಎಲ್ಲರಿಗೂ ತಲುಪಿಸುವ ಕೆಲಸ ಮಾಡುತ್ತಿದ್ದು, ಕೃಷಿಯ ಮಹತ್ವದ ಬಗ್ಗೆ ಎಲ್ಲಾ ಕಡೆ ಜಾಗೃತಿ ಮೂಡಿಸುತ್ತಿದ್ದೇನೆ.

–ಸೋಮೇಂಗಡ ಗಣೇಶ್ ತಿಮ್ಮಯ್ಯ

ಕಳೆದ 30 ವರ್ಷಗಳಿಂದ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸೋಮೇಂಗಡ ಗಣೇಶ್ ತಿಮ್ಮಯ್ಯ, ಇದಕ್ಕೂ ಮುನ್ನ ಭಾರತೀಯ ಸೇನೆಯಲ್ಲೂ ಸೇವೆ ಸಲ್ಲಿಸಿದ್ದಾರೆ. 15 ಎಕರೆ ಭೂಮಿ ಹೊಂದಿರುವ ಗಣೇಶ್ ತಿಮ್ಮಯ್ಯ ಭತ್ತದ ಗದ್ದೆಯಲ್ಲಿ 60ಕ್ಕೂ ಹೆಚ್ಚು ತಳಿಯ ಭತ್ತವನ್ನು ಬೆಳೆಯುವ ಮೂಲಕ ವಿನೂತನ ಪ್ರಯೋಗ ನಡೆಸಿದ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಕೃಷಿಯೊಂದಿಗೆ ಉಪ ಕಸುಬುಗಳಾಗಿ ಜೇನು, ಕೋಳಿ, ಮೀನು ಸಾಕಾಣಿಕೆ ಮಾತ್ರವಲ್ಲದೇ, ಕಾಫಿ, ಶುಂಠಿ, ಮಾವು, ಹಲಸು, ಕಿತ್ತಳೆ, ರಾಂಬುಟನ್ ಮತ್ತಿತ್ತರ ಹಣ್ಣಿನ ಬೆಳೆಗಳನ್ನು ಬೆಳೆದಿದ್ದಾರೆ. ಅಷ್ಟು ಮಾತ್ರವಲ್ಲದೇ, ಭೂಮಿಯನ್ನು ಪಾಳು ಬಿಟ್ಟು ಕೃಷಿಯಿಂದ ವಿಮುಖರಾಗಿರುವ ರೈತರಲ್ಲಿ ಕೃಷಿ ಚಟುವಟಿಕೆಗಳ ಕುರಿತು ಅರಿವು ಹಾಗೂ ಒಲವನ್ನು ಮೂಡಿಸುತ್ತಿದ್ದಾರೆ. ಇದೇ ಏಪ್ರಿಲ್ ತಿಂಗಳಲ್ಲಿ ಮಸ್ಸೂರಿಯಲ್ಲಿ ಐಎಎಸ್ ತರಬೇತಿ ಪಡೆಯುತ್ತಿದ್ದ ಅಧಿಕಾರಿಗಳಿಗೆ ಗಣೇಶ್ ತಿಮ್ಮಯ್ಯ ಸಮಗ್ರ ಕೃಷಿ ತರಬೇತಿಯನ್ನೂ ನೀಡಿದ್ದರು. ಇವರ ಈ ಕೃಷಿ ಕಾರ್ಯವನ್ನು ಪರಿಗಣಿಸಿ ಹತ್ತಾರು ಸಂಘ ಸಂಸ್ಥೆಗಳು ಗೌರವಿಸಿ ಸನ್ಮಾನಿಸಿವೆ.

### ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆ ಪಂದ್ಯಾವಳಿ

# ಕ್ವಾರ್ಟರ್ ಫೈನಲ್‌ಗೆ ಕುಲ್ಲೇಟೀರ ತಂಡ

ಗೋಣಿಕೊಪ್ಪ, ಅ.30– ಕೊಡವ ಹಾಕಿ ಅಕಾಡೆಮಿ ವತಿಯಿಂದ ಕರ್ನಾಟಕ ಪಬ್ಲಿಕ್ ಶಾಲಾ ಟರ್ಫ್ ಮೈದಾನದಲ್ಲಿ ನಡೆಯುತ್ತಿರುವ ಪಾಂಡಂಡ ಎಂ. ಕುಟ್ಟಪ್ಪ ಜ್ಞಾಪಕಾರ್ಥ ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆಯ ಭಾನುವಾರದ ಪಂದ್ಯಗಳಲ್ಲಿ ಎರಡು ಪಂದ್ಯ ಗೆದ್ದಿರುವ ಕುಲ್ಲೇಟೀರ ತಂಡವು ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆದಿದೆ. ಕೋಡಿಮಣಿಯಂಡ, ಬಿದ್ದಾಟಂಡ, ಚೌರೀರ ತಂಡಗಳು ಮುಂದಿನ ಸುತ್ತಿಗೆ ಪ್ರವೇಶ ಪಡೆದುಕೊಂಡಿದೆ

**ಫಲಿತಾಂಶ:** ಕುಲ್ಲೇಟೀರ ತಂಡವು ನೂರೇರ ಮತ್ತು ಕಳ್ಳಿಚಂಡ ತಂಡದ ವಿರುದ್ಧ ಗೆಲುವು ದಾಖಲಿಸಿತು. ಕುಲ್ಲೇಟೀರ ತಂಡವು ಕಳ್ಳಿಚಂಡ ತಂಡದ 9–7 ಗೋಲುಗಳ ಅಂತರದಲ್ಲಿ ಗೆಲುವು ಪಡೆದುಕೊಂಡಿತು. ಕುಲ್ಲೇಟೀರ ತಂಡದ ನಾಚಪ್ಪ 3 ಗೋಲು ಬಾರಿಸಿದರೆ, ಶುಭಂ, ಉತ್ತಯ್ಯ, ಮಂದಪ್ಪ ತಲಾ 2 ಗೋಲು ಹೊಡೆದರು. ಕಳ್ಳಿಚಂಡ ತಂಡದ ಗೌತಮ್ ಮತ್ತು ಸ್ವಾನ್ 3 ಗೋಲು ಬಾರಿಸಿದರೆ ಬೋಪಣ್ಣ 1 ಗೋಲು ಹೊಡೆದರು.



ಚೌರೀರ ತಂಡವು ಮಾದಂಡ ವಿರುದ್ಧ 5–4 ಗೋಲುಗಳ ಅಂತರದಲ್ಲಿ ಹೆಲುವು ಸಾಧಿಸಿತು. ಚೌರೀರ ತಂಡದಲ್ಲಿ ಪೊನ್ನಣ್ಣ ಮತ್ತು ಡಾನ್ ತಲಾ 1 ಗೋಲು ಹೊಡೆದರು, ಪ್ರತಾಪ್ 3 ಗೋಲು ಹೊಡೆದು ಮಿಂಚಿದರು.

ಬಿದ್ದಾಟಂಡ ಚಂದುರ ತಂಡವನ್ನು 4–3 ಗೋಲುಗಳ ಅಂತದಲ್ಲಿ ಸೋಲಿಸಿತು. ಬಿದ್ದಾಟಂಡ ತಂಡದ ಆಟಗಾರ ಚೆಲ್ಸಾ 4 ಗೋಲುಗಳು ಹೊಡೆದು ಮಿಂಚಿದರು. ಚಂದುರ ತಂಡದ ಪರವಾಗಿ ಶ್ಯಾಮ್ 2 ಗೋಲು, ದೇವಯ್ಯ 1 ಹೋಲು ಹೊಡೆದರು.

ಕೋಡಿಮಣಿಯಂಡ ಮೇಚಿಯಂಡ ತಂಡದ ವಿರುದ್ಧ 4–3 ಗೋಲುಗಳ ಅಂತರದಲ್ಲಿ ಗೆಲುವು ಪಡೆದುಕೊಂಡಿತ್ತು. ಕೋಡಿಮಣಿಯಂಡ ತಂಡದ ಗಗನ್ ಮತ್ತು ಉತ್ತಪ್ಪ ತಲಾ 2 ಗೋಲು ಹೊಡೆದು ಮಿಂಚಿದರು. ಮೇಚಿಯಂಡ ತಂಡದ ಕಾರ್ಯಪ್ಪ 1 ಗೋಲು ಬಾರಿಸಿದರೆ ನಾಣಯ್ಯ 2 ಗೋಲು ಹೊಡೆದರು.

ಕಳ್ಳಿಚಂಡ ತಂಡವು ಕೊಜ್ಜಂಡ ವಿರುದ್ಧ 7–3 ಗೋಲುಗಳ ಅಂತರದಲ್ಲಿ ಗೆಲುವು ಸಾಧಿಸಿತು. ಬೋಪಣ್ಣ 5 ಗೋಲು, ಸ್ವಾನ್ 2 ಗೋಲು ಹೊಡೆದರು. ಕೊಜ್ಜಂಡ ಪರ ಯಶಸ್ 3 ಗೋಲು ಹೊಡೆದರು.

# ಕೊಡವ ಮುಸ್ಲಿಂ ಅಸೋಸಿಯೇಷನ್‌ನಿಂದ ಶಿಕ್ಷಣಕ್ಕೆ ಮಹತ್ವದ ಕೊಡುಗೆ

### ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಶ್ಲಾಘನೆ



ವಿರಾಜಪೇಟೆ, ಅ.30– ಕೊಡವ ಮುಸ್ಲಿಂ ಅಸೋಸಿಯೇಷನ್ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದು ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ತಿಳಿಸಿದ್ದಾರೆ.

ಕೊಡವ ಮುಸ್ಲಿಂ ಅಸೋಸಿಯೇಷನ್ ಶಿಕ್ಷಣ ನಿಧಿ ವತಿಯಿಂದ ನಗರದ ಸೆರಿನಿಟಿ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಕೆಎಂಎ ಪ್ರತಿಭಾ ಪುರಸ್ಕಾರ–2022 ಹಾಗೂ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಕೊಡಗಿನ ಪ್ರಕೃತಿ ಸೌಂದರ್ಯದ ಪವಿತ್ರ ಪುಣ್ಯ ಭೂಮಿಯಲ್ಲಿ ಎಲ್ಲಾ ಜನಾಂಗದವರು ಶಾಂತಿ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದು, ಜನಪ್ರತಿನಿಧಿಯಾಗಿ ನಾನು ಎಲ್ಲಾ ಜನಾಂಗದವರಿಗೂ ಸ್ಪಂದಿಸುತ್ತಿದ್ದೇನೆ ಎಂದ ಅವರು, ಮುಸ್ಲಿಂ ಬಾಂಧವರು ಒಗ್ಗಟ್ಟಿನಿಂದ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹೈಕೋರ್ಟ್‌ನ ಹಿರಿಯ ವಕೀಲರಾದ ಎ.ಎಸ್.ಪೊನ್ನಣ್ಣ ಮಾತನಾಡಿ, ವಿದ್ಯಾರ್ಥಿಗಳು ಕನಸನ್ನು ಗುರಿಯಾಗಿಟ್ಟುಕೊಂಡು ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸುವ ಮೂಲಕ ಸಿಗುವಂತ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಬೇಕು. ಕೊಡವ ಮುಸ್ಲಿಂ ಅಸೋಸಿಯೇಷನ್ ಸಂಘಟನೆ ಕೊಡಗಿನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಉತ್ತಮ ಕಾರ್ಯ. ನಾವೆಲ್ಲರೂ ಸೇರಿ ಉತ್ತಮವಾದ ಕೊಡಗು ಜಿಲ್ಲೆಯನ್ನು ಕಟ್ಟಲು ಮುಂದಾಗೋಣ ಎಂದರು.

ಕೊಡವ ಮುಸ್ಲಿಂ ಅಸೋಸಿಯೇಷನ್ ಅಧ್ಯಕ್ಷ ದುದ್ದಿಯಂಡ ಹೆಚ್.ಸೂಫಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಇಂದಿನ ದಿನದಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಕಾರಣದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಾಧ್ಯವಾಗಲಿಲ್ಲವೆಂಬ ಚಿಂತೆ ಇತ್ತು. ಈ ವರ್ಷ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗಿದೆ. ಜನಾಂಗದ ಅಭಿವೃದ್ಧಿಗೆ ಹಲವು ಬೇಡಿಕೆಗಳನ್ನು ರಾಜ್ಯ ಸರ್ಕಾರದ ಮುಂದಿಟ್ಟರು ಇದುವರೆಗೂ ಗಮನ ಹರಿಸಿಲ್ಲ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮಣ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವ ಮೂಲಕ ಸಿಗುವ ಅವಕಾಶಗಳನ್ನು ಬಳಸಿಕೊಂಡು ಛಲದಿಂದ ತಮ್ಮ ಗುರಿ ಮುಟ್ಟುವುದರೊಂದಿಗೆ ಜೀವನವನ್ನು ರೂಪಿಸಿಕೊಳ್ಳುವಂತಾಗಬೇಕು ಎಂದರು. ಕಳೆದ ಕೊರೊನಾ ಸಂದರ್ಭ ಸಾರ್ವಜನಿಕರಿಗೆ ಸೇವೆ ಸಲ್ಲಿಸಿದ್ದ ಮುರ್ನಾಡುವಿನ ಹಿರಿಯ ವೈದ್ಯರಾದ ಡಾ, ಜೋಯಿಷರ ಎ.ಕುಂಞಬ್ದುಲ್ಲಾ ಅವರ ಸೇವೆ ಸ್ಮರಿಸಿ ಸನ್ಮಾನಿಸಿಸಲಾಯಿತು. ಸನ್ಮಾನ ಸ್ವೀಕರಿಸಿದ ಕುಂಞಬ್ದುಲ್ಲಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಮುಂಬೈ ಉದ್ಯಮಿ ಅಕ್ಕಳತಂಡ ಎಸ್.ಮೊಯ್ದು, ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ರಫೀಕ್ ತೊಚಮಕೇರಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕೊಡವ ಮುಸ್ಲಿಂ ಅಸೋಸಿಯೇಷನ್ ಉಪಾಧ್ಯಕ್ಷರು, ಕೋಶಾಧಿಕಾರಿ ಸೇರಿದಂತೆ ಎಲ್ಲಾ ಸದಸ್ಯರು ಹಾಜರಿದ್ದರು. ಎಂ.ಎಂ.ಇಸ್ಮಾಯಿಲ್ ಸ್ವಾಗತಿಸಿದರು. ಮುಸ್ಕಾನ್ ಸೂಫಿ ಮತ್ತು ನಿಷ್ಮಾ ಮೊಯ್ದು ನಿರೂಪಿಸಿದರೆ ಕೆ.ಎ.ಅಬ್ದುಲ್ ರಶೀದ್ ವಂದಿಸಿದರು. ವೇದಿಕೆಯಲ್ಲಿ 30 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು.

# ಬೀಟೆ ಮರ ಕಡಿದು ನಾಟಾ ಸಿದ್ಧಪಡಿಸುತ್ತಿದ್ದ ಮೂವರ ಸೆರೆ

ಮಡಿಕೇರಿ,ಅ.30– ಕಾಫಿ ತೋಟದಲ್ಲಿದ್ದ ಬೀಟೆ ಮರವನ್ನು ಕಡಿದು ನಾಟಾಗಳನ್ನಾಗಿ ಪರಿವರ್ತಿಸಿ ಅದರ ತೊಗಟೆ ತೆಗೆಯುತ್ತಿದ್ದ ಸಂದರ್ಭ ದಾಳಿ ನಡೆಸಿರುವ ತಿತಿಮತಿ ವ್ಯಾಪ್ತಿಯ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು 3 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ 5 ಲಕ್ಷ ರೂ. ಮೌಲ್ಯದ ಬೀಟೆ ಮರವನ್ನು ವಶಕ್ಕೆ ಪಡೆಯಲಾಗಿದೆ.



**ಘಟನೆ ಹಿನ್ನೆಲೆ:** ಅ.29ರಂದು ಪೊನ್ನಂಪೇಟೆ ತಾಲೂಕಿನ ಬಾಳೆಲೆ ಹೋಬಳಿಯ ಬೆಸೂರು ಗ್ರಾಮದ ಪಿ.ಡಾಲು ಎಂಬವರ ತೋಟದಲ್ಲಿದ್ದ 1 ಬೀಟೆ ಮರವನ್ನು ಕಡಿದು ಅದನ್ನು ನಾಟಾಗಳನ್ನಾಗಿ ಪರಿವರ್ತಿಸಿ ತೊಗಟೆ ತೆಗೆಯಲಾಗುತ್ತಿತ್ತು. ಈ ಮಾಹಿತಿ ಅರಿತ ಪೊನ್ನಂಪೇಟೆ ಅರಣ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಸ್ಥಳದಲ್ಲಿ 5 ಲಕ್ಷ ರೂ. ಮೌಲ್ಯದ 10 ಬೀಟೆ ನಾಟಾಗಳು, 4 ಬೀಟೆ ಬಿಲ್ಲೆಟ್ಸ್‌ಗಳು, 2 ಕೊಡಲಿಗಳು ಪತ್ತೆಯಾಗಿವೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಣಿಕೊಪ್ಪ ಕಾಳಪ್ಪ ಕಾಲೋನಿ ನಿವಾಸಿ ಸಾಜನ್, ತಿತಿಮತಿ ನೆಹರೂ ಕಾಲೋನಿಯ ಚಾತ ಹಾಗೂ ಮಡಿಕೇರಿ ತಾಲೂಕಿನ ಕಡಗದಾಳು ಗ್ರಾಮ ನಿವಾಸಿ ಬಿ.ಎಸ್.ಕೃಷ್ಣಪ್ಪ ಅವರುಗಳನ್ನು ಸ್ಥಳದಲ್ಲೇ ಬಂಧಿಸಿ, ಪೊನ್ನಂಪೇಟೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ವಿರಾಜಪೇಟೆ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಚಕ್ರಪಾಣಿ ಮಾರ್ಗದರ್ಶನದಲ್ಲಿ ತಿತಿಮತಿ ವಲಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ. ನೆಹರು, ಅರಣ್ಯಾಧಿಕಾರಿ ಬಿ.ಎಂ. ಶಂಕರ್, ಉಪ ವಲಯ ಅರಣ್ಯಾಧಿಕಾರಿ ಕೆ.ಜಿ. ದಿವಾಕರ್, ಗಣೇಶ್, ನಾಗರಾಜ್ ಶೇಟ್, ರಕ್ಷಿತ್, ಅರಣ್ಯ ರಕ್ಷಕರಾದ ಬಿ.ಎಂ. ಪೊನ್ನಪ್ಪ, ಅಂತೋಣಿ ಪ್ರಕಾಶ್, ಕೆ.ಆರ್. ಚೇತನ್ ಹಾಗೂ ಆರ್.ಆರ್.ಟಿ. ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

## ಇಂದು ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಸಂಸ್ಮರಣೆ

ಮಡಿಕೇರಿ, ಅ.30– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿ ಸಹಯೋಗದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಅವರ ಹುತಾತ್ಮ ದಿನಾಚರಣೆಯ ಪ್ರಯುಕ್ತ ಅ.31ರಂದು ಬೆಳಗ್ಗೆ 9.30 ಗಂಟೆಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿರುವ ಗುಡ್ಡಮನೆ ಅಪ್ಪಯ್ಯ ಗೌಡರ ಸ್ಮಾರಕದಲ್ಲಿ ಪುಷ್ಪ ನಮನ ಸಲ್ಲಿಸುವ ಕಾರ್ಯಕ್ರಮ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಮಂಡೇಪಂಡ ಪಿ.ಅಪ್ಪಚ್ಚು ರಂಜನ್, ಕೊಂಬಾರನ ಜಿ.ಬೋಪಯ್ಯ, ಮೈಸೂರು–ಕೊಡಗು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ, ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಡಿಸಿ ಡಾ.ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿಪಂ ಸಿಇಓ ಡಾ.ಎಸ್.ಆಕಾಶ್, ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷರಾದ ಸೂರ್ತಲೆ ಸೋಮಣ್ಣ, ಸಾಹಿತ್ಯ ಅಕಾಡೆಮಿ ಆಡಳಿತಾಧಿಕಾರಿ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಇತರರು ಪಾಲ್ಗೊಳ್ಳಲಿದ್ದಾರೆ.

# ಸಚಿವ ಸೋಮಣ್ಣ ರಾಜೀನಾಮೆಗೆ ಹೆಚ್ಚಿದ ಒತ್ತಡ

ಚಾಮರಾಜನಗರ, ಅ.30–ಕಷ್ಟ ಹೇಳಿಕೊಳ್ಳಲು ಬಂದ ಮಹಿಳೆಗೆ ಕಪಾಳಮೋಕ್ಷ ಮಾಡಿದ ಆರೋಪ ಹೊತ್ತ ಜಿಲ್ಲಾ ಉಸ್ತುವಾರಿ ಸಚಿವರೂ ಆದ ವಸತಿ ಸಚಿವ ವಿ.ಸೋಮಣ್ಣ ಅವರ ರಾಜೀನಾಮೆಗೆ ಒತ್ತಡ ಹೆಚ್ಚಾಗಿದೆ.



ವಿ.ಸೋಮಣ್ಣ

ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದಲ್ಲಿ ನಡೆದ ವಸತಿ ಯೋಜನೆಯಡಿ ನಿವೇಶನ ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ ತನ್ನ ಕಷ್ಟ ಹೇಳಿಕೊಳ್ಳಲು ಮಹಿಳೆಯೊಬ್ಬರು ವೇದಿಕೆಗೆ ಆಗಮಿಸಿದ್ದರು. ಈ ವೇಳೆ ಸಚಿವ ಸೋಮಣ್ಣ ಆ ಮಹಿಳೆಗೆ ಕಪಾಳ ಮೋಕ್ಷ ಮಾಡಿದ್ದರು. ಈ ವಿಡಿಯೋ ಹಾಗೂ ಫೋಟೋ ದೃಶ್ಯ ಮಾಧ್ಯಮ, ಪತ್ರಿಕೆಗಳು ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಬಿತ್ತರವಾಗುತ್ತಿದ್ದಂತಯೇ ಸಚಿವರ ಕಾರ್ಯವೈಖರಿ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಯಿತು. ರೈತ ಸಂಘ, ಹಸಿರು ಸೇನೆ, ಕಬ್ಬು ಬೆಳೆಗಾರರ ಸಂಘ, ದಸಂಸ ಸೇರಿದಂತೆ ಹಲವು ಸಂಘಟನೆಗಳು ಸಚಿವರ ವಿರುದ್ಧ ಪ್ರತಿಭಟನೆ ನಡೆಸಿದವು. ವಿರೋಧ ಪಕ್ಷ ಕಾಂಗ್ರೆಸ್ ನಾಯಕರೂ ಸಹ ವಿ.ಸೋಮಣ್ಣ ಅವರ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ್ದರು. ಸೋಮಣ್ಣ ಅವರು ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವೇ ಮುಖ್ಯಮಂತ್ರಿಗಳು ಸೋಮಣ್ಣ ಅವರನ್ನು ಮಂತ್ರಿ ಸ್ಥಾನದಿಂದ ವಜಾಗೊಳಿಸಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದ್ದರು.

ಅಲ್ಲದೆ ಈ ಕೆಲಸ ಆಗದಿದ್ದರೆ ಸಚಿವ ಸೋಮಣ್ಣ ಅವರನ್ನು ಜಿಲ್ಲೆಗೆ ಕಾಲಿಡಲು ಅವಕಾಶ ನೀಡುವುದಿಲ್ಲ. ಅವರು (ಸೋಮಣ್ಣ) ಪಾಲ್ಗೊಳ್ಳುವ ಎಲ್ಲಾ ಸಭೆ–ಸಮಾರಂಭಗಳಲ್ಲೂ ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು. ಮೊಟ್ಟೆ, ಟೊಮೋಟೋ ಎಸೆಯುವುದಾಗಿ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಸಚಿವ ಸೋಮಣ್ಣ ಅವರು ಒಂದು ವಾರದಿಂದ ಜಿಲ್ಲೆಗೆ ಭೇಟಿ ನೀಡಿಲ್ಲ.

"ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ರೈತರ ಸಮಸ್ಯೆಗಳನ್ನು ಬಗೆಹರಿಸಲು ತೋರಿರುವ ನಿರ್ಲಕ್ಷ್ಯ ಹಾಗೂ ಮಹಿಳೆಗೆ ಕಪಾಳ ಮೋಕ್ಷ ಮಾಡಿದ ಪ್ರಕರಣದ ಬಗ್ಗೆ ಮತ್ತಷ್ಟು ಚರ್ಚಿಸುವ ಸಲುವಾಗಿ ನಗರದಲ್ಲಿ ಸೋಮವಾರ(ಅ.31) ಸಭೆ ಕರೆಯಲಾಗಿದೆ. ರೈತ ಸಂಘ, ಹಸಿರುಸೇನೆ, ಕಬ್ಬು ಬೆಳೆಗಾರರ ಸಂಘ ಸೇರಿದಂತೆ ನಾನಾ ಸಂಘಟನೆಗಳು ಸಭೆಯಲ್ಲಿ ಭಾಗವಹಿಸಲಿವೆ. ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.

–ಹೊನ್ನೂರು ಪ್ರಕಾಶ್, ಚಾ.ನಗರ ರೈತ ಸಂಘದ ಜಿಲ್ಲಾಧ್ಯಕ್ಷ.

**ವಿಶ್ವಾಸಕ್ಕೆ ಯತ್ನ:** ಸೋಮಣ್ಣ ಮಹಿಳೆಗೆ ಕಪಾಳಮೋಕ್ಷ ಮಾಡಿದ್ದ ಅ.22ರಂದು, ಇದರ ಮಾರನೇ ದಿನ(ಅ.23) ನಗರದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಸಚಿವರು ಪಾಲ್ಗೊಳ್ಳುತ್ತಾರೆ ಎಂದು ಅವರು ಪ್ರವಾಸಪಟ್ಟಿಯಲ್ಲಿ ತಿಳಿಸಲಾಗಿತ್ತು. ಆದರೆ ಪ್ರತಿಭಟನೆಗೆ ಹೆದರಿದ ಸಚಿವರು ಕಾರ್ಯಕ್ರಮದಿಂದ ದೂರ ಉಳಿದು, ಕೊಳ್ಳೇಗಾಲಕ್ಕೆ ತೆರಳಿದ್ದರು. ಅಲ್ಲಿ ಸಂಜೆ ಮಾಧ್ಯಮಗೋಷ್ಠಿ ನಡೆಸಿದ ಸೋಮಣ್ಣ, ನನ್ನ ವರ್ತನೆಯಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುವುದಾಗಿ ತಿಳಿಸಿದ್ದರು. ಇದಾದ ಬಳಿಕ ವಾರದಿಂದ ಜಿಲ್ಲೆಗೆ ಆಗಮಿಸಿಲ್ಲ. ಹನೂರು ಮತ್ತು ಗುಂಡ್ಲುಪೇಟೆಯಲ್ಲಿ ನಡೆದ ಬಿಜೆಪಿ ಸಂಕಲ್ಪ ಯಾತ್ರೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷರು ಪಾಲ್ಗೊಂಡಿದ್ದರೂ ಸಹ ಸೋಮಣ್ಣ ಕಾರ್ಯಕ್ರಮದಿಂದ ದೂರ ಉಳಿದಿದ್ದರು. ಇದು ಸಾಕಷ್ಟು ಚರ್ಚೆಗೂ ಗ್ರಾಸವಾಗಿತ್ತು.

ನ.1ರಂದು ನಗರದಲ್ಲಿ ನಡೆಯಲಿರುವ ಕನ್ನಡ ರಾಜ್ಯೋತ್ಸವದಲ್ಲಿ ಸೋಮಣ್ಣ ಪಾಲ್ಗೊಳ್ಳಲಿದ್ದು, ಕಾರ್ಯಕ್ರಮದಲ್ಲಿ ತಮ್ಮ ವಿರುದ್ಧ ಪ್ರತಿಭಟನೆ ನಡೆಯಬಹುದೆಂದು ಭಾವಿಸಿರುವ ಸೋಮಣ್ಣ ಪ್ರತಿಭಟನಾ ನಿರತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಯತ್ನಿಸಿದ್ದಾರೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಚರ್ಚೆಗೆ ನಾನು ಸಹ ಮುಕ್ತನಾಗಿದ್ದೇನೆ. ರೈತರ ಸಮಸ್ಯೆಗಳನ್ನು ಆಲಿಸಲು ವಿಶೇಷವಾಗಿ ಆದ್ಯತೆ ನೀಡಲಾಗುವುದು ಎಂದು ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಪ್ರತಿಭಟನಾ ನಿರತರನ್ನು ಸಮಾಧಾನಪಡಿಸಲು ಪ್ರಯತ್ನಿಸಿದ್ದಾರೆ. ಇದೂ ಸಹ ಜಿಲ್ಲೆಯಾದ್ಯಂತ ನಾನಾ ರೀತಿಯ ಚರ್ಚೆಗೆ ಕಾರಣವಾಗಿದೆ.

### ಜಿಲ್ಲಾ ಉಪ್ಪಾರ ಸಂಘದಿಂದ ಪ್ರತಿಭಾ ಪುರಸ್ಕಾರ

# ಪ್ರಸ್ತುತ ಸಮುದಾಯದಲ್ಲಿ ಶೈಕ್ಷಣಿಕ ಪ್ರಗತಿ

### ಶಾಸಕ ಸಿ.ಪುಟ್ಟರಂಗಶೆಟ್ಟಿ ಪ್ರಶಂಸೆ



ಚಾಮರಾಜನಗರ, ಅ.30–ಸಮುದಾಯದ ವಿದ್ಯಾರ್ಥಿಗಳು ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಪಡೆಯಲು ಆಸಕ್ತಿ ತೋರುತ್ತಿರುವುದು ಪ್ರಶಂಸನೀಯ ಎಂದು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ಜಿಲ್ಲಾ ಉಪ್ಪಾರ ಸಂಘ, ಜಿಲ್ಲೆಯ ಗಡಿಮನೆ, ಕಟ್ಟೆಮನೆ, ಉಪ್ಪಾರ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಭಾನುವಾರ ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.85 ಕ್ಕಿಂತ ಹೆಚ್ಚಿನ ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮುದಾಯದ ವಿದ್ಯಾರ್ಥಿಗಳ ಪೋಷಕರು ಓದುವ ವಯಸ್ಸಿನಲ್ಲೇ ವಿವಾಹ ಮಾಡಲು ಮುಂದಾಗಬಾರದು. ಸಮುದಾಯದಲ್ಲಿ ನ್ಯಾಯ ತೀರ್ಮಾನ ಮಾಡುವಾಗ ಎಚ್ಚರಿಕೆಯಿಂದಿರಬೇಕು. ಮುಖ್ಯವಾಗಿ ಸಮುದಾಯದವರು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಪ್ರಿಯಾಶಂಕರ್ ಮಾತನಾಡಿ, ಪ್ರಸ್ತುತ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅನೇಕ ಸಂಘ–ಸಂಸ್ಥೆಗಳು ತರಬೇತಿ ನೀಡುತ್ತಿವೆ. ಅವುಗಳ ಸದ್ಬಳಕೆಗೆ ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಸಮಾರಂಭದಲ್ಲಿ 350ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಜಿಲ್ಲಾ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ, ಜಿಲ್ಲಾ ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಪ್ಪಾರ ಸಹಕಾರ ಸಂಘದ ರವಿ, ಚಾಮರಾಜನಗರ ಗ್ರಾಮಾಂತರ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಚಿಕ್ಕರಾಜಶೆಟ್ಟಿ, ಚಾಮರಾಜನಗರ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಸೋಮಣ್ಣ, ಐಟಿಐ ಕಾಲೇಜು ಪ್ರಾಂಶುಪಾಲ ರಂಗಸ್ವಾಮಿ, ಪತ್ರಕರ್ತ ಗೌಡಹಳ್ಳಿ ಮಹೇಶ್, ಮಾಜಿ ಸದಸ್ಯ ಕಿನಕಳ್ಳಿ ಸಿದ್ದರಾಜು, ಉಪನ್ಯಾಸಕ ಗೋವಿಂದರಾಜು, ತಾಲೂಕು ಉಪ್ಪಾರ ನೌಕರರ ಸಂಘದ ಸೋಮಣ್ಣ, ಯಳಂದೂರು ಸಂಘದ ರೇಚಣ್ಣ, ಜಿಲ್ಲೆಯ ಗಡಿಮನೆ, ಕಟ್ಟೆಮನೆ ಯಜಮಾನರು, ಗ್ರಾಮಗಳ ಮುಖಂಡರು, ಉಪ್ಪಾರ ನೌಕರರ ಜಿಲ್ಲಾ ಹಾಗೂ ತಾಲೂಕು ಸಂಘದ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಪೋಷಕರಿದ್ದರು.

# ಇಎನ್‌ಟಿ ತಜ್ಞರ ಸಂಘದ ರಾಜ್ಯಾಧ್ಯಕ್ಷರಾಗಿ ಡಾ.ಬಾಬು ಆಯ್ಕೆ



ಚಾಮರಾಜನಗರ, ಅ.30–ಇಎನ್‌ಟಿ ತಜ್ಞ, ಡಾ.ಬಾಬು ಸೋಶಿಯಲ್ ವೆಲ್‌ಫೇರ್ ಅಂಡ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಎ.ಆರ್.ಬಾಬು ಅವರು 2023–24 ಸಾಲಿನ ರಾಜ್ಯ ಕಿವಿ, ಗಂಟಲು, ಮೂಗು ತಜ್ಞರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಡಾ.ಬಾಬು ಅವರು, ಇತ್ತೀಚೆಗೆ ಬೆಂಗಳೂರಲ್ಲಿ ನಡೆದ ದಕ್ಷಿಣ ಭಾರತದ ಇಎನ್‌ಟಿ ತಜ್ಞರ ಸಮಾವೇಶದ ನಂತರ ನಡೆದ ಸಾಮಾನ್ಯ ಸಭೆಯಲ್ಲಿ ರಾಜ್ಯದ ಸರ್ವಾನುಮತದಿಂದ ತಮ್ಮನ್ನು ಸಂಘಕ್ಕೆ ರಾಜ್ಯಾಧ್ಯಕ್ಷನಾಗಿ ಆಯ್ಕೆ ಮಾಡಿದ್ದಾರೆ. ಎಲ್ಲಾ ವೈದ್ಯರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

ರಾಜ್ಯದಲ್ಲಿ 1,500 ಜನ ತಜ್ಞರಿದ್ದು, ನೂತನವಾಗಿ ಸ್ನಾತಕೋತ್ತರ ಪದವಿ ಮಾಡಿದ ಸಂಶೋಧನಾ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಸಂಘದ ಉದ್ದೇಶ. ರಾಜ್ಯಾಧ್ಯಕ್ಷ ಹುದ್ದೆಯ ಅಧಿಕಾರವಧಿ ಒಂದು ವರ್ಷ ಎಂದು ಮಾಹಿತಿ ನೀಡಿದರು. ಈ ವೇಳೆ ವೈದ್ಯರಾದ ಡಾ.ಪ್ರಶಾಂತ್, ಬಿ.ಪಿ.ನಟರಾಜಮೂರ್ತಿ, ಡಾ. ಹರೀಶ್, ತಾಲೂಕು ಔಷಧಿ ವ್ಯಾಪಾರ ಸಂಘದ ಪ್ರಶಾಂತ್ ಇದ್ದರು.

# ನೀರಿನಲ್ಲಿ ಮುಳುಗಿ ವ್ಯಕ್ತಿ ಸಾವು

ಹನೂರು, ಅ.30– ಮೀನು ಹಿಡಿಯಲು ತೆರಳಿದ್ದ ವ್ಯಕ್ತಿಯೋರ್ವ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲೂಕಿನ ವಡ್ಡರದೊಡ್ಡಿ ಗ್ರಾಮದಲ್ಲಿ ಜರುಗಿದೆ.



ತಾಲೂಕಿನ ವಡ್ಡರದೊಡ್ಡಿ ಗ್ರಾಮದ ನಿವಾಸಿ ಮದಲೈಮುತ್ತು(38) ಮೃತಪಟ್ಟವರು. ಇವರು ತಮಿಳುನಾಡಿ ನಾಲ್ ರೋಡ್ ಹಾಗೂ ಮಾರ್ಟಳ್ಳಿ ಮಾರ್ಗ ಮಧ್ಯದಲ್ಲಿರುವ ಚೆಕ್ ಡ್ಯಾಮ್‌ನಲ್ಲಿ ಪ್ರತಿದಿನ ಮೀನು ಹಿಡಿಯುತ್ತಿದ್ದರು ಎನ್ನಲಾಗಿದೆ. ಇಂದು ಸಹ ಮೀನು ಹಿಡಿಯಲು ಬಲೆ ಹಾಕುವ ವೇಳೆ ಕಾಲು ಜಾರಿ ನೀರಿನಲ್ಲಿ ಮುಳುಗಿ, ಸಾವನ್ನಪ್ಪಿದ್ದಾರೆ. ಗ್ರಾಮಸ್ಥರ ಮಾಹಿತಿ ಮೇರೆಗೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೃತದೇಹವನ್ನು ಹೊರತೆಗೆದು ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ. ಈ ಸಂಬಂಧ ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೇಗೂರಲ್ಲಿ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ




ಬೇಗೂರು, ಅ.30–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಹೋಬಳಿ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಅದ್ಧೂರಿಯಾಗಿ ಜರುಗಿತು.

ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೇಶ ಇರುವವರೆಗೂ ರಾಮಾಯಣವಿರುತ್ತದೆ. ರಾಮಾಯಣ ಇರುವವರೆಗೂ ವಾಲ್ಮೀಕಿ ಮಹರ್ಷಿ ಹೆಸರು ಅಜರಾಮರ ಎಂದರು.

ನಾವು ಮಾಡುವ ಕಾಯಕದಲ್ಲಿ ಶ್ರದ್ಧೆ ಇರಬೇಕು. ಸರ್ಕಾರ ವಾಲ್ಮೀಕಿ ನಿಗಮವನ್ನು ಮಾಡುವ ಮುಖಾಂತರ ಸಮುದಾಯದವರು ಜೀವನವನ್ನು ರೂಪಿಸಿಕೊಳ್ಳಲು ಅನೇಕ ಅನುದಾನಗಳನ್ನು ನೀಡಿದೆ. ತಳವಾರ ಪರಿವಾರ ಎಸ್‌ಟಿ ಸಮುದಾಯಕ್ಕೆ ಸೇರಿಸಿದ್ದ ಮೇಲೆ ವಿದ್ಯಾಭ್ಯಾಸ, ಉದ್ಯೋಗಕ್ಕೆ ಅನುಕೂಲವಾಗಿದೆ. ಪ್ರಸ್ತುತ ರಾಜ್ಯ ಸರ್ಕಾರ ಎಸ್‌ಟಿ ಮೀಸಲಾತಿಯನ್ನು ಶೇ.3 ರಿಂದ ಶೇ.7ಮರೆಗೆ ಹೆಚ್ಚಿಸಿದೆ. ಇದು ಮುಂದಿನ ಪೀಳಿಗೆಗೆ ದೊಡ್ಡ ಕೊಡುಗೆ ಎಂದರು.

ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ಮೈಸೂರು ಮಹಾಪೌರ ಶಿವಕುಮಾರ್, ವಾಲ್ಮೀಕಿ ಅಭಿವೃದ್ಧಿ ನಿಗಮದ ತಾಲೂಕು ಅಧ್ಯಕ್ಷ ಎಸ್.ಸಿ.ಬಸವರಾಜು, ಕೇಂದ್ರ ಬರ ಪರಿಹಾರ ನಿಗಮ ಮಂಡಳಿಯ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಕೆಪಿಸಿಸಿ ಜಿಲ್ಲಾ ಕಾರ್ಯದರ್ಶಿ ಶ್ರೀನಿವಾಸ ನಾಯಕ, ಕಾಂಗ್ರೆಸ್ ಯುವ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್, ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಚಿಕ್ಕರಂಗ ನಾಯಕ, ಜಿಪಂ ಮಾಜಿ ಅಧ್ಯಕ್ಷ ಕಬ್ಬಳ್ಳಿ ಮಹೇಶ್, ಬೇಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಎಂ.ಮುನಿರಾಜು, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಗ್ರಾಪಂ ಅಧ್ಯಕ್ಷೆ ಇಂದಿರಾ ಸುರೇಶ್, ಉಪಾಧ್ಯಕ್ಷ ಕೆ.ಮಹದೇವಶೆಟ್ಟಿ, ಸದಸ್ಯ, ಬೆಲಚಲವಾಡಿ ಮಂಜು ಹಾಜರಿದ್ದರು.

# ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಕನ್ನಡ ರಾಜ್ಯೋತ್ಸವ

ಚಾಮರಾಜನಗರ, ಅ.30–ಹೆಚ್ಚಿನ ಮಳೆಯಿಂದಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣವು ನೀರು ಮತ್ತು ತೇವಾಂಶದಿಂದ ಕೂಡಿರುವುದರಿಂದ ಈ ಬಾರಿ ನ.1ರಂದು ಜಿಲ್ಲಾಡಳಿತದಿಂದ ಆಯೋಜಿಸಿರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಏರ್ಪಡಿಸಲಾಗಿದೆ.

ಪ್ರತಿ ವರ್ಷ ನ.1ರಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಲಾಗುತ್ತಿತ್ತು. ಪ್ರಸ್ತುತ ಸುರಿದಿರುವ ಹೆಚ್ಚಿನ ಮಳೆಯಿಂದಾಗಿ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣವು ನೀರು ಮತ್ತು ತೇವಾಂಶದಿಂದ ಕೂಡಿರುವುದರಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ, ಪೆರೇಡ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅಸಾಧ್ಯ. ಈ ಹಿನ್ನೆಲೆಯಲ್ಲಿ ಈ ಬಾರಿ ಸ್ಥಳ ಬದಲಿಸಲಾಗಿದೆ ಎಂದು ಜಿಲ್ಲಾಡಳಿತದ ತಿಳಿಸಿದೆ.

# ಹೊಂಗನೂರಲ್ಲಿ ಅದ್ಧೂರಿ ವಾಲ್ಮೀಕಿ ಜಯಂತಿ



ಚಾಮರಾಜನಗರ, ಅ.30–ತಾಲೂಕಿನ ಹೊಂಗನೂರು ಗ್ರಾಮದಲ್ಲಿ ನಾಯಕ ಸಮುದಾಯದಿಂದ ವಾಲ್ಮೀಕಿ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಗ್ರಾಮದ ಶ್ರೀಲಕ್ಷ್ಮೀದೇವಿ ದೇವಸ್ಥಾನದ ಆವರಣದಲ್ಲಿರುವ ವಾಲ್ಮೀಕಿ ಭಾವಚಿತ್ರ ನಾಮಫಲಕಕ್ಕೆ ಪೂಜೆ ಸಲ್ಲಿಸಿ, ಅಲಂಕೃತ ವಾಹನದಲ್ಲಿ ಶ್ರೀ ವಾಲ್ಮೀಕಿ ಭಾವಚಿತ್ರವಿಟ್ಟು ಪೂಜೆ ಸಲ್ಲಿಸಲಾಯಿತು. ಗಣ್ಯರು ಪುಷ್ಪಾರ್ಚನೆ ಮಾಡಿದರು. ಬಳಿಕ ದೇವಸ್ಥಾನದ ಆವರಣದಿಂದ ಹೊರಟ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಾಗಿತು. ಕಾರ್ಯಕ್ರಮದ ಅಂಗವಾಗಿ ಗ್ರಾಮವನ್ನು ಹಸಿರು ತೋರಣ, ವಿದ್ಯುತ್ ದೀಪಗಳಿಂದ ಸಿಂಗರಿಸಲಾಯಿತು.

ಮೆರವಣಿಗೆಯಲ್ಲಿ ನಾಯಕ ಸಮುದಾಯದ ದೊಡ್ಡ ಯಜಮಾನ ಬಾಲುನಾಯಕ, ಶೇರುದಾರ ಚಿನ್ನಸ್ವಾಮಿನಾಯಕ, ಎಸ್‌ಬಿಐ ಬ್ಯಾಂಕ್ ವ್ಯವಸ್ಥಾಪಕ ದಿನೇಶ್, ತಾಪಂ ಮಾಜಿ ಅಧ್ಯಕ್ಷ ಹೆಚ್.ವಿ.ಚಂದ್ರು, ಯಜಮಾನರಾದ ನಾಗರಾಜು, ರಾಜಣ್ಣನಾಯಕ, ರಂಗಸ್ವಾಮಿನಾಯಕ, ಬಿಳಿಗಿರಿರಂಗನಾಯಕ, ಗ್ರಾಪಂ ಸದಸ್ಯರಾದ ಕುನ್ನನಾಯಕ, ರಂಗಸ್ವಾಮಿನಾಯಕ, ದಿವಾಕರ, ಮುಖಂಡ ವೆಂಕಟರಂಗನಾಯಕ, ಗೋವಿಂದನಾಯಕ, ಹೆಚ್.ಆರ್.ರಾಚನಾಯಕ ಹಾಗೂ ನಾಯಕ ಜನಾಂಗದ ಮುಖಂಡರು, ಗ್ರಾಮಸ್ಥರಿದ್ದರು.

ಒಂದನೇ ಪುಟದಿಂದ

## 67 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

ಶಿವಮೊಗ್ಗದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಡಾ. ಎಲ್.ಹೆಚ್.ಮಂಜುನಾಥ್, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್, ಹೊರನಾಡು ವಿಭಾಗದಲ್ಲಿ ಮುಂಬಯಿಯ ದೇವಿದಾಸ ಶೆಟ್ಟಿ, ಹೊರನಾಡಿನ ಅರವಿಂದ ಪಾಟೀಲ್, ತೆಲಂಗಾಣದ ಕೃಷ್ಣಮೂರ್ತಿ ಮಾಂಜಾ, ಹೊರ ದೇಶ ವಿಭಾಗದಲ್ಲಿ ಗಲ್ಫ್ ರಾಷ್ಟ್ರದ ರಾಜಕುಮಾರ್, ವೈದ್ಯಕೀಯ ಕ್ಷೇತ್ರದಲ್ಲಿ ಶಿವಮೊಗ್ಗದ ಡಾ. ಹೆಚ್.ಎಸ್.ಮೋಹನ್, ದಾವಣಗೆರೆಯ ಡಾ. ಬಸವಂತಪ್ಪ, ಸಮಾಜ ಸೇವೆಯಲ್ಲಿ ದಕ್ಷಿಣ ಕನ್ನಡದ ರವಿಶೆಟ್ಟಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿ.ಕರಿಯಪ್ಪ, ಹಾವೇರಿಯ ಎಂ.ಎಸ್.ಕೋರಿಶೆಟ್ಟರ್, ಮೈಸೂರಿನ ಡಿ.ಮಾದೇಗೌಡ, ಬೀದರ್‌ನ ಬಲಬೀರ್ ಸಿಂಗ್, ವಾಣಿಜ್ಯೋದ್ಯಮದಲ್ಲಿ ಬೆಂಗಳೂರಿನ ಬಿ.ವಿ.ನಾಯ್ಡು, ಉಡುಪಿಯ ಜಯರಾಮ ಬನಾನ್, ಕೋಲಾರದ ಜೆ.ಶ್ರೀನಿವಾಸ್, ರಂಗಭೂಮಿಯಲ್ಲಿ ಯಾದಗಿರಿಯ ತಿಪ್ಪಣ್ಣ ಹೆಳವರ್, ವಿಜಯಪುರದ ಶ್ರೀಮತಿ ಲಲಿತಾಬಾಯಿ ಚನ್ನದಾಸ, ಕಲಬುರಗಿಯ ಗುರುನಾಥ್ ಹೂಗಾರ್, ಉಡುಪಿಯ ತಾಳ ಮದ್ದಳೆ–ಯಕ್ಷಗಾನ ಕಲಾವಿದ ಪ್ರಭಾಕರ ಜೋಷಿ, ಹಾವೇರಿಯ ಶ್ರೀಶೈಲ ಹುದ್ದಾರ್, ಸಂಗೀತ ಕ್ಷೇತ್ರದಲ್ಲಿ ದಕ್ಷಿಣ ಕನ್ನಡದ ಎಂ.ನಾರಾಯಣ, ಧಾರವಾಡದ ಅನಂತಾಚಾರ್ಯ ಬಾಳಾಚಾರ್ಯ, ಚಿಕ್ಕಬಳ್ಳಾಪುರದ ಮುಖವೀಣೆ ಕಲಾವಿದ ಅಂಜನಪ್ಪ ಸತ್ಪಾಡಿ, ಬಾಗಲಕೋಟೆಯ ಅನಂತ ಕುಲಕರ್ಣಿ, ಜಾನಪದ ಕ್ಷೇತ್ರದಲ್ಲಿ ಉತ್ತರ ಕನ್ನಡದ ಸಹಮಾದೇವಪ್ಪ ಈರಪ್ಪ ನಾಡಿಗೇರ್, ಉಡುಪಿಯ ದೈವ ನರ್ತಕ ಗುಡ್ಡಪಾಣಾರ, ರಾಯಚೂರಿನ ಸೂಲಗಿತ್ತಿ ಶ್ರೀಮತಿ ಕಮಲಮ್ಮ, ಧಾರವಾಡದ ಶ್ರೀಮತಿ ಸಾವಿತ್ರಿ ಪೂಜಾ, ಬಾಗಲಕೋಟೆಯ ರಾಚಯ್ಯ ಸಾಲಿಮಠ್, ಹಾವೇರಿಯ ವೀರಗಾಸೆ ಕಲಾವಿದ ಮಹೇಶ್ವರಗೌಡ ಲಿಂಗದಹಳ್ಳಿ, ಶಿಲ್ಪಕಲೆಯಲ್ಲಿ ಬಾಗಲಕೋಟೆಯ ರಥಶಿಲ್ಪಿ ಪರಶುರಾಂ ಪವಾರ್, ಬೆಳಗಾವಿಯ ಹನುಮಂತಪ್ಪ ಬಾಳಪ್ಪ ಹುಕ್ಕೇರಿ, ಚಿತ್ರಕಲೆಯಲ್ಲಿ ಕೊಪ್ಪಳದ ಕಿನ್ನಾಳ ಕಲೆಗಾರ ಸಣ್ಣರಂಗಪ್ಪ ಚಿತ್ರಕಾರ್, ಚಲನಚಿತ್ರ ಕ್ಷೇತ್ರದಲ್ಲಿ ದತ್ತಣ್ಣ, ಅವಿನಾಶ್, ಕಿರುತೆರೆಯಲ್ಲಿ ಸಿಹಿ–ಕಹಿ ಚಂದ್ರು, ಯಕ್ಷಗಾನದಲ್ಲಿ ಉಡುಪಿಯ ಎಂ.ಎ. ನಾಯಕ್, ಉತ್ತರ ಕನ್ನಡದ ಸುಬ್ರಹ್ಮಣ್ಯ ಧಾರೇಶ್ವರ, ದಕ್ಷಿಣ ಕನ್ನಡದ ಸರಪಾಡಿ ಅಶೋಕ ಶೆಟ್ಟಿ, ಬಯಲಾಟದಲ್ಲಿ ಧಾರವಾಡದ ಅಡವಯ್ಯ ಚ.ಹಿರೇಮಠ್, ಕೊಪ್ಪಳದ ಶಂಕರಪ್ಪ ಮಲ್ಲಪ್ಪ ಹೊರಪೇಟೆ, ಬಳ್ಳಾರಿಯ ಹೆಚ್.ಪಾಂಡುರಂಗಪ್ಪ, ಸಾಹಿತ್ಯ ಕ್ಷೇತ್ರದಲ್ಲಿ ಬೆಳಗಾವಿಯ ಶಂಕರ್ ಬುಚಡಿ, ಮೈಸೂರಿನ ಪ್ರೊ.ಕೃಷ್ಣೇಗೌಡ, ಬೆಳಗಾವಿಯ ಅಶೋಕ್ ಬಾಬು ನೀಲಗಾರ್, ಹಾಸನದ ಪ್ರೊ.ಅ.ರಾ.ಮಿತ್ರಾ, ಕಲಬುರಗಿಯ ರಾಮಕೃಷ್ಣ ಮರಾಠೆ, ಶಿಕ್ಷಣ ಕ್ಷೇತ್ರದಲ್ಲಿ ತುಮಕೂರಿನ ಕೋಟೆ ರಂಗಪ್ಪ, ಬೆಂಗಳೂರಿನ ಸಂಶೋಧಕ ಡಾ. ಎಂ.ಜಿ.ನಾಗರಾಜ್, ಕ್ರೀಡಾ ಕ್ಷೇತ್ರದಲ್ಲಿ ಧಾರವಾಡದ ದತ್ತಾತ್ರೇಯ ಗೋವಿಂದ ಕುಲಕರ್ಣಿ, ಬೆಳಗಾವಿಯ ರಾಘವೇಂದ್ರ ಅಣ್ಣೇಕರ್, ನ್ಯಾಯಾಂಗ ಕ್ಷೇತ್ರದಲ್ಲಿ ಬೆಂಗಳೂರಿನ ವೆಂಕಟಾಚಲಪತಿ, ನಂಜುಂಡರೆಡ್ಡಿ, ನೃತ್ಯದಲ್ಲಿ ದಕ್ಷಿಣ ಕನ್ನಡದ ಕಮಲಾಕ್ಷಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್‌ಕುಮಾರ್ ತಿಳಿಸಿದ್ದಾರೆ.

## ಮಹನೀಯರ ತ್ಯಾಗ, ಸೇವೆಯ ಫಲ

ಆಶ್ರಮಕ್ಕೆ ಪ್ರಶಸ್ತಿ ಸಂದ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸ್ವಾಮೀಜಿ, ನಮಗೆ ಇದೊಂದು ಆಹ್ಲಾದಕರ ಆಶ್ಚರ್ಯ. ಪ್ರಶಸ್ತಿ ಬಗ್ಗೆ ಕಲ್ಪನೆಯೂ ಇರಲಿಲ್ಲ. ಭಗವಂತನ ಕೃಪೆ, 97 ವರ್ಷಗಳಲ್ಲಿ ಸೇವೆ ಸಲ್ಲಿಸಿದ ನೂರಾರು ಸಾದುಗಳು, 14 ವರ್ಷ ಇಲ್ಲಿದ್ದ ರಾಷ್ಟ್ರಕವಿ ಕುವೆಂಪು ಸೇರಿದಂತೆ ಅನೇಕ ಮಹನೀಯರ ಮಹತ್ತರ ತ್ಯಾಗ ಮತ್ತು ಸೇವೆಯ ಪ್ರತಿಫಲ ಇದಾಗಿದೆ ಎಂದರು.

ರಾಮಕೃಷ್ಣ ಆಶ್ರಮ ಸಮಾಜದ ಪರಿವರ್ತನೆಗಾಗಿ ನಿರಂತರ ಸೇವೆ ಸಲ್ಲಿಸುತ್ತಿದೆ. ಯಾವ ಪ್ರಶಸ್ತಿಗಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ವಿವೇಶ ಶಿಕ್ಷಣದ ಮೂಲಕ ಪ್ರತಿದಿನ ಸಂಜೆ ಕನ್ನಡ ಮಾಧ್ಯಮ ಮಕ್ಕಳಿಗೆ ಇಂಗ್ಲಿಷ್, ವಿಜ್ಞಾನ ಹಾಗೂ ಗಣಿತ ಪಾಠವನ್ನು ಉಚಿತವಾಗಿ ನೀಡಲಾಗುತ್ತಿದೆ. 24 ವರ್ಷಗಳಿಂದ ಸದ್ದುಗದ್ದಲವಿಲ್ಲದೆ 6,800ಕ್ಕೂ ಹೆಚ್ಚು ಮಕ್ಕಳು ಪ್ರಯೋಜನ ಪಡೆದುಕೊಂಡು ಶಿಕ್ಷಣದಲ್ಲಿ ಯಶಸ್ಸು ಪಡೆದಿದ್ದಾರೆ. ವಿವೇಕ ಪ್ರಭ, ಕನ್ನಡ ಸೇವೆ ಇನ್ನಿತರ ನೂರಾರು ಪುಸ್ತಕಗಳ ಪ್ರಕಟಿಸಲಾಗಿದೆ. ಆಶ್ರಮದ ಮೂಲಕ ವಿದ್ಯಾರ್ಥಿಗಳಿಗೆ ಉತ್ಕೃಷ್ಟ ಶಿಕ್ಷಣ ಸೇವೆ ನೀಡಲಾಗುತ್ತಿದೆ. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ(ರಿಮ್ಸೆ)ಯನ್ನು ಉನ್ನತ ಮೌಲ್ಯದ ಕೇಂದ್ರವನ್ನಾಗಿ ರೂಪಿಸಿ ಸೇವೆ ನೀಡಲಾಗುತ್ತಿದೆ. ಸರ್ಕಾರ ವಿವೇಕಾ ಸ್ಮಾರಕಕ್ಕೆ ಅನುವು ನೀಡಿದ ಬಳಿಕ ನಿರ್ಮಾಣ ಆರಂಭಿಸಬೇಕಿದೆ. ಕುಗ್ರಾಮಗಳಲ್ಲಿ ಸೇವಾ ಮಂದಿರದ ಸೇವೆ ಆರಂಭಿಸಲಾಗುತ್ತಿದೆ. ಆಶ್ರಮದ ಸೇವಾಕಾರ್ಯಗಳನ್ನು ಪರಿಗಣಿಸಿ ಪ್ರಶಸ್ತಿ ನೀಡಿರುವ ಸರ್ಕಾರಕ್ಕೆ ಧನ್ಯವಾದಗಳು ಎಂದು ಶ್ರೀ ಮುಕ್ತಿದಾನಂದಜಿ ಮಹಾರಾಜ್ ತಿಳಿಸಿದರು.

## ಧನ್ಯತಾ ಭಾವ ಮೂಡಿಸಿದೆ

ಟಿವಿಯ ಹಾಸ್ಯ ಕಾರ್ಯಕ್ರಮಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಾನು ಟಿವಿ ಕಾರ್ಯಕ್ರಮಗಳ ಮೂಲಕ ಸಮಾಜಕ್ಕೆ ಹೆಚ್ಚು ಪ್ರಚಾರಗೊಂಡಿದ್ದೇನೆ. ಹಾಗೇ ಪಾಠ, ಹರಿಕಥೆ, ನಾಟಕ, ಸಿನಿಮಾಗಳಿಗೆ ಹಾಡುವುದು ಮತ್ತು ಸಾಹಿತ್ಯ ಬರೆಯುವುದರ ಜೊತೆಗೆ ವಿವಿಧ ರೀತಿಯಲ್ಲಿ ಕನ್ನಡದಲ್ಲಿ ಪ್ರಯೋಗಳನ್ನು ಮಾಡುತ್ತೇನೆ ಹಾಸ್ಯ, ಹರಟೆ ಕಾರ್ಯಕ್ರಮಗಳು ಮತ್ತೊಂದು ಪ್ರಯೋಗಗಳಾಗಿದ್ದು, ಮನರಂಜನೆ ಮೂಲಕ ನನ್ನ ಆಲೋಚನೆಗಳನ್ನು ತಿಳಿಸುತ್ತೇನೆ ಎಂದರು.

ಪ್ರಶಸ್ತಿಗೆ ಅರ್ಜಿ ಸಲ್ಲಿಸಿದ್ದರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈವರೆಗೂ ನಾನು ಇದುವರೆಗೂ ಯಾವ ಪ್ರಶಸಿಗಾಗಿ ಅರ್ಜಿ ಸಲ್ಲಿಸಿಲ್ಲ. ಮುಂದೆಯು ಸಲ್ಲಿಸುವುದಿಲ್ಲ. ಈ ಪ್ರಶಸ್ತಿ ಲಭಿಸಬೇಕಿತ್ತು ಎಂದರೆ ಆತ್ಮ ಪ್ರಶಂಸೆ ಆಗುತ್ತದೆ. ಬರಬೇಕಿರಲಿಲ್ಲ ಎಂದರೆ ಅವರ ವಿವೇಚನೆ ಸರಿ ಎಂಬ ಅರ್ಥ ಮೂಡುತ್ತದೆ. ಒಟ್ಟಾರೆ ಪ್ರಶಸ್ತಿ ಲಭಿಸಿರುವುದು ಸಂತೋಷವಾಗಿದೆ. ಅದರಲೂ ನನ್ನ ಗುರುಗಳಾದ ಪ್ರೋ.ಅ.ರಾ.ಮಿತ್ರ ಅವರೊಂದಿಗೆ ಪ್ರಶಸ್ತಿಗೆ ತೆಗೆದುಕೊಳ್ಳುತ್ತಿರುವುದು ಸಂತಸವನ್ನು ದುಪ್ಪಟ್ಟು ಮಾಡಿದೆ. ಈ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಇಲ್ಲಿವರೆಗೂ ಪಾಠ ಮಾಡಿದ ಎಲ್ಲಾ ನನ್ನ ಗುರುಗಳಿಗೆ, ನನ್ನ ಊರಿಗೆ, ಕುಟುಂಬಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದು ಹಂಚಿಕೊಂಡರು.

## ಕಾರು ಬಾಂಬ್ ಸ್ಫೋಟ

ಸಾಧ್ಯವಿಲ್ಲದ ಕಾರಣ ನಮ್ಮ ಅಂತರರಾಷ್ಟ್ರೀಯ ಪಾಲುದಾರರು ಮತ್ತು ಪ್ರಪಂಚದಾದ್ಯಂತ ಇರುವ ಮುಸ್ಲಿಮರು ಅವರ ವೈದ್ಯರನ್ನು ಇಲ್ಲಿಗೆ ಕಳುಹಿಸಲು ನಾವು ಕೇಳುತ್ತೇವೆ ಎಂದು ಹೇಳಿದರು. ಅಲ್–ಖೈದಾ–ಸಂಯೋಜಿತ ಅಲ್–ಶಬಾಬ್ ಉಗ್ರಗಾಮಿ ಗುಂಪು, ಆಗಾಗ್ಗೆ ರಾಜಧಾನಿಯನ್ನು ಗುರಿಯಾಗಿಸಿಕೊಳ್ಳುತ್ತಿದೆ ಮತ್ತು ದೇಶದ ಹೆಚ್ಚಿನ ಭಾಗಗಳನ್ನು ನಿಯಂತ್ರಿಸುತ್ತಿದೆ. ಇದು ಶಿಕ್ಷಣ ಸಚಿವಾಲಯವನ್ನು ಗುರಿಯಾಗಿಸಿದೆ ಎಂದು ಹೇಳುತ್ತದೆ. ಸಚಿವಾಲಯವು ಮುಸ್ಲಿಮೇತರ ದೇಶಗಳಿಂದ ಬೆಂಬಲವನ್ನು ಪಡೆಯುವ "ಶತ್ರು ನೆಲೆ" ಮತ್ತು 'ಸೊಮಾಲಿ ಮಕ್ಕಳನ್ನು ಇಸ್ಲಾಮಿಕ್ ನಂಬಿಕೆಯಿಂದ ತೆಗೆದುಹಾಕಲು ಬದ್ಧವಾಗಿದೆ ಎಂದು ಅದು ಹೇಳಿಕೊಂಡಿದೆ. ಈ ವರ್ಷ ಚುನಾಯಿತ ರಾದ ಸೊಮಾಲಿಯಾ ಅಧ್ಯಕ್ಷರು, ದೇಶವು ಅಲ್–ಶಬಾಬ್‌ನೊಂದಿಗೆ ಯುದ್ಧವನ್ನು ಮಾಡುತ್ತಿದೆ ಮತ್ತು ನಾವು ಗೆಲ್ಲುತ್ತಿದ್ದೇವೆ ಎಂದು ಹೇಳಿದರು. ಹಿಂಸಾತ್ಮಕ ಉಗ್ರವಾದವನ್ನು ಮತ್ತು ವಿಶೇಷವಾಗಿ ಅಲ್–ಶಬಾಬ್ ಸಂಘಟನೆಯನ್ನು ಎದುರಿಸಲು ಅಗತ್ಯವಿರುವ ಕ್ರಮಗಳ ಕುರಿತು ಚರ್ಚಿಸಲು ಅಧ್ಯಕ್ಷರು, ಪ್ರಧಾನ ಮಂತ್ರಿ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆ ನಡೆಸುತ್ತಿದ್ದ ದಿನದಂದೇ ಮೊಗಾದಿಶುನಲ್ಲಿ ದಾಳಿ ಸಂಭವಿಸಿದೆ.

## ಇಂಜಿನಿಯರಿಂಗ್ ವಿದ್ಯಾರ್ಥಿನಿ ಬಂಧನ

ಶ್ರೀಗಳ ಡೆತ್‌ನೋಟ್ ದೊರೆತಿದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಸಾಮಾಜಿಕ ಜಾಲ ತಾಣದಲ್ಲಿ ನಕಲಿ ಡೆತ್‌ನೋಟ್ ಅನ್ನು ಹರಿಬಿಡಲಾಗಿತ್ತು. ಬಂಡೆ ಮಠದ ಶ್ರೀಗಳ ಅಶ್ಲೀಲ ವೀಡಿಯೋ ಕ್ಲಿಪ್ಪಿಂಗ್ ಅನ್ನೂ ಕೂಡ ವೈರಲ್ ಮಾಡಲಾಗಿತ್ತು. ಬಂಡೆ ಮಠದ ಶ್ರೀಗಳು ಸಚ್ಚಾರಿತ್ರ್ಯವುಳ್ಳವರಲ್ಲ ಎಂದು ಬಿಂಬಿಸಲು ಒಂದರ ಮೇಲೊಂದು ವೀಡಿಯೋ ಕ್ಲಿಪ್ಪಿಂಗ್‌ಗಳನ್ನು ವೈರಲ್ ಮಾಡಲಾಗುತ್ತಿತ್ತು.

ಇದರ ಜಾಡನ್ನು ಹಿಡಿದು ತನಿಖೆ ಆರಂಭಿಸಿದ ಪೊಲೀಸರು, ಬಂಡೆ ಮಠದ ಶ್ರೀಗಳ ಜೊತೆ ವೀಡಿಯೋ ಕಾಲ್‌ನಲ್ಲಿ ಮಾತನಾಡಿದ ವಿದ್ಯಾರ್ಥಿನಿ ಹಾಗೂ ಆಕೆಯನ್ನು ಬಳಸಿಕೊಂಡು ಬಂಡೆ ಮಠದ ಶ್ರೀಗಳನ್ನು ಖೆಡ್ಡಾಗೆ ಕೆಡವಿದ ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿ ಮತ್ತು ವೀಡಿಯೋ ಕ್ಲಿಪ್ಪಿಂಗ್‌ಗಳನ್ನು ಎಡಿಟ್ ಮಾಡಿ ಸಿ.ಡಿ.ಗಳಲ್ಲಿ ದಾಖಲಿಸಿದ ನಿವೃತ್ತ ಶಿಕ್ಷಕನೂ ಆದ ವಕೀಲ ಮಹದೇವಯ್ಯನನ್ನು ಬಂಧಿಸಿದ್ದರು.

ದೊಡ್ಡಬಳ್ಳಾಪುರದ ವಿದ್ಯಾರ್ಥಿನಿ ನೀಲಾಂಬಿಕೆ ತುಮಕೂರು ಜಿಲ್ಲೆಯ ಕ್ಯಾತಸಂದ್ರದಲ್ಲಿರುವ ತಮ್ಮ ಅಜ್ಜಿ ಮನೆಗೆ ಬರುತ್ತಿದ್ದ ವೇಳೆ ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿ ಸಂಪರ್ಕ ಆಕೆಗೆ ದೊರೆತಿದೆ. ತಾನು ಹೇಳಿದಂತೆ ಆಕೆ ಮಾಡುತ್ತಾಳೆ ಎಂದು ಖಾತರಿ ಆದ ನಂತರ ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿಯು ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಅವರನ್ನು ಹನಿಟ್ರ್ಯಾಪ್ ಮಾಡಲು ಯೋಜನೆ ರೂಪಿಸಿದ್ದಾರೆ. ಅದರಂತೆ ಮೊಬೈಲ್ ಮೂಲಕ ಬಂಡೆ ಮಠದ ಶ್ರೀಗಳ ಸಂಪರ್ಕ ಹೊಂದಿದ ನೀಲಾಂಬಿಕೆ ವೀಡಿಯೋ ಕಾಲ್‌ನಲ್ಲಿ ವಯ್ಯಾರದಿಂದ ಮಾತನಾಡುತ್ತಾ, ಬಂಡೆ ಮಠದ ಶ್ರೀಗಳು ಬೆತ್ತಲಾಗುವಂತೆ ಮಾಡಿ, ಅದನ್ನು ರೆಕಾರ್ಡ್ ಮಾಡಿಕೊಂಡು ಕಣ್ಣೂರು ಮಠದ ಶ್ರೀಗಳಿಗೆ ನೀಡಿದ್ದಾಳೆ. ಅವರು ತಮ್ಮ ಆಪ್ತನಾದ ವಕೀಲ ಮಹದೇವಯ್ಯನಿಗೆ ವೀಡಿಯೋ ಕ್ಲಿಪ್ಪಿಂಗ್‌ಗಳನ್ನು ನೀಡಿದಾಗ ದೃಶ್ಯಗಳಲ್ಲಿ ವಿದ್ಯಾರ್ಥಿನಿ ನೀಲಾಂಬಿಕೆ ಕಾಣದಂತೆ ಎಡಿಟ್ ಮಾಡಿ ಅದನ್ನು ಸಿ.ಡಿ.ಗಳಲ್ಲಿ ರೆಕಾರ್ಡ್ ಮಾಡಿ, ಅವುಗಳನ್ನು ಮಹದೇವಯ್ಯ ಕಣ್ಣೂರು ಮಠದ ಶ್ರೀಗಳಿಗೆ ನೀಡಿದ್ದಾನೆ. ಅಲ್ಲದೇ ಅದೇ ವೀಡಿಯೋ ಕ್ಲಿಪ್ಪಿಂಗ್‌ಗಳನ್ನು ಬಳಸಿಕೊಂಡು ಬಂಡೆ ಮಠದ ಸ್ವಾಮೀಜಿಯನ್ನು ಬ್ಲಾಕ್‌ಮೇಲ್ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಪ್ರಕರಣದಲ್ಲಿ ಇನ್ನೂ ಏಳೆಂಟು ಮಂದಿ ಭಾಗಿಯಾಗಿರುವ ಸಾಧ್ಯತೆ ಇದ್ದು, ಅವರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ದಕ್ಷಿಣ ಕನ್ನಡ, ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟಕ್ಕೆ ಚಾಲನೆ

# ವೃತ್ತಿ ಧರ್ಮದ ಜೊತೆಗೆ ಮೈಸೂರು ಜನರ ಪ್ರೀತಿಗೆ ಪಾತ್ರರಾದ ಕರಾವಳಿ ಜಿಲ್ಲೆಯ ಉದ್ಯಮಿಗಳು: ಮೇಯರ್ ಶಿವಕುಮಾರ್

ಮೈಸೂರು, ಅ.30(ಆರ್‌ಕೆಬಿ)– ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗಳ ಜನರು ಮೈಸೂರಿನಲ್ಲಿ ಉದ್ಯಮಿಗಳಾಗಿ ವೃತ್ತಿ ಧರ್ಮ ಪಾಲಿಸುತ್ತಾ, ಈ ಭಾಗದ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ ಎಂದು ಮೇಯರ್ ಶಿವಕುಮಾರ್ ಇಂದಿಲ್ಲಿ ತಿಳಿಸಿದರು.



ಮೈಸೂರಿನಲ್ಲಿ ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಉದ್ಘಾಟನೆಯನ್ನು ಮೇಯರ್ ಶಿವಕುಮಾರ್ ನೆರವೇರಿಸಿದರು. ಚಿತ್ರದಲ್ಲಿ ಚಲನಚಿತ್ರ ಸಂಗಿತ ನಿರ್ದೇಶಕ ಗುರುಕಿರಣ್, ಉದ್ಯಮಿ ಸುರೇಶ್ ಶೆಟ್ಟಿ ಗುರ್ಮೆ, ಡಾ.ಶಿವಶರಣ ಶೆಟ್ಟಿ, ಒಕ್ಕೂಟದ ಗೌರವಾಧ್ಯಕ್ಷ ಸುಧಾಕರ ಶೆಟ್ಟಿ, ಅಧ್ಯಕ್ಷ ಗ್ರೇಶಿಯನ್ ರೋಡ್ರಿಗಸ್, ಪದಾಧಿಕಾರಿಗಳಾದ ಎಂ.ಕೆ.ಪುರಾಣಿಕ, ನಾರಾಯಣ ಹೆಗ್ಡೆ ಇನ್ನಿತರರನ್ನು ಕಾಣಬಹುದು.

ಮೈಸೂರಿನ ಕಲಾಮಂದಿರದಲ್ಲಿ ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ನಾಡಿನ ಧರ್ಮಕ್ಷೇತ್ರಗಳ ಕೇಂದ್ರವಾದ ಕರಾವಳಿ ಜಿಲ್ಲೆಗಳ ಜನರು ದೇಶ, ವಿದೇಶಗಳಲ್ಲೂ ನೆಲೆಸಿ, ಅಲ್ಲಿನ ಭಾಷೆ, ಸಂಸ್ಕೃತಿಯ ಜೊತೆಗೆ ತಮ್ಮ ಕಲೆ ಮತ್ತು ಸಂಸ್ಕೃತಿ, ಭಾಷೆಯನ್ನು ಉಳಿಸಿಕೊಂಡು ನಾಡಿನ ಕೀರ್ತಿ ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಮೈಸೂರಿನಲ್ಲಿ 12,000 ಕುಟುಂಬಗಳ 65,000 ಜನಸಂಖ್ಯೆ ಇರುವ ಕರಾವಳಿ ಜಿಲ್ಲೆಗಳ ಜನರು ನಾನಾ ಉದ್ಯಮಗಳಲ್ಲಿ ತೊಡಗಿದ್ದು, ಅವರಿಗೆ ನಗರಪಾಲಿಕೆಯಿಂದ ಅವರ ಉದ್ಯಮಗಳಿಗೆ ಪರವಾನಗಿ ಇನ್ನಿತರೆ ಕಾರ್ಯಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಮೇಯರ್ ಭರವಸೆ ನೀಡಿದರು.

ಚಲನಚಿತ್ರ ಸಂಗೀತ ನಿರ್ದೇಶಕ ಗುರುಕಿರಣ್ ಮಾತನಾಡಿ, ಕಲೆಗೆ ಹೆಸರಾದ ಕರ್ನಾಟದಲ್ಲಿ ಮೈಸೂರು ಕಲೆಂತು ತವರೂರು ಎನಿಸಿದೆ. ಇಂತಹ ಸಾಂಸ್ಕೃತಿಕ ಕ್ಷೇತ್ರ ಮೈಸೂರಿನಲ್ಲಿ ಕರಾವಳಿ ಜನರು ಬಹಳ ಖುಷಿಯಿಂದ ಇದ್ದಾರೆ. ಮೈಸೂರು ಮಹಾರಾಜರು ಕಲೆ, ಕಲಾವಿದರನ್ನು ಪ್ರೋತ್ಸಾಹಿಸಿದ್ದರು. ಅದರಿಂದಾಗಿ ಮೈಸೂರಿನಲ್ಲಿ ಕಲೆ, ಸಂಸ್ಕೃತಿ, ಸಾಹಿತ್ಯ ಉಳಿದಿದೆ. ಇಂತಹ ಮೈಸೂರಿನಲ್ಲಿ ಕರಾವಳಿ ಜನರು ಪ್ರೀತಿ, ವಿಶ್ವಾಸ ಗಳಿಸಿ, ಬದುಕು ನಡೆಸುತ್ತಿದ್ದಾರೆ. ಜೊತೆಗೆ ಕರ್ನಾಟಕದ ಉಪ ಭಾಷೆಗಳಾದ ತಮ್ಮ ತುಳು–ಕೊಡವ ಭಾಷೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುತ್ತಿದ್ದಾರೆ. ಮಂಗಳೂರಿನಲ್ಲಿ ಪ್ರಸಿದ್ಧವಾದ ಬಲೆ ತೆಲಿಪಾಲೆ ಸ್ಪರ್ಧೆಯನ್ನು ಇದೇ ಮೊದಲ ಬಾರಿಗೆ ಮಂಗಳೂರಿನಿಂದ ಆಚೆಗೆ ಮೈಸೂರಿನಲ್ಲಿ ನಡೆಸಲಾಗುತ್ತಿರುವುದು ಹೆಮ್ಮೆ ಪಡಬೇಕಾದ ವಿಚಾರ ಎಂದರು.

ಅಧ್ಯಕ್ಷತೆ ವಹಿಸಿದ್ದ ಒಕ್ಕೂಟದ ಅಧ್ಯಕ್ಷ ಗ್ರೇಶಿಯನ್ ರೋಡ್ರಿಗಸ್ ಮಾತನಾಡಿ, ಎಲ್ಲಾ ಜಾತಿ, ಜನಾಂಗ, ಧರ್ಮದವರನ್ನು ಒಳಗೊಂಡಿರುವ ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗಳ ಒಕ್ಕೂಟವು ದಕ್ಷಿಣ ಕನ್ನಡದ ಸುಳ್ಯದಿಂದ ಉತ್ತರ ಕನ್ನಡದ ಶಿರಸಿವರೆಗೂ ಕರಾವಳಿ ಜನರನ್ನು ಒಂದು ಕಡೆ ತರುವ ಉದ್ದೇಶ ಹೊಂದಿದೆ. ಮುಂದೆ ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದು, ಮುಂದಿನ ತಿಂಗಳು ಮೈಸೂರು ಜೈಲಿನಲ್ಲಿ ಚರ್ಮರೋಗ ತಪಾಸಣಾ ಶಿಬಿರವನ್ನು ಆಯೋಜಿಸಲಿದೆ ಎಂದರು.

ನಮ್ಮ ಆಹಾರ, ಸಂಸ್ಕೃತಿ, ಭಾಷೆಗೆ ಒತ್ತು ಕೊಟ್ಟು ಒಕ್ಕೂಟವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಬಹುದೊಡ್ಡ ಜವಾಬ್ದಾರಿ ತಮ್ಮ ಮೇಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉದ್ಯಮಿ ಡಾ.ಸುರೇಶ್ ಶೆಟ್ಟಿ ಗುರ್ಮೆ, ಡಾ.ಶಿವಶರಣ ಶೆಟ್ಟಿ, ಒಕ್ಕೂಟದ ಉಪಾಧ್ಯಕ್ಷರಾದ ಎಂ.ಕೆ.ಪುರಾಣಿಕ, ಡಾ.ಸುಧೀರ್‌ಶೆಟ್ಟಿ, ಡಾ.ಲಕ್ಷ್ಮಿನಾರಾಯಣ ಶೆಣೈ, ರತ್ನರಾಜ್, ನಾರಾಯಣ ವಿ.ಹೆಗ್ಡೆ ಇನ್ನಿತರರು ಉಪಸ್ಥಿತರಿದ್ದರು.

ಡಾ.ಪುನೀತ್ ರಾಜ್‌ಕುಮಾರ್ ಮೊದಲ ವರ್ಷದ ಸ್ಮರಣೆ; ನೂರಾರು ಮಂದಿಗೆ ಅನ್ನಸಂತರ್ಪಣೆ

# ಜನಪರ ಕಾರ್ಯಗಳಲ್ಲಿ ತಂದೆಯನ್ನೂ ಮೀರಿಸಿದ ಅಪ್ಪು

## ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಮತ

ಮೈಸೂರು, ಅ.30(ಆರ್‌ಕೆಬಿ)– ವರ್ಷದ ಹಿಂದೆ ಅಗಲಿದ ಡಾ.ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಸ್ಮರಣಾರ್ಥ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗ ಭಾನುವಾರ ಮೈಸೂರಿನ ಬೋಗಾದಿ ರಿಂಗ್‌ರಸ್ತೆ ಜಂಕ್ಷನ್ ಕೆಂಪೇಗೌಡ ವೃತ್ತದ ಬಳಿ ಸಾರ್ವಜನಿಕರಿಗೆ ಅನ್ನದಾನ ಏರ್ಪಡಿಸಿತ್ತು.



ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಕರ್ನಾಟಕ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರು ಡಾ.ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಬಳಿಕ ಅನ್ನದಾನಕ್ಕೆ ಚಾಲನೆ ನೀಡಿದರು. ಸುಮಾರು 3 ಸಾವಿರಕ್ಕೂ ಹೆಚ್ಚು ಮಂದಿಗೆ ಮಾಂಸಾಹಾರ ವಿತರಿಸಿದರು. ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿರುವ ಪುನೀತ್ ರಾಜ್‌ಕುಮಾರ್ ಅಗಲಿ ವರ್ಷ ಕಳೆದರೂ ಅಂದಿನಿಂದಲೂ ನಗರದ ರಸ್ತೆಗಳಲ್ಲಿ ಅಭಿಮಾನಿಗಳು ಹಾಕಿದ್ದ ಭಾವಚಿತ್ರಗಳನ್ನು ತೆಗೆಯಲು ಯಾರಿಗೂ ಮನಸ್ಸಾಗಿಲ್ಲ ಇದು ಅಪ್ಪು ಅವರ ಜನಪ್ರಿಯತೆಗೆ ಸಾಕ್ಷಿ ಅವರು ಮಾಡಿರುವ ಜನಪರ ಕಾರ್ಯಗಳಲ್ಲಿ ತಂದೆ ರಾಜಕುಮಾರ್ ಅವರನ್ನೂ ಮೀರಿಸಿದ್ದಾರೆ. ಸಮಾಜಕ್ಕೆ ಅಪ್ಪು ನೀಡಿದ ಕೊಡುಗೆ ಅಪಾರ ಹಾಗಾಗಿಯೇ ಅವರು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಸ್ಮರಿಸಿದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಎಲ್ಲರಿಗೂ ಮಾದರಿಯಾಗಿರುವ ಪುನೀತ್ ರಾಜಕುಮಾರ್ ಸಾವಿನ ನಂತರವೂ ಅವರ ಹೆಸರು ಸಮಾಜಮುಖಿ ಕಾರ್ಯಗಳ ಮೂಲಕ ಜೀವಂತವಾಗಿದೆ ಅವರು ಮಾಡಿದ ಜನಪರ ಕೆಲಸಗಳನ್ನು ಆದರ್ಶವಾಗಿ ಇಟ್ಟುಕೊಂಡು ಎಲ್ಲರೂ ಅವರ ದಾರಿಯಲ್ಲಿ ನಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಲ್ಟಿಪಲ್ ಕೌನ್ಸಿಲ್ ಮಾಜಿ ಚೇರ್ ಪರ್ಸನ್ ನಾಗರಾಜ್.ವಿ.ಬೈರಿ, ಬೋಗಾದಿ ಗ್ರಾಪಂ.ಸದಸ್ಯ ಕೆ.ಚಂದ್ರಶೇಖರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮುಖಂಡರಾದ ರವಿ, ಕುಳ್ಳೇಗೌಡ, ವೆಂಕಟೇಶ್, ಚಂದ್ರಶೇಖರ್, ಸುರೇಶ್, ಮಹದೇವ್ರು, ನಟೇಶ್, ಆರ್.ಸಿ.ರವಿ ಇನ್ನಿತರರು ಉಪಸ್ಥಿತರಿದ್ದರು.

## ಕ್ಲೀನ್ ಇಂಡಿಯಾ ಮುಕ್ತಾಯ ಸಮಾರಂಭ

ಮೈಸೂರು, ಅ.30–ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ, ಕನಕ ಶಕ್ತಿ ಮಹಿಳಾ ಕ್ಷೇಮಾಭಿವೃದ್ಧಿ ಹಾಗೂ ಕರ್ನಾಟಕ ಪಬ್ಲಿಕ್ ಶಾಖೆಯ ಆಶ್ರಯದಲ್ಲಿ ನಾಳೆ (ಅ.31) ಬೆಳಗ್ಗೆ 8 ಗಂಟೆಗೆ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ಜನ್ಮ ದಿನಾಚರಣೆ, ರಾಷ್ಟ್ರೀಯ ಏಕತಾ ದಿವಸ್ ಅಂಗವಾಗಿ ಕ್ಲೀನ್ ಇಂಡಿಯಾ ಕಾರ್ಯಕ್ರಮದ ಮುಕ್ತಾಯ ಸಮಾರಂಭವನ್ನು ರಾಜೇಂದ್ರ ನಗರದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಏರ್ಪಡಿಸಲಾಗಿದೆ. ಶಾಸಕ ತನ್ವೀರ್ ಸೇಠ್ ಕಾರ್ಯಕ್ರಮ ಉದ್ಘಾಟಿಸುವರು. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎನ್.ಎಂ. ವಿಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸುವರು. ಉಪ ಪ್ರಾಂಶುಪಾಲರಾದ ಶ್ರೀಮತಿ ಶ್ವೇತಾ, ಶಾಲಾ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಮಹದೇವ ಎನ್.ಎಂ., ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಶರ್ಮಿಲ, ಕಾರ್ಪೊರೇಟರ್ ಪ್ರದೀಪ್ ಚಂದ್ರ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

# ಎಂಇಎಸ್ ಸಂಘಟನೆ ನಿಷೇಧಕ್ಕೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಅ.30(ಆರ್‌ಕೆಬಿ)– ಕನ್ನಡ ರಾಜ್ಯೋತ್ಸವ ದಿನವಾದ ನ.1ರಂದು ಕರಾಳ ದಿನಾಚರಣೆ ಆಚರಿಸುವ ಎಂಇಎಸ್ ಸಂಘಟನೆಯನ್ನು ಕೂಡಲೇ ನಿಷೇಧಿಸುವಂತೆ ಕನ್ನಡ ಚಳವಳಿ ನಾಯಕ, ಮಾಜಿ ಶಾಸಕ ವಾಟಾಳ್ ನಾಗರಾಜ್ ಒತ್ತಾಯಿಸಿದರು.



ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಪ್ರತಿಭಟನೆ ನಡೆಸಿದ ಅವರು, ಬಳಿಕ ಮಾಧ್ಯಮದೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಹಾಗಾಗಿ ನ.1ರಿಂದ ಹಿಂದಿ, ತಮಿಳು, ಮಲಯಾಳಂ, ಭಾಷೆಗಳ ಚಿತ್ರ ಪ್ರದರ್ಶನವನ್ನು ರದ್ದುಗೊಳಿಸಬೇಕು. ಇಲ್ಲದಿದ್ದರೆ ಚಿತ್ರಮಂದಿರಗಳಿಗೆ ಬೆಂಕಿ ಬೀಳುತ್ತದೆ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕದಲ್ಲಿ ಮೊದಲು ಕನ್ನಡ ಬಳಸಬೇಕು, ಅನಂತರ ಬೇರೆ ಭಾಷೆಯನ್ನಾಡಬೇಕು, ಕೇಂದ್ರ ಪುರಸ್ಕೃತ ಹುದ್ದೆಗೆ ಕನ್ನಡ ಭಾಷೆಗೆ ಆದ್ಯತೆ ನೀಡಬೇಕು. ಕನ್ನಡಿಗರ ಮೇಲೆ ಹಿಂದಿ ಹೇರಿಕೆ ಖಂಡಿತ ಸಹಿಸಲಾರೆವು. ಅಮಿತ್ ಷಾ ಅವರ ರಾಜ್ಯದಲ್ಲಿ ಹಿಂದಿ ಹೇರಿಕೆ ಮಾಡಲಿ, ನಮಗೆ ಬೇಡ ಎಂದು ಆಗ್ರಹಿಸಿದರು.

ಕೋಟಿ ಕಂಠ ಗಾಯನ ಬೂಟಾಟಿಕೆ ಕಾರ್ಯಕ್ರಮ. ಇದರಿಂದಾದ ಪ್ರಯೋಜನ ವೇನು? ಅದರ ಬದಲು ರಾಜ್ಯದಿಂದ ಕೈ ಬಿಟ್ಟು ಹೋಗಿರುವ ಊಟಿ, ತಾಳವಾಡಿ, ಕಾಸರಗೋಡು, ಸೊಲ್ಲಾಪುರ ಮುಂತಾದ ಪ್ರದೇಶಗಳನ್ನು ರಾಜ್ಯಕ್ಕೆ ಸೇರಿಸುವ ಕ್ರಮ ಕೈಗೊಳ್ಳಲಿ ಎಂದು ಒತ್ತಾಯಿಸಿದರು.

ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಬದಲಾವಣೆ ಕುರಿತು ಪ್ರಸ್ತಾಪಿಸಿದ ಅವರು, ಇದನ್ನು ರಾಜಮನೆತನ ವಿರೋಧಿಸಬೇಕಿತ್ತು. ಬೇಕಾದರೆ ಹೊಸದಾಗಿ 4 ರೈಲಿಗೆ ಒಡೆಯರ ಹೆಸರಿಟ್ಟಿದ್ದರೂ ಸ್ವಾಗತವಿತ್ತು ಆದರೆ, ಟಿಪ್ಪು ಹೆಸರು ತೆಗೆದು ಮಹಾರಾಜರ ಹೆಸರು ಇಡುವ ಅವಶ್ಯಕತೆ ಇರಲಿಲ್ಲ. ಈ ಬಗ್ಗೆ ಮೈಸೂರು ಮಹಾರಾಜರು ಆಕ್ಷೇಪ ವ್ಯಕ್ತಪಡಿಸಿದ್ದರೆ ಅವರ ಗೌರವ ಹೆಚ್ಚಾಗುತ್ತಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಹೋರಾಟಗಾರರಾದ ತಾಯೂರು ವಿಠಲಮೂರ್ತಿ, ಮೂಗೂರು ನಂಜುಂಡಸ್ವಾಮಿ ಭಾಗವಹಿಸಿದ್ದರು.

## ಜಯಪುರ ಬಳಿ ಬೋನಿಗೆ ಬಿದ್ದ ಚಿರತೆ

ಮೈಸೂರು, ಅ.30(ಎಂಟಿವೈ)–ಸಾಕುಪ್ರಾಣಿಗಳನ್ನು ಕೊಂದು ಉಪಟಳ ನೀಡುತ್ತಿದ್ದ ಹೆಣ್ಣು ಚಿರತೆಯೊಂದು ಅರಣ್ಯ ಇಲಾಖೆಯ ಸಿಬ್ಬಂದಿ ಇಟ್ಟಿದ್ದ ಬೋನಿಗೆ ಬಿದ್ದು ಸೆರೆ ಸಿಕ್ಕಿದೆ.



ಮೈಸೂರು ತಾಲೂಕಿನ ಜಯಪುರ ಹೋಬಳಿಯ ನನಗಳ್ಳಿ ಗ್ರಾಮ ಸೇರಿದಂತೆ ವಿವಿಧೆಡೆ ಕಳೆದ ಕೆಲವು ದಿನಗಳಿಂದ ಚಿರತೆಯೊಂದು ಪ್ರತ್ಯಕ್ಷವಾಗಿ ಜನರಲ್ಲಿ ಭಯದ ವಾತಾವರಣ ಮೂಡಿಸಿತ್ತು. ಗ್ರಾಮಸ್ಥರ ಕೋರಿಕೆ ಮೇರೆಗೆ ಅರಣ್ಯ ಇಲಾಖೆ ಸಿಬ್ಬಂದಿಗಳು ಗ್ರಾಮದ ಮರಿದೇವಯ್ಯ ಎಂಬುವರ ಜಮೀನಿನಲ್ಲಿ ಬೋನೊಂದನ್ನು ಇಟ್ಟಿದ್ದರು. ಆಹಾರ ಅರಸಿ ಬಂದ ಎರಡು ವರ್ಷದ ಹೆಣ್ಣು ಚಿರತೆ ಮುಂಜಾನೆ ಬೋನಿಗೆ ಬಿದ್ದಿದೆ. ಸೆರೆ ಸಿಕ್ಕ ಚಿರತೆಯನ್ನು ಅರಣ್ಯ ಇಲಾಖೆಯ ಸಿಬ್ಬಂದಿಗಳು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಅಂತರಸಂತೆ ವಲಯದ ಅರಣ್ಯದಲ್ಲಿ ಬಿಡುಗಡೆ ಮಾಡಿದ್ದಾರೆ.

# ಸಿ–295 ಸಾರಿಗೆ ವಿಮಾನ ತಯಾರಿಕಾ ಘಟಕಕ್ಕೆ ಪ್ರಧಾನಿ ಮೋದಿ ಶಂಕುಸ್ಥಾಪನೆ

ವಡೋದರಾ (ಗುಜರಾತ್), ಅ.30– ಗುಜರಾತ್ ರಾಜ್ಯ ಪ್ರವಾಸದಲ್ಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ವಡೋದರಾದಲ್ಲಿ ಸಿ–295 ಸಾರಿಗೆ ವಿಮಾನ ತಯಾರಿಕಾ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.



ಈ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರನ್ನು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಟಾಟಾ ಸನ್ಸ್ ಅಧ್ಯಕ್ಷ ಎನ್ ಚಂದ್ರಶೇಖರನ್ ಅವರು ಸ್ಮರಣಿಕೆ ನೀಡಿ ಗೌರವಿಸಿದರು. ಭಾರತೀಯ ವಾಯುಪಡೆಗಾಗಿ ಟಾಟಾ–ಏರ್‌ಬಸ್ ಸಿ–295 ಸಾರಿಗೆ ವಿಮಾನವನ್ನು ತಯಾರಿಸಲಿದೆ ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, 'ಇಂದು ದೇಶದಲ್ಲೇ ಪ್ರಥಮ ಬಾರಿಗೆ ಖಾಸಗಿ ವಲಯದಿಂದ ವಿಮಾನ ತಯಾರಿಕಾ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುತ್ತಿದ್ದು, ರಕ್ಷಣಾ ಕ್ಷೇತ್ರಕ್ಕೆ ಇಡೀ ದೇಶಕ್ಕೆ ಇದು ಹೆಮ್ಮೆಯ ವಿಚಾರವಾಗಿದೆ ಎಂದು ಹೇಳಿದರು.

ಇದು ಕೇವಲ ಅಡಿಪಾಯವಲ್ಲ. ರಕ್ಷಣಾ ವಲಯದ 'ಆತ್ಮನಿರ್ಭರ್ತ' ಪ್ರಯಾಣದಲ್ಲಿ ಒಂದು ಮೈಲಿಗಲ್ಲಾಗಿದೆ. ಈ ಸೌಲಭ್ಯದಲ್ಲಿ ತಯಾರಿಸಲಾದ ಸಿ–295 ವಿಮಾನವು ಉನ್ನತ ಸಾಮರ್ಥ್ಯ ಮತ್ತು ಜಾಗತಿಕ ಗುಣಮಟ್ಟವನ್ನು ಹೊಂದಿರುವ ಅತ್ಯಾಧುನಿಕ ವಿಮಾನವಾಗಿದೆ. ಇದು ಭಾರತೀಯ ವಾಯುಪಡೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು. ಸಿ–295ಎಂಡಬ್ಲ್ಯೂ 5–10 ಟನ್ ಸಾಮರ್ಥ್ಯ ಮತ್ತು ಸಮಕಾಲೀನ ತಂತ್ರಜ್ಞಾನವನ್ನು ಹೊಂದಿರುವ ಸಾರಿಗೆ ವಿಮಾನವಾಗಿದೆ. ಸುಮಾರು 40–45 ಪ್ಯಾರಾಟ್ರೂಪರ್‌ಗಳನ್ನು ಅಥವಾ ಸುಮಾರು 70 ಪ್ರಯಾಣಿಕರನ್ನು ಹೊತ್ತೊಯ್ಯಬಲ್ಲದು. ಅಡ್ವಾನ್ಸ್ಡ್ ಲ್ಯಾಂಡಿಂಗ್ ಗ್ರೌಂಡ್ಸ್ ಮತ್ತು ಸಿದ್ಧವಿಲ್ಲದ ರನ್‌ವೇಗಳಿಂದಲೂ ಇದು ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಅಲ್ಲದೆ, ಇದು ತ್ವರಿತ ಪ್ರತಿಕ್ರಿಯೆಗಾಗಿ ಮತ್ತು ಪಡೆಗಳು ಮತ್ತು ಸರಕುಗಳನ್ನು ಕೆಳಗಿಳಿಸಲು ವಿಮಾನದ ಹಿಂಭಾಗದಲ್ಲಿ ರಾಂಪ್ ಬಾಗಿಲು ಇರಲಿದೆ. ಅರೆ–ಸಿದ್ಧ ಮೇಲ್ಮೈಗಳಿಂದ ಸಣ್ಣ ಟೇಕ್ ಆಫ್ ಅಥವಾ ಲ್ಯಾಂಡಿಂಗ್ ಅದರ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

ಸಿ–295 ವಿಮಾನ ತಯಾರಿಕಾ ಸೌಲಭ್ಯವನ್ನು ಪ್ರಾರಂಭಿಸುವುದರೊಂದಿಗೆ ಅಂತಹ ವಿಮಾನಗಳನ್ನು ತಯಾರಿಸುವ ಸಾಮರ್ಥ್ಯದೊಂದಿಗೆ ಭಾರತವು 12ನೇ ರಾಷ್ಟ್ರವಾಗಲಿದೆ. ಪ್ರಸ್ತುತ, ಯುಎಸ್, ಜಪಾನ್, ಯುಕೆ, ರಷ್ಯಾ, ಫ್ರಾನ್ಸ್, ಇಟಲಿ, ಸ್ಪೇನ್, ಉಕ್ರೇನ್, ಬ್ರೆಜಿಲ್, ಚೀನಾ ಮತ್ತು ಜಪಾನ್ ಆ ಸಾಮರ್ಥ್ಯವನ್ನು ಹೊಂದಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಪತ್ರಕರ್ತರಿಗೆ ಉಡುಗೊರೆ: ಸಿಎಂ ಬೊಮ್ಮಾಯಿ ವಿರುದ್ಧ ಪ್ರಕರಣ ದಾಖಲಾಗಬೇಕು

## ವಿಪಕ್ಷ ನಾಯಕ ಸಿದ್ದರಾಮಯ್ಯ ಒತ್ತಾಯ

ಬೆಂಗಳೂರು, ಅ.30–ಪತ್ರಕರ್ತರಿಗೆ ಮುಖ್ಯಮಂತ್ರಿಗಳ ಕಚೇರಿಯಿಂದ ಉಡುಗೊರೆ ನೀಡಿರುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಪ್ರಕರಣ ದಾಖಲಿಸಬೇಕು. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಅಲ್ಲದೇ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಡಗೂಡಿ ಜಂಟಿ ಸುದ್ದಿಗೋಷ್ಠಿ ನಡೆಸಿದ ಅವರು, ಮಾಧ್ಯಮ ಮಿತ್ರರಿಗೆ ಮುಖ್ಯಮಂತ್ರಿಗಳು ಲಕ್ಷಾಂತರ ರೂ. ಉಡುಗೊರೆ ನೀಡಿರುವುದು ಸತ್ಯವೇ, ಸುಳ್ಳೇ ಎಂಬುದರ ಬಗ್ಗೆ ತನಿಖೆಯಾಗಬೇಡವೇ? ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿಗಳು ಕೊಟ್ಟ ಹಣವನ್ನು ಮಾಧ್ಯಮ ಮಿತ್ರರು ವಾಪಸ್ ಕೊಟ್ಟಿದ್ದೀರಿ, ಅದು ಸಂತೋಷದ ವಿಚಾರ. ಹಾಗೆಯೇ ಈ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲುವ ಕೆಲಸವನ್ನು ಮಾಧ್ಯಮ ಮಿತ್ರರು ಮಾಡಬೇಕು ಎಂದು ಮನವಿ ಮಾಡಿದರು. ನಾವು ಕೇಳಿದರೆ ಸರ್ಕಾರ ದಾಖಲೆ ಕೇಳುತ್ತದೆ, ತನಿಖೆಯನ್ನೂ ಮಾಡುವುದಿಲ್ಲ ಎಂದ ಅವರು, ಈ ಬಗ್ಗೆ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕು. ನಮ್ಮ ಕಾಲದಲ್ಲಿ ಭ್ರಷ್ಟಾಚಾರ ನಡೆದಿದ್ದರೆ, ಅದರ ಬಗ್ಗೆಯೂ ತನಿಖೆ ನಡೆಯಲಿ ಎಂದರು.

ಈ ಹಿಂದೆ ಪತ್ರಿಕೆಯೊಂದರಲ್ಲಿ ಪೊಲೀಸ್ ಇಲಾಖೆಯಲ್ಲಿ ಯಾವ ಹುದ್ದೆಯ ವರ್ಗಾವಣೆಗೆ ಎಷ್ಟು ಎಂದು ಹೋಟೇಲ್‌ಗಳ ತಿಂಡಿ ಮೆನ್ಯುವಿನಂತೆ ಲಂಚ ನಿಗದಿ ಮಾಡಿರುವುದು ಪ್ರಕಟವಾಗಿತ್ತು, ಆಗ ಪ್ರಕಟವಾದ ಸುದ್ದಿ ಈಗ ಎಂಟಿಬಿ ನಾಗರಾಜ್ ಅವರಿಂದ ಸಾಬೀತಾಗಿದೆ. ಎಂಟಿಬಿ ನಾಗರಾಜ್ ಅವರು ನಂದೀಶ್ ಎಂಬ ಪೊಲೀಸ್ ಅಧಿಕಾರಿಯ ಅಂತಿಮ ದರ್ಶನ ಪಡೆಯಲು ಹೋದ ಸಂದರ್ಭದಲ್ಲಿ '70–80 ಲಕ್ಷ ಕೊಟ್ಟು ಕೆ.ಆರ್ ಪುರಂ ಪೊಲೀಸ್ ಠಾಣೆಗೆ ವರ್ಗಾವಣೆ ಪಡೆದು ಬಂದರೆ ಹೃದಯಾಘಾತ ಆಗದೆ ಇರುತ್ತಾ?' ಎಂದು ಹೇಳಿದ್ದಾರೆ. ಇದು ಸಾಕ್ಷ್ಯ ಅಲ್ಲವಾ? ಇದಕ್ಕಿಂತ ಬೇರೆ ಸಾಕ್ಷಿ ಇನ್ನೇನು ಬೇಕು? ಈಗಿನ ಸರ್ಕಾರದಲ್ಲಿ ನಡೆಯುತ್ತಿರುವುದನ್ನು ಎಂಟಿಬಿ ಹೇಳಿದ್ದಾರೆ. ಇದಕ್ಕೆ ಸರ್ಕಾರವೇ ಹೊಣೆ, ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರೇ ನೇರ ಹೊಣೆ ಎಂದರು.

ನಂದೀಶ್ ಅವರು 70–80 ಲಕ್ಷ ಸಾಲ ಮಾಡಿ ಲಂಚ ನೀಡಿದ್ದಾರೆ. ಈ ಹಣವನ್ನು ಯಾರಿಗೆ ಕೊಟ್ಟಿದ್ದಾರೆ ಎಂಬುದು ಗೊತ್ತಾಗಬೇಕೋ? ಬೇಡ್ವೋ? ಈ ಹಣ ಮುಖ್ಯಮಂತ್ರಿಗಳಿಗೆ ಹೋಗಿದಿಯಾ? ಗೃಹ ಸಚಿವರಿಗೆ ಹೋಗಿದೆಯಾ? ಅಥವಾ ಸ್ಥಳೀಯ ಶಾಸಕರಿಗೆ ನೀಡಿದ್ದಾರ? ಎಂಬುದು ಗೊತ್ತಾಗಬೇಕು ತಾನೆ? ಎಂದು ಪ್ರಶ್ನಿಸಿದ ಅವರು, ಎಂಟಿಬಿ ನಾಗರಾಜ್ ಅವರಿಗೆ ನಂದೀಶ ಅವರು ಚೆನ್ನಾಗಿ ಪರಿಚಯವಿರಬೇಕು ಅನ್ನಿಸುತ್ತೆ, ಇಲ್ಲದಿದ್ದರೆ ಅವರೇಕೆ ಅಂತಿಮ ದರ್ಶನಕ್ಕೆ ಹೋಗುತ್ತಿದ್ದರು? ಎಂಟಿಬಿ ನಾಗರಾಜ್ ಅವರ ಬಳಿ ತಾನು 70–80 ಲಕ್ಷ ಕೊಟ್ಟು ಕೆಆರ್ ಪುರಂ ಠಾಣೆಗೆ ಬಂದಿದ್ದೀನಿ ಎಂದು ಹೇಳಿರಬಹುದು. ಇದನ್ನು ಎಂಟಿಬಿ ಬಾಯಿ ಬಿಟ್ಟಿದ್ದಾರೆ. ಇದು ಪ್ರಬಲವಾದ ಸಾಕ್ಷಿ ಕೂಡ ಹೌದು ಎಂದರು.

ಬಸವರಾಜ್ ಅಮರಗೋಳ ಎಂಬ ಗುತ್ತಿಗೆದಾರ 20–10–2022ರಲ್ಲಿ ರಾಷ್ಟ್ರಪತಿಗಳಿಗೆ ದಯಾಮರಣಕ್ಕೆ ಪತ್ರ ಬರೆದಿದ್ದಾರೆ. ಕೊರೊನಾ ಮೊದಲ ಅಲೆ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಸೇರಿದಂತೆ ಹಲವು ಕಡೆ ಉಪಕರಣಗಳನ್ನು ನೀಡಿದ್ದಾರೆ. ಇದರಲ್ಲಿ 20% ಮಾತ್ರ ಬಿಲ್ ಅನ್ನು ನೀಡಿದ್ದಾರೆ. ಈ ಬಗ್ಗೆ ಅವರು ಪ್ರಧಾನಿಗಳಿಗೆ ಪತ್ರ ಬರೆದಿದ್ದಾರೆ, ಎರಡು ಬಾರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದಾರೆ, ಗ್ರಾಮೀಣಾಭಿವೃದ್ಧಿ ಇಲಾಖೆ ಮುಖ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ್ದಾರೆ, ಇದರಿಂದ ಯಾವ ಉಪಯೋಗವೂ ಆಗಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇವರ ಬಳಿ 30–40% ಲಂಚ ಇದ್ದರೆ ಮಾತ್ರ ಬಿಲ್ ಕೊಡಲು ಸಾಧ್ಯ ಎಂದು ಹೇಳಿದ್ದಾರೆ. ಪಾಪ ಇಂಥವರನ್ನು ಆತ್ಮಹತ್ಯೆ ಮಾಡಿಕೊಳ್ಳುವಂತ ಪರಿಸ್ಥಿತಿಗೆ ತಂದಿದ್ದಾರೆ. ಪ್ರಕರಣ ಬೆಳಕಿಗೆ ಬಂದ ನಂತರ ಮುಖ್ಯಮಂತ್ರಿಗಳೇ ಕರೆ ಮಾಡಿ ಈ ದೂರಿಗೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಳ್ಳಬೇಡಿ ಎಂದು ಪೊಲೀಸರಿಗೆ ಸೂಚಿಸಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಬಸವರಾಜ ಅಮರಗೋಳ ಅವರು ಪತ್ರದಲ್ಲಿ ಬರೆದುಕೊಂಡಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಮೈಸೂರು ಮಿತ್ರ ಸೋಮವಾರ 31 ಅಕ್ಟೋಬರ್ 2022

# ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

## ಕಾಂಗ್ರೆಸ್ ಅವಧಿಯಲ್ಲಿ ಪಟ್ಟಣದ ಅಭಿವೃದ್ಧಿಗೆ 100 ಕೋಟಿ ಬಿಡುಗಡೆ: ಶಾಸಕ ಡಾ.ಯತೀಂದ್ರ

ತಿ.ನರಸೀಪುರ, ಅ.30– ನನ್ನ ತಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ಪಟ್ಟಣದ ಅಭಿವೃದ್ಧಿಗಾಗಿ 100 ಕೋಟಿ ರೂ.ಗೂ ಹೆಚ್ಚಿನ ಅನುದಾನ ನೀಡಿದ್ದರು ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ 1ನೇ ವಾರ್ಡ್‌ನ ರಾಚಪ್ಪಾಜಿ ಬಡಾವಣೆಯಲ್ಲಿ ಪುರಸಭೆ ವತಿಯಿಂದ 13.74 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುವ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪಟ್ಟಣದ ಪುರಸಭೆಯಲ್ಲಿ ಸಾಕಷ್ಟು ಸಮಸ್ಯೆಗಳಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಿ.ನರಸೀಪುರದ ಅಭಿವೃದ್ಧಿಗೆ 100 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದರಿಂದ ವಿವಿಧ ಬಡಾವಣೆಗಳ ಚರಂಡಿ, ಸಿಸಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಯಿತು. ಪಟ್ಟಣದಲ್ಲಿ 24/7 ಕುಡಿಯುವ ನೀರಿನ ಸೌಕರ್ಯ ಸೇರಿದಂತೆ ಬಹಳಷ್ಟು ಅಭಿವೃದ್ಧಿ ಕೆಲಸ ಮಾಡಲಾಗಿದೆ ಎಂದರು.

ಕಳೆದ 4 ವರ್ಷಗಳಿಂದ ಸರ್ಕಾರದಿಂದ ಹೆಚ್ಚಿನ ಅನುದಾನ ಬಾರದ ಹಿನ್ನೆಲೆಯಲ್ಲಿ ಅಭಿವೃದ್ಧಿಗೆ ಸ್ವಲ್ಪ



ಮಟ್ಟಿನ ಹಿನ್ನಡೆಯಾಗಿದೆ. ಪಟ್ಟಣವು ಪುರಸಭೆಯಾಗಿ ಮೇಲ್ದರ್ಜೆಗೇರಿದ ನಂತರ ನಗರೋತ್ಥಾನ ಇಲಾಖೆಯಿಂದ ಹೆಚ್ಚಿನ ಅನುದಾನ ಬಿಡುಗಡೆಯಾಗಬೇಕಿತ್ತು. ಆದರೆ ಈವರೆವಿಗೆ ಕೇವಲ 8 ಕೋಟಿ ರೂ. ಮಾತ್ರವೇ ಬಂದಿದ್ದು, ಸರ್ಕಾರದ ಮಾರ್ಗಸೂಚಿ ಮೇರೆಗೆ ಪಟ್ಟಣದ ರಸ್ತೆ ಅಭಿವೃದ್ಧಿಗೆ 3 ಕೋಟಿ ರೂ. ಮಾತ್ರ ವಿನಿಯೋಗ ಮಾಡಿ ಉಳಿಕೆ ಹಣವನ್ನು ಎಸ್‌ಸಿ/ಎಸ್ಟಿ ಸಮಾಜದ ಅಭಿವೃದ್ಧಿ, ವಿದ್ಯಾರ್ಥಿ ವೇತನ ಹಾಗೂ ಶಿಕ್ಷಣಕ್ಕೆ ಬಳಸಿಕೊಳ್ಳಲಾಗಿದೆ. ಶಾಸಕರ ಅನುದಾನದಡಿ ಹೆಚ್ಚುವರಿಯಾಗಿ ಪಟ್ಟಣದ ರಸ್ತೆ ಅಭಿವೃದ್ಧಿಗೆ 2 ಕೋಟಿ ರೂ. ನೀಡಿದ್ದೇನೆ ಎಂದ ಶಾಸಕರು, ಮುಂದಿನ ಬಾರಿ ನಮ್ಮದೇ ಸರ್ಕಾರ ಬರಲಿದ್ದು, ಹೆಚ್ಚಿನ ಅನುದಾನ ತಂದು ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದರು.

ಇದೇ ವೇಳೆ ತಿರುಮಕೂಡಲಿನ ನಾಯಕ ಜನಾಂಗದ ಯಜಮಾನ ನಟರಾಜು, ಹೊಸ ತಿರುಮಕೂಡಲು ವೃತ್ತದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಶಾಸಕರು ಪುತ್ಥಳಿ ನಿರ್ಮಾಣಕ್ಕೆ ಅನುಮತಿ ಪಡೆದಲ್ಲಿ ಶಾಸಕರ ಅನುದಾನದಡಿ ಹಣ ನೀಡುವುದಾಗಿ ಭರವಸೆ ನೀಡಿದರು.

ಪುರಸಭಾಧ್ಯಕ್ಷ ಮದನ್‌ರಾಜ್, ಮಾಜಿ ಅಧ್ಯಕ್ಷ ಸೋಮು, ಸದಸ್ಯರಾದ ರೂಪಾ, ಬಾದಾಮಿ ಮಂಜು, ನಂಜುಂಡಸ್ವಾಮಿ, ಪ್ರಕಾಶ್, ಸಿಸ್ಟಮ್ ಸಿದ್ದು, ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಕಾಂಗ್ರೆಸ್ ಹಿರಿಯ ಮುಖಂಡ ಸ್ವಾಮಿನಾಥಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ರಾಜು, ಯುವ ಮುಖಂಡ ಸಂದೇಶಸ್ವಾಮಿನಾಥ್, ಯಜಮಾನ ನಟರಾಜು, ಮುಖ್ಯಾಧಿಕಾರಿ ಬಸವರಾಜು, ಗುತ್ತಿಗೆದಾರ ರಂಗಸ್ವಾಮಿ ರೆಡ್ಡಿ, ಹಾಳೇಗೌಡ, ಆಪ್ತ ಸಹಾಯಕ ಪ್ರದೀಪ್, ಕಂದಾಯಾಧಿಕಾರಿ ಪುಟ್ಟಸ್ವಾಮಿ, ಪರಿಸರ ಅಭಿಯಂತರ ಲೋಕೇಶ್ವರಿ ಮತ್ತಿತರರಿದ್ದರು.

## ಸಾಲಬಾಧೆ: ರೈತ ಆತ್ಮಹತ್ಯೆ

ಭೇರ್ಯ, ಅ.30– ಸಾಲಬಾಧೆ ತಾಳಲಾರದೇ ರೈತರೊಬ್ಬರು ಕ್ರಿಮಿನಾಶಕದ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಾಲಿಗ್ರಾಮ ತಾಲೂಕಿನ ಸಾಲುಕೊಪ್ಪಲು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಲೇ.ಜವರೇಗೌಡರ ಪುತ್ರ ರಂಗಸ್ವಾಮಿ(30) ಆತ್ಮಹತ್ಯೆ ಮಾಡಿಕೊಂಡವರು. ಈತ ತನ್ನ 2 ಎಕರೆ ಜಮೀನಿನಲ್ಲಿ ತಂಬಾಕು, ರಾಗಿ, ಭತ್ತ ಬೆಳೆಯಲು ಭೇರ್ಯ ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್, ಸಹಕಾರ ಬ್ಯಾಂಕ್, ಫೈನಾನ್ಸ್ ಹಾಗೂ ಕೈ ಸಾಲ ಸೇರಿದಂತೆ 5 ಲಕ್ಷ ಸಾಲ ಮಾಡಿಕೊಂಡಿದ್ದರು. ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗದೇ ಸಾಲದ ಬಡ್ಡಿ ಕಟ್ಟಲು ಸಾಧ್ಯವಾಗಿರಲಿಲ್ಲ.

ಈ ಹಿನ್ನೆಲೆಯಲ್ಲಿ ನಿತ್ಯ ಮನೆಯಲ್ಲಿ ಜಗಳ ನಡೆಯುತ್ತಿತ್ತು ಅಲ್ಲದೇ ಪತ್ನಿ ಬಳಿ ಸಾಯುವುದಾಗಿ ಹೇಳುತ್ತಿದ್ದರು ಎನ್ನಲಾಗಿದೆ. ಶನಿವಾರ ಸಂಜೆ ಜಮೀನಿನಲ್ಲಿ ದವಸ ಧಾನ್ಯಗಳಿಗೆ ಹಾಕುವ ಕ್ರಿಮಿನಾಶಕದ ಮಾತ್ರೆ ಸೇವಿಸಿ ಒದ್ದಾಡುತ್ತಿದ್ದ ರಂಗಸ್ವಾಮಿ ಅವರನ್ನು ಕೂಡಲೇ ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಭಾನುವಾರ ಬೆಳಗ್ಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ರಂಗಸ್ವಾಮಿ ಅವರ ತಾಯಿ ಚಿಕ್ಕಮ್ಮ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ಕೋಟೆಯಲ್ಲಿ ಕೋಟಿ ಕಂಠ ಗಾಯನ

ಹೆಚ್.ಡಿ.ಕೋಟೆ, ಅ.30– ಪಟ್ಟಣದ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ಶಿಕ್ಷಣ ಇಲಾಖೆ ವತಿಯಿಂದ ಕೋಟಿ ಕಂಠ ಗಾಯನ ಕಾರ್ಯಕ್ರಮ ನಡೆಯಿತು.



ಕ್ಷೇತ್ರ ಶಿಕ್ಷಣಾಧಿಕಾರಿ ಉದಯ ಕುಮಾರ್ ಮಾತನಾಡಿ, ಕನ್ನಡ ನಾಡು, ನುಡಿ, ಭಾಷೆ ಬಗ್ಗೆ ಅಭಿಮಾನ ಬೆಳೆಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, 67ನೇ ಕನ್ನಡ ರಾಜ್ಯೋತ್ಸವವನ್ನು ವಿಶಿಷ್ಟವಾಗಿ ಆಚರಿಸಲು ಸರ್ಕಾರ ಕೋಟಿ ಕಂಠ ಗಾಯನ ಕಾರ್ಯಕ್ರಮ ಏರ್ಪಡಿಸಿರುವುದು ಹೆಮ್ಮೆಯ ವಿಚಾರ. ಕನ್ನಡ ಸಂಸ್ಕೃತಿ ಇಲಾಖೆ ನಿಗದಿಪಡಿಸಿದ ಕನ್ನಡ ಗೀತೆಗಳಾದ ಜೈ ಭಾರತ ಜನನಿಯ ತನುಜಾತೆ, ಬಾರಿಸು ಕನ್ನಡ ಡಿಂಡಿಮವ, ಉದಯವಾಗಲಿ ಚೆಲುವ ಕನ್ನಡ ನಾಡು, ಹಚ್ಚೇವು ಕನ್ನಡದ ದೀಪ, ವಿಶ್ವ ವಿನೂತನ ವಿದ್ಯಾ ಚೇತನ, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಗೀತೆಗಳನ್ನು ಹಾಡುವ ಮೂಲಕ ನಾಡ ನುಡಿ ಸಂಸ್ಕೃತಿಯನ್ನು ಕುರಿತು ವಿದ್ಯಾರ್ಥಿಗಳಿಗೆ ಅಭಿಮಾನ ಮೂಡಿಸುವುದು ಅಗತ್ಯವಾಗಿದೆ ಎಂದರು. ಇದೇ ಸಂದರ್ಭ ಬಾಲಕಿಯರ ಪ್ರೌಢಶಾಲಾ ಉಪಪ್ರಾಂಶುಪಾಲ ಮಂಜುನಾಥ್ ವಿದ್ಯಾರ್ಥಿಗಳಿಗೆ ಸಂಕಲ್ಪ ವಿಧಿ ಬೋಧಿಸಿದರು.

ತಾಪಂ ಇಓ ರಾಜೇಶ್ ಜೆರಾಲ್ಡ್, ಯೋಜನಾಧಿಕಾರಿ ರಂಗಸ್ವಾಮಿ, ಉಪ ತಹಸೀಲ್ದಾರ್ ಮಹೇಶ್, ಬಿಆರ್‌ಸಿ ಕೃಷ್ಣಯ್ಯ, ಬಿಆರ್‌ಪಿ ಮಹದೇವಯ್ಯ, ಶಿಕ್ಷಣ ಸಂಯೋಜಕರಾದ ಕೃಷ್ಣಮೂರ್ತಿ, ಗಿರೀಶ್‌ಮೂರ್ತಿ, ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸುದೀಪ್, ಉಪನ್ಯಾಸಕ ಶಿವಪ್ಪ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಹದೇವ, ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಪುರಸಭಾ ನಾಮ ನಿರ್ದೇಶನ ಸದಸ್ಯರಾದ ಕೆ.ಎನ್.ಮಹೇಶ್, ನಂದೀಶ್, ರಾಜು, ಬಸವರಾಜು ಇದ್ದರು.

## ಪ್ರಿಯಕರನೊಂದಿಗೆ ಮದುವೆಯಾದ ಪತ್ನಿ: ಮನನೊಂದು ಪತಿ ನೇಣಿಗೆ ಶರಣು

ಹುಣಸೂರು, ಅ.30– ಮನೆ ಬಿಟ್ಟು ಹೋದ ಪತ್ನಿ ಪ್ರಿಯಕರನೊಂದಿಗೆ ಮದುವೆಯಾಗಿರುವ ವಿಷಯ ತಿಳಿದು ಮನನೊಂದು ಪತಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕೊಯಮತ್ತೂರು ಕಾಲೋನಿ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಕೃಷ್ಣೇಗೌಡರ ಪುತ್ರ ಸುರೇಶ್ ಕುಮಾರ್(37) ಆತ್ಮಹತ್ಯೆ ಮಾಡಿಕೊಂಡವರು.



**ವಿವರ:** ಸುರೇಶ್ ಕುಮಾರ್ ಹಾಗೂ ಪತ್ನಿ ನೇತ್ರಾ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಸುರೇಶ್ ಕೂಲಿ ಕೆಲಸ ಮಾಡಿಕೊಂಡಿದ್ದ. ಪತ್ನಿ ನೇತ್ರ ಹುಣಸೂರಿನ ಮಾರೀಷ್ ಸ್ಪಿನ್ನರ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದರು. ಒಂದು ತಿಂಗಳ ಹಿಂದೆ ಪತ್ನಿ ನೇತ್ರ ಫ್ಯಾಕ್ಟರಿಗೆ ಹೋಗಿ ವಾಪಸ್ ಬಾರದ ಹಿನ್ನೆಲೆಯಲ್ಲಿ ಸುರೇಶ್ ಕುಮಾರ್ ಎಲ್ಲೆಡೆ ಹುಡುಕಾಡಿ, ಪತ್ತೆಯಾಗದ ಕಾರಣ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪತ್ನಿ ನಾಪತ್ತೆಯಾಗಿರುವ ಬಗ್ಗೆ ದೂರು ನೀಡಿದರು.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪೊಲೀಸರು, ನೇತ್ರಾಳನ್ನು ಶಿವಮೊಗ್ಗದಲ್ಲಿ ಪತ್ತೆ ಮಾಡಿ ವಿಚಾರಿಸಿದಾಗ ನೇತ್ರಾ ನನ್ನ ಗಂಡನೊಂದಿಗೆ ಬಾಳಲು ಇಷ್ಟವಿಲ್ಲ. ಅವರು ನನ್ನೊಂದಿಗೆ ಹೊಂದಿಕೊಳ್ಳುವುದಿಲ್ಲ ಎಂದು ತಿಳಿಸಿದ್ದಳು.

ಒಂದು ತಿಂಗಳ ಹಿಂದೆ ನಾಪತ್ತೆಯಾಗಿದ್ದ ನೇತ್ರಾ ಪಕ್ಕದ ಗ್ರಾಮ ಉದ್ದೂರಿನ ಪ್ರಿಯಕರನೊಂದಿಗೆ ಶಿವ ಮೊಗ್ಗಕ್ಕೆ ತೆರಳಿ 15 ದಿನಗಳ ಹಿಂದೆ ಸೊರಬ ತಾಲೂಕಿನ ಹೊಳೆ ಜೋಳದ ಗುಡ್ಡ ಗ್ರಾಮದ ಗೋಮಂತೇಶ್ವರ ದೇವಸ್ಥಾನದಲ್ಲಿ ಮದುವೆಯಾಗಿದ್ದಳು. ಪ್ರಿಯಕರನೊಂದಿಗೆ ಮದುವೆಯಾಗಿರುವ ಫೋಟೋವನ್ನು ನೇತ್ರಾ ತನ್ನ ಗಂಡನಿಗೆ ಕಳುಹಿಸಿದ್ದಳು. ಫೋಟೋ ನೋಡಿ ತೀವ್ರ ಮನನೊಂದ ಸುರೇಶ್ ಕುಮಾರ್ ಭಾನುವಾರ ಮಧ್ಯಾಹ್ನ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿರುವ ಸುರೇಶ್ ಕುಮಾರ್ ತಂದೆ ಕೃಷ್ಣೇಗೌಡ, ನನ್ನ ಮಗನ ಸಾವಿಗೆ ಸೊಸೆಯೇ ಕಾರಣ. ಆಕೆ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

## ಮಹಿಳೆಯರ ಸ್ವಾವಲಂಬಿ ಬದುಕಿಗೆ ಧರ್ಮಸ್ಥಳ ಸಂಸ್ಥೆ ಸಹಕಾರಿ

### ವೃತ್ತ ನಿರೀಕ್ಷಕ ಎನ್.ಆನಂದ್ ಅಭಿಪ್ರಾಯ



ಸರಗೂರು, ಅ.30– ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸಹಕಾರಿಯಾಗಿದೆ ಎಂದು ವೃತ್ತ ನಿರೀಕ್ಷಕ ಎನ್.ಆನಂದ್ ಅಭಿಪ್ರಾಯಪಟ್ಟರು.

ಧರ್ಮಸ್ಥಳ ಸಂಸ್ಥೆಯ ಜ್ಞಾನವಿಕಾಸ ಯೋಜನೆಯಡಿ ಪ್ರವಾಸ ಅಧ್ಯಯನ ಕೈಗೊಂಡಿದ್ದ ಮಹಿಳೆಯರಿಗೆ ಪಟ್ಟಣ ಪೊಲೀಸ್ ಠಾಣೆ ಆವರಣದಲ್ಲಿ ಕಾನೂನು ಅರಿವು ಕುರಿತು ಜಾಗೃತಿ ಮೂಡಿಸಿ ಮಾತನಾಡಿದ ಅವರು, ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಕಾನೂನು ಅಪರಾಧ. ಇಂತಹ ದೌರ್ಜನ್ಯಕ್ಕೆ ಮಹಿಳೆಯರು ಒಳಗಾದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಲೂಕು ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕ ಜಯಶೀಲ ಮಾತನಾಡಿ, ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯಗಳಾದರೆ ತಾವು ತಾಲೂಕು ಮಹಿಳಾ ಸಾಂತ್ವನ ಕೇಂದ್ರ ಸಂಪರ್ಕಿಸಿ. ಬಾಲ್ಯ ವಿವಾಹ ಅಪರಾಧ. ಹೆಣ್ಣಿಗೆ 18, ಗಂಡಿಗೆ 21 ವರ್ಷ ತುಂಬುವ ತನಕ ವಿವಾಹ ಮಾಡಬಾರದು. ಬಾಲ್ಯವಿವಾಹ ಮಾಡುವವರ ವಿರುದ್ಧ ಮಾಹಿತಿ ನೀಡುವುದು ಜೊತೆಗೆ ಮಹಿಳೆಯರು ಯಾವುದೇ ಸಮಸ್ಯೆ ಇದ್ದಲ್ಲಿ ಹತ್ತಿರದ ಸಾಂತ್ವನ ಕೇಂದ್ರದ ಸಹಕಾರ ಪಡೆಯಬಹುದು ಎಂದರು.

ಈ ವೇಳೆ ಧರ್ಮಸ್ಥಳ ಯೋಜನಾಧಿಕಾರಿ ಗಣೇಶ್ ನಾಯಕ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಅಶ್ವಿನಿ, ಮೇಲ್ವಿಚಾರಕರಾದ ರೇಖಾ, ಶುಭವತಿ, ಸೇವಾ ಪ್ರತಿನಿಧಿ ರಶ್ಮಿ, ರಾಘವೇಂದ್ರ ಶಿವಕುಮಾರ್, ತಾಯಮ್ಮ, ಜ್ಯೋತಿ, ಪ್ರೇಮ, ಮಹಿಳೆಯರು ಉಪಸ್ಥಿತರಿದ್ದರು.

## ಅಪಘಾತದಲ್ಲಿ ಅಪರಿಚಿತ ಸಾವು

ಮೈಸೂರು, ಅ.30– ಮೈಸೂರು–ನಂಜನಗೂಡು ರಸ್ತೆಯಲ್ಲಿ ಗುಂಡೂರಾವ್ ನಗರದ ಬಳಿ 60 ವರ್ಷದ ಅಪರಿಚಿತ ವ್ಯಕ್ತಿಗೆ ಯಾವುದೋ ವಾಹನ ಡಿಕ್ಕಿ ಹೊಡೆದಿದ್ದು, ತಲೆಗೆ ಪೆಟ್ಟು ಬಿದ್ದು, ನರಳುತ್ತಿದ್ದ ಆತನನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ದು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿ ಆಗದೇ ಅಸುನೀಗಿದ್ದಾನೆ. ಈತ ಗುಂಡು ಮುಖ, ದೃಢಕಾಯ ಶರೀರ, ಎಣ್ಣೆಗೆಂಪು ಬಣ್ಣ, ಬಿಳಿ ಮಿಶ್ರಿತ ಕಪ್ಪು ತಲೆಗೂದಲು, ಕುರುಚಲು ಗಡ್ಡ ಬಿಟ್ಟಿದ್ದಾನೆ. Mystry Clye ಷರ್ಟ್ ಕಂಪನಿಯ ನೀಲಿ ಬಣ್ಣದ ಕಪ್ಪು ಚುಕ್ಕೆಗಳಿರುವ ತುಂಬು ತೋಳಿನ ಷರ್ಟ್, ವೀನಸ್ ಕಂಪನಿಯ ನಿಕ್ಕರ್, ನಾಲ್ಕು ಸುತ್ತು ಕಪ್ಪು ಉಡಿದಾರ ಧರಿಸಿದ್ದಾರೆ.

## ಕ್ರೇನ್ ಹರಿದು ಯುವಕ ಸಾವು

ನಂಜನಗೂಡು, ಅ.30– ಕ್ರೇನ್ ಹರಿದು ಯುವಕನೋರ್ವ ಸಾವನ್ನಪ್ಪಿ, ಮತ್ತೋರ್ವ ತೀವ್ರ ಗಾಯಗೊಂಡಿರುವ ಘಟನೆ ನಗರದ ಹಳ್ಳದಕೇರಿ ಬಡಾವಣೆಯಲ್ಲಿ ಭಾನುವಾರ ರಾತ್ರಿ ನಡೆದಿದೆ. ಹಳ್ಳದಕೇರಿ ಬಡಾವಣೆ ನಿವಾಸಿ ಗಣೇಶ್(22) ಸಾವನ್ನಪ್ಪಿದ್ದು, ಆತನ ಸ್ನೇಹಿತ ಅಭಿಷೇಕ್(19) ತೀವ್ರ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಹಳ್ಳದಕೇರಿ ನಿವಾಸಿಗಳಾದ ಗಣೇಶ್ ಮತ್ತು ಅಭಿಷೇಕ್ ಶೌಚಾಲಯಕ್ಕೆಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ ತಾಲೂಕಿನ ಗೋಳೂರು ಗ್ರಾಮದ ಕಡೆಯಿಂದ ವೇಗವಾಗಿ ಬಂದ ಕ್ರೇನ್ ಗಣೇಶ್ ಮತ್ತು ಅಭಿಷೇಕ್‌ಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಕೆಳಕ್ಕೆ ಬಿದ್ದ ಗಣೇಶ್ ತಲೆ ಮೇಲೆ ಕ್ರೇನ್ ಚಕ್ರ ಹರಿದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿದ್ದು, ಆತನ ಸ್ನೇಹಿತ ಅಭಿಷೇಕ್ ತೀವ್ರ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಘಟನೆ ಬಳಿಕ ಕ್ರೇನ್ ಚಾಲಕ ತಲೆಮರೆಸಿ ಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ನಂ.ಗೂಡಲ್ಲಿ ಪುನೀತ್ ಪುಣ್ಯಸ್ಮರಣೆ



ನಂಜನಗೂಡು, ಅ.30– ನಟ ಡಾ.ಪುನೀತ್ ರಾಜಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಪುನೀತ್ ಅಭಿಮಾನಿ ಬಳಗದವರು ಭಾನುವಾರ ಗೀತ ಗಾಯನ ಮೂಲಕ ಗೌರವ ಸಲ್ಲಿಸಿದರು.

ವೃತ್ತ ನಿರೀಕ್ಷಕ ಲಕ್ಷ್ಮೀಕಾಂತ ತಳವಾರ್ ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಅನ್ನ ಸಂತರ್ಪಣೆಗೆ ಚಾಲನೆ ನೀಡಿದರು. ಪುನೀತ್ ಅಭಿಮಾನಿ ಬಳಗದ ಅಧ್ಯಕ್ಷ ನಾರಾಯಣ್ ಮಾತನಾಡಿ, ನಟ ಪುನೀತ್ ರಾಜಕುಮಾರ್ ಭೌತಿಕವಾಗಿ ಮರೆಯಾಗಿದ್ದರೂ, ತಮ್ಮ ಸೇವಾ ಕಾರ್ಯಗಳ ಮೂಲಕ ಕನ್ನಡಿಗರ ಮನದಲ್ಲಿ ನೆಲೆಸಲಿದ್ದಾರೆ. ಅವರ ಆದರ್ಶ ಪಾಲಿಸುವ ಮೂಲಕ ನಾವೆಲ್ಲರೂ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗೋಣ ಎಂದರು.

ಇದೇ ವೇಳೆ ಪುನೀತ್ ಅವರಿಗೆ ಇಷ್ಟವಾದ ಬಿರಿಯಾನಿಯನ್ನು ಸಾರ್ವಜನಿಕರಿಗೆ ವಿತರಿಸಲಾಯಿತು. ಈ ವೇಳೆ ಶ್ರೀರೇಣುಕಾಂಬ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ಎನ್.ಟಿ. ಗಿರೀಶ್, ಜಿ.ಕೆ.ಮಂಜುನಾಥ್, ಭೈರೋಜಿರಾವ್, ರವಿ, ಶಿವಣ್ಣ, ದೇವರಾಜ್ ಸೇರಿದಂತೆ ಖಾಸಗಿ ಬಸ್ ನಿಲ್ದಾಣದ ವ್ಯಾಪಾರಿಗಳು ಹಾಗೂ ಪುನೀತ್ ಅಭಿಮಾನಿಗಳು ಉಪಸ್ಥಿತರಿದ್ದರು.

## ಪಿ.ಪಟ್ಟಣದಲ್ಲಿ ದೇವರಾಜ ಅರಸು ಕಲಾ ಭವನ ಉದ್ಘಾಟನೆ

### ಅರಸು ಅವರ ಶಿಷ್ಯನಾಗಿ ಕಲಾಭವನ ಉದ್ಘಾಟಿಸುವ ಭಾಗ್ಯ ನನ್ನದಾಗಿದೆ: ಎಸ್‌ಟಿಎಸ್

ಪಿರಿಯಾಪಟ್ಟಣ, ಅ.30– ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಅವರ ಶಿಷ್ಯನಾಗಿ ಪಟ್ಟಣದಲ್ಲಿ ನಿರ್ಮಿಸಿರುವ ದೇವರಾಜ ಅರಸುರವರ ಕಲಾ ಭವನ ಉದ್ಘಾಟಿಸುವ ಸೌಭಾಗ್ಯ ಇಂದು ನನ್ನದಾಗಿದೆ ಎಂದು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಮಾನದಿಂದ ನುಡಿದರು.

ಪಟ್ಟಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ದೇವರಾಜು ಅರಸು ಕಲಾ ಭವನ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಮುಖ್ಯಮಂತ್ರಿಯಾಗಿ ಅನೇಕ ಜನಪರ ಕಾರ್ಯಕ್ರಮ ನೀಡಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ. ಜನಸಾಮಾನ್ಯರ ಧ್ವನಿಯಾಗಿ ರೈತಪರ ಅನೇಕ ಹೋರಾಟ ನಡೆಸಿ ಇಡೀ ರಾಜ್ಯದ ಜನತೆಯ ನೆನಪಿನಲ್ಲಿ ಉಳಿದ ಮುತ್ಸದ್ದಿ ದಿವಂಗತ ದೇವರಾಜು ಅರಸು ಅವರ ಹೆಸರಿನ ಈ ಕಲಾಮಂದಿರ ನಿರ್ಮಾಣವಾಗಿರುವುದು ನಿಜಕ್ಕೂ ಸಂತೋಷದ



ವಿಚಾರ. ಶಾಸಕ ಕೆ.ಮಹ ದೇವ್ ಹಠಕ್ಕೆ ಬಿದ್ದವರಂತೆ ಸರ್ಕಾರದ ಯೋಜನೆಗಳನ್ನು ತರುವಲ್ಲಿ ಕಾಳಜಿ ವಹಿಸಿ ದ್ದಾರೆ. ಈ ಕಲಾ ಮಂದಿರದ ನಿರ್ಮಾಣಕ್ಕೆ ಸಾಕಷ್ಟು ಶ್ರಮ ವಹಿಸಿ ತಾಲೂಕಿನ ಜನತೆಗೆ ದಿ.ದೇವರಾಜು ಅರಸು ಅವರ ನೆನಪನ್ನು ಶಾಶ್ವತವಾಗಿ ನೆಲೆಸುವಂತೆ ಮಾಡಿದ್ದಾರೆ ಎಂದರು

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಅನುದಾನ ವಿಚಾರದಲ್ಲಿ ಪಕ್ಷಭೇದ ಮರೆತು ಎಲ್ಲರಿಗೂ ಆದ್ಯತೆ ನೀಡುವ ಸಚಿವರಿದ್ದರೆ ಅದು ಸೋಮಶೇಖರ್ ಮಾತ್ರ. ನಾನು ಹಾಗೂ ಶಾಸಕ ಕೆ.ಮಹದೇವ್ ಮೋದಿ ಅವರ ಜನಜೀವನ ಮಿಷನ್ ಯೋಜನೆಯಡಿ 239 ಕೋಟಿ ರೂ. ವೆಚ್ಚದಲ್ಲಿ ಸುಮಾರು 303 ಹಳ್ಳಿಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಗೆ ಶೀಘ್ರ ಚಾಲನೆ ನೀಡಲಿದ್ದೇವೆ. ಪಟ್ಟಣದ ಮಸಣಿಕಮ್ಮ ದೇವಸ್ಥಾನದ ಅಭಿವೃದ್ಧಿಗೆ ಈಗಾಗಲೇ ಐವತ್ತು ಲಕ್ಷ ರೂ. ಗಳನ್ನು ನೀಡಿದ್ದೇನೆ ಎಂದರು.

ಶಾಸಕ ಕೆ.ಮಹದೇವ್ ಮಾತನಾಡಿ, ಸಚಿವ ಸೋಮಶೇಖರ್ ಪಿರಿಯಾಪಟ್ಟಣ ತಾಲೂಕಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದಾರೆ. ಇವರಿಗೆ ತಾಲೂಕಿನ ಜನತೆ ಪರವಾಗಿ ಅಭಿನಂದನೆ ಸಲ್ಲಿಸುವು ದಾಗಿ ನುಡಿದರು.

ಸಮಾರಂಭದಲ್ಲಿ ದಿ.ದೇವರಾಜು ಅರಸು ಅವರ ಸಹೋದರ ಶ್ರೀಕಂಠರಾಜೇ ಅರಸ್, ತಹಸೀಲ್ದಾರ್ ಚಂದ್ರಮೌಳಿ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಇಓ ಕೃಷ್ಣಕುಮಾರ್, ತಂಬಾಕು ಮಂಡಳಿ ಸದಸ್ಯ ವಿಕ್ರಂ ರಾಜ್, ಒಳಚರಂಡಿ ಯೋಜನೆ ನಿಗಮದ ಸದಸ್ಯ ಆರ್.ಟಿ. ಸತೀಶ್, ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಪುರಸಭಾಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಆಶಾ, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ವಕೀಲರಾದ ಗೋವಿಂದೇಗೌಡ, ಮಂಜುನಾಥ್ ಸಿಂಗ್, ರಾಮು ಸೇರಿದಂತೆ ಇತರರಿದ್ದರು.




ಮೂಗೂರಿನ ಅಪ್ಪು ಅಭಿಮಾನಿ ಬಳಗದಿಂದ ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಪ್ರಥಮ ಪುಣ್ಯಸ್ಮರಣೆ ಆಚರಿಸಲಾಯಿತು. ಈ ವೇಳೆ ಪುಟ್ಟು, ಪ್ರಕಾಶ್, ನಟರಾಜ್, ಎಂ.ಎಂ.ಜಗದೀಶ್, ಮಹೇಶ್, ಮಹದೇವಸ್ವಾಮಿ, ಅಶೋಕ ಇದ್ದರು.

# ವಾಲ್ಮೀಕಿ ಸಮುದಾಯಕ್ಕೆ ದೇವೇಗೌಡರ ಕೊಡುಗೆ ಅಪಾರ

## ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿ ಶ್ರೀಪ್ರಸನ್ನಾನಂದಸ್ವಾಮೀಜಿ

ತಿ.ನರಸೀಪುರ, ಅ.30– ವಾಲ್ಮೀಕಿ ಸಮುದಾಯಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕೊಡುಗೆ ಅಪಾರ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿ ಶ್ರೀಪ್ರಸನ್ನಾನಂದಸ್ವಾಮಿ ತಿಳಿಸಿದರು.

ಪ.ಜಾತಿ ಮತ್ತು ಪ.ವರ್ಗಕ್ಕೆ ಹೆಚ್ಚಿನ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಫ್ರೀಡಂ ಪಾರ್ಕ್‌ನಲ್ಲಿ 243 ದಿನಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿ, ಸರ್ಕಾರದ ಆಶ್ವಾಸನೆ ಮೇರೆಗೆ ಧರಣಿ ಅಂತ್ಯಗೊಳಿಸಿದ್ದ ಸ್ವಾಮೀಜಿ ಅವರು ಶನಿವಾರ ಬೆಂಗಳೂರಿನಲ್ಲಿರುವ ಮಾಜಿ ಪ್ರಧಾನಿ ದೇವೇಗೌಡರ ನಿವಾಸಕ್ಕೆ ತೆರಳಿ ಅವರನ್ನು ಸನ್ಮಾನಿಸಿ ಮಾತನಾಡಿದರು.

ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರು ತೆಗೆದುಕೊಂಡ ಸಮಯೋಚಿತ ನಿರ್ಧಾರದಿಂದಾಗಿ ಇಂದು ನಮ್ಮ ವಾಲ್ಮೀಕಿ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗಿದ್ದು, ಸಮುದಾಯ ಅವರಿಗೆ ಋಣಿಯಾಗಿದೆ ಎಂದರು.

ರಾಜ್ಯ ವಾಲ್ಮೀಕಿ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ಈ ಹಿಂದೆ



ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಎಲ್.ಜೆ.ಹಾವನೂರ್ ವರದಿ ಅನುಷ್ಠಾನಕ್ಕೆ ತರಲು ದೇವೇಗೌಡರ ಪಾತ್ರ ಬಹು ಮುಖ್ಯವಾಗಿದ್ದು, ರಾಜಕೀಯ ಮೀಸಲಾತಿ ಜಾರಿಗೊಳಿಸಲು ಅವರ ಶ್ರಮ ಅಪಾರ. ಕೇಂದ್ರದಲ್ಲಿ ಚಂದ್ರಶೇಖರ್ ಪ್ರಧಾನಿಯಾಗಿದ್ದ ವೇಳೆ ಅನುಮೋದನೆ ತರಲು ದೇವೇಗೌಡರು ಶ್ರಮಿಸಿದ್ದರಿಂದಲೇ ಇಂದು ಹಿಂದುಳಿದವರಿಗೆ ಹೆಚ್ಚಿನ ಮೀಸಲಾತಿ ದೊರಕಲು ಸಾಧ್ಯವಾಯಿತು ಎಂದರು.

ವರದಿ ಅನುಷ್ಠಾನದ ಮೇಲೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮಹಿಳೆಯರು ಸೇರಿದಂತೆ ಎಸ್‌ಸಿ, ಎಸ್ಟಿ ಸಮುದಾಯಕ್ಕೆ ಶೇ.33 ರಾಜಕೀಯ ಮೀಸಲಾತಿ ಲಭ್ಯವಾಗಿತ್ತು ಅಂದಿನಿಂದ ಈವರೆವಿಗೂ 2011ರ ಜನಗಣತಿ ಆಧಾರದ ಮೇಲೆ ಯಾವುದೇ ಸರ್ಕಾರ ಗಳು ಮೀಸಲಾತಿ ನೀಡಿರಲಿಲ್ಲ. ಈಗ ನಾಗಮೋಹನ್ ದಾಸ್ ವರದಿ ಆಧಾರದ ಮೇಲೆ ಸಮ್ಮಿಶ್ರ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಬಿಜೆಪಿ ಸರ್ಕಾರ ಅನುಮೋದನೆಗೊಳಿಸಿದ್ದು, ಇದಕ್ಕೆ ಕಾರಣಕರ್ತರಾದ ದೇವೇಗೌಡರಿಗೆ ಸಮುದಾಯದವರು ಕೃತಜ್ಞರಾಗಿದ್ದಾರೆ ಎಂದರು.

ಈ ವೇಳೆ ಬಿಎಸ್‌ಪಿ ರಾಜ್ಯಾಧ್ಯಕ್ಷ ಮಾಯಿಸಂದ್ರ ಮುನಿಯಪ್ಪ, ಉರಿ ಪೆದ್ದಲಿಂಗ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ವಾಲ್ಮೀಕಿ ನಾಯಕ ಯುವ ಸಂಘಟನೆ ರಾಜ್ಯಾಧ್ಯಕ್ಷ ತುಳಸೀರಾಂ, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಅಪರ ನಿರ್ದೇಶಕ ಕೆ.ಎಸ್.ಮೃತ್ಯುಂಜಯ, ನಿವೃತ್ತ ಐಎಎಸ್ ಅಧಿಕಾರಿ ಶಿವಪ್ಪ, ನಿವೃತ್ತ ಕಾರಾಗೃಹ ಅಧಿಕಾರಿ ವೀರೇಂದ್ರಸಿಂಹ, ಎಂ.ಲಕ್ಷ್ಮಣ, ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್ ಇದ್ದರು.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.20ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ.

ಸ್ಕ್ರೀನ್ 2 ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.25ಕ್ಕೆ, ಹೆಡ್ ಬುಷ್(ಕ): 10.40ಕ್ಕೆ, ಮ.1.25ಕ್ಕೆ, ಕಾಂತಾರ (ಕ): ಸಂ.4.10ಕ್ಕೆ, 9.50ಕ್ಕೆ, ರಾಮ್ ಸೇತು (ಹಿಂ): ರಾ.7ಕ್ಕೆ.

ಸ್ಕ್ರೀನ್ 3 ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.35ಕ್ಕೆ, ಮ.1.20ಕ್ಕೆ, ಮ.3.25ಕ್ಕೆ, ಸಂ.5.30ಕ್ಕೆ, ರಾ.7.35ಕ್ಕೆ, ಬ್ಲ್ಯಾಕ್ ಆಡಮ್ (ಇಂ): ಬೆ.10.45ಕ್ಕೆ, ಕಾಂತಾರ (ಕ): ರಾ.9.55ಕ್ಕೆ.

ಸ್ಕ್ರೀನ್ 4 ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.20ಕ್ಕೆ, ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಸಂ.4.15ಕ್ಕೆ, ಸಂ.6.15ಕ್ಕೆ, ರಾ.8.15ಕ್ಕೆ, ರಾ.10.15ಕ್ಕೆ.

## INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ರಾಮ್‌ಸೇತು (ಹಿಂ): ಬೆ.9.20ಕ್ಕೆ, ಕಾಂತಾರ (ಕ): ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 2 ಗಂಧದಗುಡಿ (ಕ): ಬೆ.9ಕ್ಕೆ, ಬೆ.11.05ಕ್ಕೆ, ಮ.1.10ಕ್ಕೆ, ಮ.3.20ಕ್ಕೆ, ರಾ.8.20ಕ್ಕೆ, ರಾ.10.30ಕ್ಕೆ, ಹೆಡ್ ಬುಷ್ (ಕ): ಸಂ.5.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, ಥ್ಯಾಂಕ್ ಗಾಡ್ (ಹಿಂ): ಮ.1.10ಕ್ಕೆ

ಸ್ಕ್ರೀನ್ 4 ಕಾಂತಾರ (ಕ): ಬೆ.10.45ಕ್ಕೆ, ಹೆಡ್ ಬುಷ್ (ಕ): ಮ.1.45ಕ್ಕೆ, ರಾಮ್ ಸೇತು (ಹಿಂ): ಸಂ.4.35ಕ್ಕೆ, ರಾ.10.10ಕ್ಕೆ, ಥ್ಯಾಂಕ್ ಗಾಡ್ (ಹಿಂ): ರಾ.7.35ಕ್ಕೆ

## ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಭೂ ನಾಟಕ ಮಂಡಳಿ(ಕ): ಬೆ.10.20ಕ್ಕೆ, ಸರ್ದಾರ್ (ತ): ಮ.12.40ಕ್ಕೆ, ಪ್ರಿನ್ಸ್ (ತ): ಮ.3.50ಕ್ಕೆ, ಸಂ. 6.40ಕ್ಕೆ ಮಾನ್ಸ್ಟರ್ (ಮ): ರಾ.9.30ಕ್ಕೆ

ಸ್ಕ್ರೀನ್ 2 ಕಾಂತಾರ (ಕ): ಬೆ.10.15ಕ್ಕೆ, ಸಂ. 4ಕ್ಕೆ, ಹೆಡ್ ಬುಷ್ (ಕ): ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಹೆಡ್ ಬುಷ್ (ಕ): ಬೆ.10ಕ್ಕೆ, ಮ.3.55ಕ್ಕೆ, ಕಾಂತಾರ (ಕ): ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ

ಸ್ಕ್ರೀನ್ 4 ಕಥಾನಾಯಕ (ಕ): ಬೆ.10.15ಕ್ಕೆ, ಪ್ರಿನ್ಸ್ (ತ): ಮ.1ಕ್ಕೆ, ಸರ್ದಾರ್ (ತ): ಮ. 3.55ಕ್ಕೆ, ಮಾನ್ಸ್ಟರ್ (ಮ): ಸಂ.7.05ಕ್ಕೆ, ಸರ್ದಾರ್ (ತ): ರಾ. 9.45ಕ್ಕೆ

## PVR CINEMAS ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಗಂಧದಗುಡಿ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಕಾಂತಾರ (ಕ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಮಿಸ್ ಮಲ್ಲಿಗೆ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಹೆಡ್ ಅಂಡ್ ಬುಷ್ (ಕ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಕಾಂತಾರ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಹೆಡ್ ಅಂಡ್ ಬುಷ್ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಸರ್ದಾರ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಗಂಧದಗುಡಿ (ಕ) | 5 ಪ್ರದರ್ಶನಗಳು |
| **ಲಿಡೋ** | |
| ಹೆಡ್ ಅಂಡ್ ಬುಷ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ರಾಮ್ ಸೇತು (ಹಿಂ) | 4 ಪ್ರದರ್ಶನಗಳು |
| **ಪ್ರಭಾ** | |
| ತೋತಾಪುರಿ (ಕ) | 4 ಪ್ರದರ್ಶನಗಳು |

ಅಪ್ಪು ಪುಣ್ಯ ಸ್ಮರಣೆ ಅಂಗವಾಗಿ

# ವಸ್ತುಪ್ರದರ್ಶನ ಆವರಣದಲ್ಲಿ ಗಂಧದ ಗುಡಿ ಚಿತ್ರಕಲಾ ಸ್ಪರ್ಧೆ



ಮೈಸೂರು, ಅ.30(ಎಂಟಿವೈ)– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಮೊದಲ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಮೈಸೂರಿನ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಅಪ್ಪು ಅಭಿಮಾನಿ ಬಳಗ ಭಾನುವಾರ ಆಯೋಜಿಸಿದ್ದ ಗಂಧದಗುಡಿ ಚಿತ್ರಕಲಾ ಸ್ಪರ್ಧೆಯಲ್ಲಿ ಸಾವಿರಕ್ಕೂ ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಪರಿಕಲ್ಪನೆಯಲ್ಲಿ ಬೆಟ್ಟ, ಗುಡ್ಡ, ಪರಿಸರದ ಚಿತ್ರ ಬರೆದು ಗಮನ ಸೆಳೆದರು.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ಪಿ.ಕಾಳಿಂಗರಾವ್ ಸಭಾಂಗಣ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಹಯೋಗದೊಂದಿಗೆ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ನಗರದ ವಿವಿಧ ಬಡಾವಣೆಗಳಿಂದ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿ, ಪರಿಸರ, ಬೆಟ್ಟಗುಡ್ಡಗಳು, ನದಿ, ಕೆರೆ ಅರಣ್ಯ, ಪರ್ವತ, ಜಲಪಾತಗಳಿಗೆ ಸಂಬಂಧಿಸಿದ ಚಿತ್ರಗಳು ಹಾಗೂ ಅರಣ್ಯದಲ್ಲಿ ಪುನೀತ್ ರಾಜ್ ಕುಮಾರ್ ಇರುವಂತೆ ಚಿತ್ರಗಳನ್ನು ಬರೆದು ಅಭಿಮಾನ ಮೆರೆದರು.

ಇದಕ್ಕೂ ಮುನ್ನ ಚಿತ್ರಕಲಾ ಸ್ಪರ್ಧೆಯನ್ನು ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಉದ್ಘಾಟಿಸಿ ಮಾತನಾಡಿ, ನಟ ಪುನೀತ್ ರಾಜ್‌ಕುಮಾರ್ ಅವರು ಕಿರಿಯ ವಯಸ್ಸಿನಲ್ಲಿ ದೊಡ್ಡ ಸಾಧನೆ ಮಾಡುವ ಮೂಲಕ ಎಲ್ಲರ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿಯುಂತೆ ಮಾಡಿದ್ದಾರೆ ಪುನೀತ್ ರಾಜ್‌ಕುಮಾರ್ ಅವರ ಹೃದಯ ವೈಶಾಲ್ಯತೆಯನ್ನು ಎಲ್ಲರೂ ಅಳವಡಿಸಿಕೊಂಡು ಸಮಾಜ ಮುಖಿಯಾಗಿ ಕಾರ್ಯನಿರ್ವಸಲು ಪಣ ತೊಡಬೇಕು. ವರನಟ ಡಾ.ರಾಜಕುಮಾರ್ ಅವರಂತೆಯೇ ಪುನೀತ್ ರಾಜಕುಮಾರ್ ಪರಿಸರ ಸಂರಕ್ಷಣೆಯ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ ಎಂದರು.

**ವಿಜೇತರು:** 8 ರಿಂದ 12 ವರ್ಷದ ವಿಭಾಗದಲ್ಲಿ ಧೃತಿ ವಿಶಾ ಪ್ರಥಮ, ಹರ್ಷಿತ ದ್ವಿತೀಯ, ದ್ವೀತಿಚಾನಸ್ಯ ತೃತೀಯ ಬಹುಮಾನ ಪಡೆದರು. 12 ರಿಂದ 18 ವರ್ಷದ ವಿಭಾಗದಲ್ಲಿ ಕುಮಾರ್ ನಾಯಕ್ ಪ್ರಥಮ, ವಿಷ್ಣು ಪ್ರಸಾದ ದ್ವಿತೀಯ, ಅಭಿಜ್ಞ ತೃತೀಯ ಬಹುಮಾನ ಗಳಿಸಿದರು. 18 ವರ್ಷದ ಮೇಲ್ಪಟ್ಟ ವಿಭಾಗದಲ್ಲಿ ಎಸ್.ಮಧುಸೂದನ್ ಪ್ರಥಮ, ಮಹೇಶ್ ಬಸವೇಗೌಡ ದ್ವಿತೀಯ ಹಾಗೂ ಬಂಗಾರ ತೃತೀಂಯ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡ ಜಿ.ಮಂಜು ಗೌಡ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಮುಡಾ ಸದಸ್ಯೆ ಲಕ್ಷ್ಮೀದೇವಿ, ಮನೋ ವಿಜ್ಞಾನಿ ಡಾ.ರೇಖಾ, ಶಶಿಕಲಾ, ಸುಚೀಂದ್ರ , ಜಿಎಸ್‌ಎಸ್‌ಎಸ್ ಚಿತ್ರಕಲಾ ಶಿಕ್ಷಕರಾದ ಅನಿತಾ, ರವಿಚಂದ್ರ, ಕಾಂಗ್ರೆಸ್ ಮುಖಂಡರಾದ ರೇಖಾ ಶ್ರೀನಿವಾಸ್, ಸವಿತಾ ಘಾಟ್ಕೆ, ವಿದ್ಯಾ, ನಾಗಶ್ರೀ ಹಾಗೂ ಇನ್ನಿತರರು ಹಾಜರಿದ್ದರು.

# ರಾಜ್ಯ ಸರ್ಕಾರಿ ನೌಕರರಿಗೂ ವೇತನ ಪರಿಷ್ಕರಣೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಅ.30(ಆರ್‌ಕೆಬಿ)– ಕೇಂದ್ರ ಸರ್ಕಾರಿ ನೌಕರರ ಮಾದರಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೂ ವೇತನ ಬೇಡಿಕೆ ಹಾಗೂ ಹೊಸ ಪಿಂಚಣಿ ರದ್ದುಪಡಿಸಿ ಹಳೆ ಪಿಂಚಣಿ ಸೌಲಭ್ಯವನ್ನು ಮುಂದುವರಿ ಸುವಂತೆ ಆಗ್ರಹಿಸಿ, ವಿಶ್ವಮಾನವ ಮೈಸೂರು ವಿಶ್ವ ವಿದ್ಯಾನಿಲಯ ನೌಕರರ ವೇದಿಕೆ ಆಶ್ರಯದಲ್ಲಿ ಮೈಸೂರಿನ ಪುರ ಭವನದ ಬಳಿ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೊ.ಎಸ್.ಶಿವರಾಜಪ್ಪ ಕೇಂದ್ರ ಸರ್ಕಾರ ತಮ್ಮ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸಿನಂತೆ ಪರಿಷ್ಕರಣೆ ಮಾಡಿದೆ. ರಾಜ್ಯ ಸರ್ಕಾರದ ನೌಕರರಿಗೂ ವೇತನ ಪರಿಷ್ಕರಣೆ ಮಾಡಿ 5 ವರ್ಷಗಳಾಗಿದ್ದು, ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾದರಿಯಲ್ಲಿಯೇ ರಾಜ್ಯ ಸರ್ಕಾರಿ ನೌಕರರಿಗೂ ವೇತನ ಪರಿಷ್ಕರಣೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಆರ್.ವಾಸುದೇವ್, ಎನ್‌ಪಿಎಸ್ ಮೈಸೂರು ಜಿಲ್ಲಾಧ್ಯಕ್ಷ ಶಿಂಡ್ಳಿ ಸಂತೋಷ್, ಪದಾಧಿಕಾರಿಗಳಾದ ಕೃಷ್ಣ, ಸಂತೋಷ್, ಡಾ.ಈಶ್ವರ್, ಡಾ.ವಾಸುದೇವಮೂರ್ತಿ ಇನ್ನಿತರರಿದ್ದರು.



## 16ನೇ ವರ್ಷದ ಸವಿನೆನಪು




ನೀವು ನಮ್ಮನ್ನಗಲಿ ಇಂದಿಗೆ 16 ವರ್ಷ ಕಳೆದರೂ ಸದಾ ನೀವು ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ.

ದುಃಖತಪ್ತರು: ತಾಯಿ ಹಾಗೂ ಅಣ್ಣ, ತಂಗಿ, ಅಕ್ಕಂದಿರು, ಕುಟುಂಬ ವರ್ಗದವರು.

**ಮಣಿ.ಎನ್**

ಎಂ.ವಿ.ಎಸ್.ಟೆಂಟ್ ಹೌಸ್, ಜಯನಗರ, ಕೆ.ಜಿ.ಕೊಪ್ಪಲು

## ಶ್ರದ್ಧಾಂಜಲಿ



ದೇವರು ನಿಮ್ಮ ಆತ್ಮಕ್ಕೆ ಶಾಂತಿ ನೀಡಲಿ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ.

ದುಃಖತಪ್ತರು: ಪತ್ನಿ ಶ್ರೀಮತಿ ಶಾರದ, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧುಮಿತ್ರರು.

ಜನನ: 08.07.1947 ಮರಣ: 22.10.2022

**ಶ್ರೀ ಎಸ್.ಸಿದ್ದಾಚಾರ್** ರವರು

(ನಿವೃತ್ತ ಹಿರಿಯ ಆರೋಗ್ಯ ನಿರೀಕ್ಷಕರು, ಆರೋಗ್ಯ ಇಲಾಖೆ)

## CHANGE OF NAME

I **KUSHI. JAIN. D,** formerly called by the name, KHUSHI.D., daughter of Deepak Kumar. B., and resident of # 370, Ananda Marga, Siddartha nagara, Mysuru-570011, changed my name as **KUSHI JAIN DEEPAK KUMAR,** vide an affidavit Sworn on 28/10/2022 before Sri. S.V. Nagendra, Notary, Mysuru.

ಮೈಸೂರು ಮಿತ್ರ 43

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

# ಸರ್ಕಾರ ರಕ್ತದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು

## ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ

ಮೈಸೂರು: ಅ.30– ಸರ್ಕಾರ ರಕ್ತದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಮುಖಾಂತರ ರಕ್ತದ ಮಹತ್ವವನ್ನು ತಿಳಿಸಬೇಕು ಎಂದು ವಿಧಾನ ಪರಿಷತ್ ಸದಸ್ಯೆ ಸಿ.ಎನ್. ಮಂಜೇಗೌಡ ತಿಳಿಸಿದರು.

ರೋಟರಿ ಹೆರಿಟೇಜ್ ಮೈಸೂರು, ಆಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಮೈಸೂರು ಜಿಲ್ಲಾ ಘಟಕ, ಜಯದೇವ ಹೃದ್ರೋಗ ಆಸ್ಪತ್ರೆ, ಕೆ.ಆರ್. ಆಸ್ಪತ್ರೆ ಹಾಗೂ ಅಪೋಲೋ ಆಸ್ಪತ್ರೆಯ ಸಹಯೋಗದಿಂದ ರೋಟರಿ ಪಶ್ಚಿಮ ಶಾಲೆಯಲ್ಲಿ ನಡೆದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತ ನಾಡಿದ ಅವರು, ಮನುಷ್ಯ ಈ ಭೂಮಿ ಮೇಲೆ ಹುಟ್ಟಿದ ಮೇಲೆ ತನ್ನ ಹೆಜ್ಜೆಗುರುತುಗಳನ್ನು ಬಿಟ್ಟುಹೋಗಬೇಕು. ಆಗಮಾತ್ರ ಹುಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಜನರಲ್ಲಿರುವ ಕಲ್ಮಶಗಳನ್ನು ಶುಚಿಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ ಆದರೆ ವಾತಾವರಣ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬಹುದು. ರಕ್ತದಾನ ಮಾಡಿದರೆ ಏನಾಗುವುದೋ ಎಂಬ ಭಯ ಜನರಲ್ಲಿ ಇದೆ ಅದನ್ನು ಹೋಗಲಾಡಿಸಲು ಎಲ್ಲರೂ ಶ್ರಮಿಸಬೇಕು. ಪ್ರಪಂಚದಲ್ಲಿ ಎಲ್ಲವನ್ನು ಡೂಪ್ಲಿಕೇಟ್ ಮಾಡಬಹುದು ಆದರೆ ರಕ್ತವನ್ನು ಮಾತ್ರ ಡೂಪ್ಲಿಕೇಟ್ ಮಾಡಲು ಸಾಧ್ಯವಿಲ್ಲ ಎಂದ ಅವರು, ರಕ್ತದಾನದ ಬಗ್ಗೆ ಯುವಕರಿಗೆ ಪ್ರೋತ್ಸಾಹಿಸಬೇಕು ಇಂತಹ ಕಾರ್ಯಕ್ರಮಗಳು ನಡೆಯುತ್ತಿರಬೇಕು ಎಂದರು.

ಮೈಸೂರು ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ ಮಾತನಾಡಿ, ಎಲ್ಲಾ ದಾನಗಳಿಗಿಂತಲೂ ರಕ್ತದಾನ ಶ್ರೇಷ್ಠವಾಗಿದ್ದು, ಇತ್ತೀಚಿನ ದಿನಗಳಲ್ಲಿ ರಕ್ತದಾದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿದ್ದು, ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುತ್ತಿದ್ದಾರೆ. ಆರೋಗ್ಯವಂತ ಮನುಷ್ಯ ಪ್ರತಿ 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ಅದರಿಂದ ಯಾವುದೇ ತೊಂದರೆ



ಆಗುವುದಿಲ್ಲ. ಪುನೀತ್ ರಾಜ್ ಕುಮಾರ್ ನಿಧನರಾದ ನಂತರ ಅವರ ಕಣ್ಣುಗಳನ್ನು ದಾನ ಮಾಡಿದರು. ಅವರಿಂದ ಪ್ರೇರೇಪಿತರಾದವರು ತಮ್ಮ ಕಣ್ಣುಗಳನ್ನು ದಾನ ಮಾಡಿದ್ದಾರೆ. ಇತ್ತೀಚೆಗೆ ಅಂಗಾಂಗ ದಾನ, ದೇಹದಾನಗಳನ್ನು ಹೆಚ್ಚಾಗಿ ಮಾಡುತ್ತಿದ್ದಾರೆ. ಹಲವಾರು ವೈದ್ಯರು ಸಹ ದೇಹದಾನವನ್ನು ಮಾಡಿದ್ದಾರೆ ಎಂದರು.

ಸಮಾರಂಭದಲ್ಲಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ದಕ್ಷಿಣ ವಲಯದ ಪೊಲೀಸ್ ಅಧೀಕ್ಷಕರಾದ ಡಾ॥ ಬಿ.ಟಿ. ಕವಿತ, ಆರ್. ನಾಗಶಯನ, ಡಾ॥ ರಶ್ಮಿ, ಕೆ. ಮಂಜುನಾಥ್, ರಾಜಶೇಖರ ಕದಂಬ, ಮಾಜಿ ಸೈನಿಕರ ಸಂಘದ ಕೆ.ಪಿ. ದಿವಾಕರ್, ಸಿ. ಜಗದೀಶ್, ಎಂ.ಪಿ. ಪ್ರಭಾಕರ್, ಜಿ.ಎಂ. ಸುರೇಶ್, ನಂಜುಂಡಸ್ವಾಮಿ, ಗೋಪಾಲಕೃಷ್ಣ ಉಪಸ್ಥಿತರಿದ್ದರು.

## 21ನೇ ವರ್ಷದ ಪುಣ್ಯಸ್ಮರಣೆ



**ದಿ॥ಸುರೇಶ್.ಎಂ.ಎಸ್**

ಮರಣ: 31–10–2001

ನೀವು ನಮ್ಮನ್ನಗಲಿ ಇಂದಿಗೆ 21 ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಾ,

ನಿಮ್ಮ ನೆನಪಿನಲ್ಲಿ: ಪುನೀತ್.ಎಂ.ಎಸ್.

ಬಿಜೆಪಿ ಪ್ರಧಾನ ಕಾರ್ಯದರ್ಶಿ, ಚಾಮರಾಜ ಕ್ಷೇತ್ರ ಹಾಗೂ ಕುಟುಂಬ ವರ್ಗದವರು ಮಂಚೇಗೌಡನ ಕೊಪ್ಪಲು, ಮೈಸೂರು

## ನಿವೇಶನಗಳು ಮಾರಾಟಕ್ಕಿವೆ

ಟಿ. ನರಸೀಪುರ ರಸ್ತೆ (ವರಕೂಡು)

- ಪಶ್ಚಿಮಕ್ಕೆ, A ಖಾತ
- ಬ್ಯಾಂಕ್ ಸಾಲ ಸೌಲಭ್ಯವಿದೆ
- ಮಾಲೀಕರಿಂದ ನೇರ ಮಾರಾಟ

ಅಳತೆ 20 / 30

9972602543

ಏಜೆಂಟ್‌ಗಳು ದಯವಿಟ್ಟು ಕ್ಷಮಿಸಿ

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.

ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638.

ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/95/2022–23 ದಿನಾಂಕ: 27–10–2022




ನಿಮ್ಮ ಮನೆಯೇ 'ನಿರಂತರ' ಪಾಠ ಶಾಲೆ ಯು.ಜಿ.ಸಿ. ಅನುಮೋದಿತ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ. ಮೂಲಕ ಪಡೆಯಿರಿ

**2022–23 ರ ಸೆಪ್ಟಂಬರ್ ಆವೃತ್ತಿಗೆ ಪ್ರಥಮ ವರ್ಷದ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

### ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಲಿಬ್.ಐ.ಎಸ್‌ಸಿ.
- ಬಿ.ಬಿ.ಎ. (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್)
- ಬಿ.ಎಸ್‌ಸಿ (ಸಂಯೋಜನೆಗಳು)
(• PCM • PMCs • BcBZ • CBZ • BcBMi • BcMiFs • CBMi • CZEs • BcZEs)
[• P-Physics • C-Chemistry • M-Mathematics • Cs-Computer Science • B-Botany • Mi-Microbiology • Bc-Biochemistry • Z-Zoology • Es-Environmental Science • Fs-Food Science & Nutrition]
- ಬಿ.ಎಸ್‌ಸಿ – ಹೋಮ್ ಸೈನ್ಸ್
- ಬಿ.ಎಸ್‌ಸಿ – ಇನ್‌ಫರ್‌ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

### ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

**• ಎಂ.ಎ.**

• ಕನ್ನಡ • ಇಂಗ್ಲಿಷ್ • ಹಿಂದಿ • ತೆಲುಗು • ಉರ್ದು • ಸಂಸ್ಕೃತ • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ

**• ಎಂ.ಬಿ.ಎ.** (ಪ್ರವೇಶ ಪರೀಕ್ಷೆ ಇರುವುದಿಲ್ಲ)

ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೋರೇಟ್ ಲಾ • ಇನ್‌ಫರ್‌ಮೇಷನ್ ಟೆಕ್ನಾಲಜಿ

**• ಎಂ.ಕಾಂ.** ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್

**• ಎಂ.ಲಿಬ್.ಐ.ಎಸ್‌ಸಿ.**

**• ಎಂ.ಎಸ್‌ಸಿ.**

• ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಕಂಪ್ಯೂಟರ್ ಸೈನ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ ಸೈನ್ಸ್ & ನ್ಯೂಟ್ರಿಷನ್ • ಮಾಹಿತಿ ತಂತ್ರಜ್ಞಾನ

### ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)


• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

### ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್

### ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)

• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಇಂಗ್ಲೀಷ್, ಎಂಪ್ಲಾಯ್‌ಮೆಂಟ್ ಅಂಡ್ ಎಂಟರ್‌ಪ್ರೆನ್ಯೂರ್‌ಶಿಪ್



### ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು, ಕರ್ನಾಟಕ ರಾಜ್ಯದಲ್ಲಿ, ಮುಕ್ತ ದೂರ ಶಿಕ್ಷಣ (ಒ.ಡಿ.ಎಲ್) ವಿಧಾನದಲ್ಲಿ ಉನ್ನತ ಶಿಕ್ಷಣವನ್ನು ಅಧಿಕೃತವಾಗಿ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿದೆ.

ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳೂ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ (ಯು.ಜಿ.ಸಿ), ನವದೆಹಲಿಯ ಮಾನ್ಯತೆ ಪಡೆದಿವೆ.

(ಅಧಿಸೂಚನೆ ಸಂಖ್ಯೆ: F.No.:1-6/2018 (DEB-1) ದಿನಾಂಕ: 14.08.2018 & 03.10.2018 ಮತ್ತು ಸಂಖ್ಯೆ: F.No.:1-5/2021 (DEB-1) ದಿನಾಂಕ: 26.08.2021)

ಎಂ.ಬಿ.ಎ. ಶೈಕ್ಷಣಿಕ ಕಾರ್ಯಕ್ರಮವು ಎಐಸಿಟಿಇ, ನವದೆಹಲಿಯಿಂದ ಅಂಗೀಕೃತಗೊಂಡಿದೆ (ಅಧಿಸೂಚನೆ ಸಂಖ್ಯೆ: F.No.: South:West/2021–22/1:9508626111 ದಿನಾಂಕ: 15.07.2021)

**ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :**

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

**ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ**

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರದಲ್ಲಿ ಖುದ್ದಾಗಿ ಪ್ರವೇಶಾತಿಯನ್ನು ಪಡೆಯಬಹುದು. ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: **www.ksoumysuru.ac.in** ನ್ನು ವೀಕ್ಷಿಸುವುದು ಅಥವಾ ತಮ್ಮ ಆಯ್ಕೆಯ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಭೇಟಿ ಮಾಡಬಹುದು. ಪ್ರವೇಶ ಸಮಾಲೋಚನೆಗೆ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಪ್ರಾದೇಶಿಕ ಕೇಂದ್ರ / ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ಪ್ರವೇಶ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗದ ಅರ್ಹ ಅಭ್ಯರ್ಥಿಗಳು ಪ್ರವೇಶಾತಿ ಪ್ರಕ್ರಿಯೆ ಶುಲ್ಕ, ಕೌಶಲ್ಯಾಭಿವೃದ್ಧಿ ಶುಲ್ಕ ಮತ್ತು ಅಲ್ಯುಮಿನಿ ಶುಲ್ಕ ಇವುಗಳನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯ ಷರತ್ತಿಗೊಳಪಟ್ಟು, ಶುಲ್ಕ ರಹಿತ ಪ್ರವೇಶಾತಿಯನ್ನು ಪಡೆಯಬಹುದು. ಅಗತ್ಯ ದಾಖಲೆಗಳನ್ನು ಸಮಾಜ ಕಲ್ಯಾಣ ಇಲಾಖೆಯ ಪೋರ್ಟಲ್‌ನಲ್ಲಿ **https://ssp.postmatric.karnataka.gov.in** ವಿವರಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಿ, ದಾಖಲಾತಿಗಳನ್ನು ವಿವಿ ನಿಲಯಕ್ಕೆ ಸಲ್ಲಿಸುವುದು. ವಿದ್ಯಾರ್ಥಿ ವೇತನವು ನೇರವಾಗಿ ಡಿಬಿಟಿ ಮೂಲಕ ವಿದ್ಯಾರ್ಥಿಗಳ ಖಾತೆಗೆ ಜಮೆ ಆಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿ ವೇತನ ಮಂಜೂರಾದ ಏಳು ದಿನಗಳ ಒಳಗೆ ಅಥವಾ ಪರೀಕ್ಷೆ ಅಧಿಸೂಚನೆ ಪ್ರಕಟಿಸುವ ಮುಂಚಿತವಾಗಿ ಇವೆರಡರಲ್ಲಿ ಯಾವುದೇ ಮುಂಚೆ ಘಟಿಸುವುದೋ, ಅದರ ಒಳಗೆ ಪ್ರವೇಶಾತಿ ಶುಲ್ಕವನ್ನು ವಿವಿ ನಿಲಯಕ್ಕೆ ಜಮೆ ಮಾಡಿ ವಿವರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಪ್ರವೇಶಾತಿಯನ್ನು ರದ್ದುಗೊಳಿಸಲಾಗುವುದು.
   - ಓಬಿಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿಯನ್ನು ಪಡೆಯಬಹುದು.
   - ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿಯನ್ನು ಪಡೆಯಬಹುದು.
   - ತೃತೀಯ ಲಿಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.
   - ಸರ್ಕಾರವು ಆಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (ಬಿ.ಎಡ್. ಮತ್ತು ಎಂ.ಬಿ.ಎ. ಹೊರೆತುಪಡಿಸಿ).
   - ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ/ಮಕ್ಕಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 25% ರಷ್ಟು ರಿಯಾಯಿತಿ ಇರುತ್ತದೆ.
   - ಕೆಎಸ್‌ಆರ್‌ಟಿಸಿ/ಬಿಎಂಟಿಸಿ/ಎನ್‌ಡಬ್ಲ್ಯೂಕೆಆರ್‌ಟಿಸಿ/ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋದನಾ ಶುಲ್ಕದಲ್ಲಿ ಶೇಕಡ 25% ರಷ್ಟು ರಿಯಾಯಿತಿ ಇರುತ್ತದೆ.
3. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ
   - ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಫೆಂಡ್ ಅವಕಾಶಗಳಿರುತ್ತವೆ.
   - ಬೋಧನಾ ಸಾಮಗ್ರಿಗಳ ಸಾಫ್ಟ್ ಪ್ರತಿ ಪಡೆಯುವ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಮಾತ್ರ ಶೇಕಡ 15% ರಷ್ಟು ರಿಯಾಯಿತಿಯನ್ನು ನೀಡಲಾಗುವುದು.

### ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ) :** ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ(ಕ) 0821–2500981, ಮೊ: 83107 15545 / 97313 92627 / 98440 10407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, ಬಾಪೂಜಿನಗರ, ಬೆಂಗಳೂರು–560 026. ದೂ: 080–26603664, ಮೊಬೈಲ್: 98449 65515.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ :** ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು.ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬಸ್ಸ್ಟಾಂ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು–560 003. ದೂ: 080–23448811, ಮೊಬೈಲ್ : 97411 97921.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ :** ಆದಿತ್ಯ ಶಿಕ್ಷಣ ಸಂಸ್ಥೆ, ನಂ.12, ಕೋಗಿಲು ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ದೇವಸ್ಥಾನದ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು–560 064, ಮೊ: 98805 26439 / 90195 26439.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ಲೋರ ಬಿಸಿನೆಸ್ ಅಕಾಡೆಮಿ ಕಟ್ಟಡ, ನಂ.3/3, ಬೇಗೂರು ಮುಖ್ಯ ರಸ್ತೆ, ಹೊಂಗಸಂದ್ರ, ಬೊಮ್ಮನಹಳ್ಳಿ, ಬೆಂಗಳೂರು–560 068. ಮೊಬೈಲ್ : 94486 68880.
6. **ಬೆಳಗಾಂ ಪ್ರಾದೇಶಿಕ ಕೇಂದ್ರ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾಂ–590 010. ಮೊ: 99168 94944 / 81233 93047.
7. **ಬಳ್ಳಾರಿ ಪ್ರಾದೇಶಿಕ ಕೇಂದ್ರ :** ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊ: 89702 23247.
8. **ಚಾಮರಾಜನಗರ ಪ್ರಾದೇಶಿಕ ಕೇಂದ್ರ :** ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನುಯೆಲ್ ಕ್ರಿಶ್ಚಿಯನ್ ಸ್ಕೂಲ್ ಹತ್ತಿರ, ಚಾಮರಾಜನಗರ–571313, ಮೊ: 96323 46618.
9. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ :** ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊ: 89040 36090 / 94826 03060.
10. **ದಾವಣಗೆರೆ ಪ್ರಾದೇಶಿಕ ಕೇಂದ್ರ :** ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆ, ದಾವಣಗೆರೆ–577 004, ಮೊ: 99864 58055.
11. **ಧಾರವಾಡ ಪ್ರಾದೇಶಿಕ ಕೇಂದ್ರ :** ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ.ಸಿ.ಡಿ. ರಸ್ತೆ, ಎಲ್.ಐ.ಸಿ. ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊ: 90351 43912/78925 97159.
12. **ಹಾಸನ ಪ್ರಾದೇಶಿಕ ಕೇಂದ್ರ :** ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ. ಟಿ. ಕೊಪ್ಪಲು, ಹಾಸನ–573 118, ಮೊ: 81978 18807.
13. **ಕಲಬುರ್ಗಿ ಪ್ರಾದೇಶಿಕ ಕೇಂದ್ರ :** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106 ದೂ: 08472–265868, ಮೊ: 99167 83555.
14. **ಕಾರವಾರ ಪ್ರಾದೇಶಿಕ ಕೇಂದ್ರ :** ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301 ಮೊ: 90085 40090 / 90353 95137.
15. **ಕೋಲಾರ ಪ್ರಾದೇಶಿಕ ಕೇಂದ್ರ :** ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ಮೊ: 86188 21417.
16. **ಮಂಡ್ಯ ಪ್ರಾದೇಶಿಕ ಕೇಂದ್ರ :** # ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಹೊಳಲು ಮೇಲುಕೋಟೆ ರಸ್ತೆ, ಮಂಡ್ಯ–571 401. ಮೊ: 97419 90284.
17. **ಮಂಗಳೂರು ಪ್ರಾದೇಶಿಕ ಕೇಂದ್ರ :** ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, 3ನೇ ಮಹಡಿ, ಸಾಯಿಬಾಬಾ ಮಂದಿರದ ಸಮೀಪ, ಲೇಡಿಹಿಲ್, ಮಂಗಳೂರು–575 006, ದೂ: 0824–2454697, ಮೊ: 99450 58950 / 99721 96692.
18. **ರಾಮನಗರ ಪ್ರಾದೇಶಿಕ ಕೇಂದ್ರ :** ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562 159, ದೂ: 080–27274443, ಮೊ: 99644 95936.
19. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ :** ಅಲ್ಕೊಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367, ಮೊ: 91644 67131.
20. **ತುಮಕೂರು ಪ್ರಾದೇಶಿಕ ಕೇಂದ್ರ :** ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ತುಮಕೂರು–572 105, ಮೊ: 91088 08219, 98445 06629.
21. **ಉಡುಪಿ ಪ್ರಾದೇಶಿಕ ಕೇಂದ್ರ :** ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊ: 99725 26647/79755 10679.
22. **ಬೀದರ್ ಪ್ರಾದೇಶಿಕ ಕೇಂದ್ರ :** ಸರ್ಕಾರಿ ಪ್ರ.ದ. ಕಾಲೇಜು, ನೌಬಾದ್, ಬೀದರ್, ಮೊ: 98454 91995.
23. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ :** ಬಸವೇಶ್ವರ ಕಲಾ ಕಾಲೇಜು, ಬಿ.ವಿ.ಎಸ್. ಕ್ಯಾಂಪಸ್, ಬಾಗಲಕೋಟೆ, ದೂ: 08354–220440, ಮೊ: 88610 40975 / 73530 02301 / 97435 82257
24. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಾಥಮಿಕ ಶಾಲೆ ಕಟ್ಟಡ, ಡಿ.ಡಿ.ಪಿ.ಐ. ಕಛೇರಿ ಆವರಣ, ಮಡಿಕೇರಿ–571 201, ಕೊಡಗು ಜಿಲ್ಲೆ, ಮೊ: 80733 42310 / 76187 63654 / 87625 51115

**ಪ್ರವೇಶಾತಿಯ ಅಂತಿಮ ದಿನಾಂಕ :– 15-11-2022**

ತರಗತಿ ಹಾಗೂ ಪರೀಕ್ಷೆಗಳನ್ನು ವಿವಿಧ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು